
# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

# ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ




ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಮೈಸೂರು

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ.

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ.

ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ

ಇವರ ಸಹಯೋಗದಲ್ಲಿ

# ತರಬೇತಿ ಸಾಹಿತ್ಯ ಕೈಪಿಡಿ

## "ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ"

ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು

2023–24

# ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ

## ಸಾಹಿತ್ಯ ರಚನಾ ತಂಡ

### ಪರಿಕಲ್ಪನೆ

**ಡಾ. ಬಿ. ಕೆ. ಎಸ್. ವರ್ಧನ್**
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ-ಕರ್ನಾಟಕ (ಸಿಸ್ಲೆಪ್),
ಧಾರವಾಡ.

### ಮಾರ್ಗದರ್ಶನ

**ಶ್ರೀ ಸಿ. ಆರ್. ನಾಗರಾಜಯ್ಯ,**
ಉಪನಿರ್ದೇಶಕರು (ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ವಸಂತಮಹಲ್, ಮೈಸೂರು

### ಸಾಹಿತ್ಯ ರಚನಾ ತಂಡ

**ಶ್ರೀ ರವಿಪ್ರಸನ್ನ ಡಿ.ಎನ್,**
ಹಿರಿಯ ಉಪನ್ಯಾಸಕರು
ಡಯಟ್, ಮೈಸೂರು

**ಶ್ರೀಮತಿ ನಿರ್ಮಲ ಎಂ. ವಿ.,**
ಉಪನ್ಯಾಸಕರು, ಡಯಟ್, ಮೈಸೂರು

**ಶ್ರೀ ತಮ್ಮಯ್ಯ ಆರ್,**
ಉಪನ್ಯಾಸಕರು, ಡಯಟ್, ಮೈಸೂರು

**ಶ್ರೀಮತಿ ಗಾಯತ್ರಿ ಎಂ,**
ಉಪನ್ಯಾಸಕರು, ಡಯಟ್, ಮೈಸೂರು

**ಶ್ರೀಮತಿ ಜಯಂತಿ ಎನ್,**
ಉಪನ್ಯಾಸಕರು, ಡಯಟ್, ಮೈಸೂರು

**ಶ್ರೀಮತಿ ಶಾರದ ಹೆಚ್.ಎಸ್,**
ಸ.ಶಿ, ಸರ್ಕಾರಿ ಪ್ರೌಢಶಾಲೆ,
ಎಂ ಸಿ ತಳಲು, ಹೆಚ್.ಡಿ.ಕೋಟೆ ತಾಲ್ಲೂಕು

**ಶ್ರೀಮತಿ ಆಶಾ ಎಸ್,**
ಬೋಧಕರು, ಡಯಟ್, ಮೈಸೂರು

**ಶ್ರೀ ಮಹೇಶ್ ಬಾಬು ಹೆಚ್ ಆರ್,**
ಸಿ.ಆರ್.ಪಿ ವರುಣ, ಮೈಸೂರು (ಗ್ರಾ)

### ಎಸ್.ಎಲ್.ಎ - ಸಿಸ್ಲೆಪ್ ತಂಡ

**ಶ್ರೀಮತಿ ಎ.ಎನ್ ಶೀಲಾ**
ಹಿರಿಯ ಸಹಾಯಕ ನಿರ್ದೇಶಕರು

**ಶ್ರೀಮತಿ ಸ್ವರೂಪಶೀಲಾ ಹೆಚ್ ವಿ**
ಉಪನ್ಯಾಸಕರು

**ಶ್ರೀ ಮಹಾವೀರ ಹಂಚಿನಾಳ**
ಸಹಾಯಕ ನಿರ್ದೇಶಕರು

**ಡಾ. ಪೂರ್ಣಿಮಾ ಮುಕ್ಕುಂದಿ**
ಉಪನ್ಯಾಸಕರು

**ಡಾ. ಎನ್ ಹೆಚ್ ಪೂಜಾರ**
ಸಹಾಯಕ ನಿರ್ದೇಶಕರು

**ಶ್ರೀಮತಿ ದೇವಿರಮ್ಮ ಎಸ್**
ಉಪನ್ಯಾಸಕರು

# ನಿರ್ದೇಶಕರ ಆಶಯ ನುಡಿಗಳು



ಡಾ.ಬಿ.ಕೆ.ಎಸ್.ವರ್ಧನ್
ನಿರ್ದೇಶಕರು
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು
ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ.

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ, ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

2023–24 ನೇ ಸಾಲಿನಲ್ಲಿ ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL), ದೆಹಲಿ ಇವರು ಮಾಡ್ಯೂಲ್‌ಗಳ ರಚನೆಗಾಗಿ ರೂ. 65000/– ಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ

ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಅಧಿಕಾರಿಗಳಿಗೆ ನಾಯಕತ್ವ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅವಶ್ಯವಿರುವ ಹನ್ನೆರೆಡು ವಿಷಯಗಳ ಮಾಡ್ಯೂಲ್‌ಗಳನ್ನು ರಚಿಸಲು ನಿರ್ಧರಿಸಲಾಯಿತು.ಈ ಮಾಡ್ಯೂಲ್‌ಗಳ ರಚನೆಗಾಗಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ, ಇಳಕಲ್, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮೀಣ, ಮೈಸೂರು, ಕೋಲಾರ ಡಯಟ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಡಯಟ್‌ಗೆ ತಲಾ ರೂ.5000/– ಗಳನ್ನು ಬಿಡುಗಡೆ ಮಾಡಿ, ಒಂದೊಂದು ವಿಷಯದ ತರಬೇತಿ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ನೀಡಲಾಯಿತು. ಅವರಿಂದ ಸಿದ್ಧಪಡಿಸಲಾದ ಮಾಡ್ಯೂಲ್‌ಗಳನ್ನು ಸಿಸ್ಲೆಪ್‌ನ ಅಧಿಕಾರಿವೃಂದ, ವಿಷಯ ಪರಿಣಿತರು ಹಾಗೂ ಸಂಬಂಧಿಸಿದ ಡಯಟ್‌ನ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಪುನರ್ ಪರಿಶೀಲಿಸುವ ಮೂಲಕ ಇನ್ನಷ್ಟು ಉತ್ತಮೀಕರಿಸಿ ಅಂತಿಮಗೊಳಿಸಲಾಯಿತು.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

25, ಮಾರ್ಚ್, 2025

(ಡಾ.ಬಿ.ಕೆ.ಎಸ್.ವರ್ಧನ್)

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆಯ ಪರಿಚಯ

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (State Institute of School Leadership Educational Planning and Management) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ' ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



### ಸಂಸ್ಥೆಯ ದೂರದರ್ಶಿತ್ವ:

"ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ"

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ'ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management,Administration and Training)ನ್ನು ಸ್ಥಾಪನೆ ಮಾಡಲು ಶಿಫಾರಸ್ಸು

ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:

- ➔ ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ➔ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ➔ ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ➔ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ➔ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು.

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT)ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು. ಕರ್ನಾಟಕ ರಾಜ್ಯವು ತನ್ನ ಅನುಭವಗಳು,

ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (SISLEP) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

## ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- ➔ **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.
- ➔ **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ :** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು : ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು, ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- ➔ **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.
- ➔ **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

## ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

## ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ

ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶೈಕ್ಷಣಿಕ ನಾಯಕರ ಪಾತ್ರ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ'ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ ಆಡಳಿತಾತ್ಮಕ ತರಬೇತಿ ಹಾಗೂ ಮೂರು ದಿನಗಳ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ.ಸಿ.ಎಸ್.ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ,

ಕೆ.ಟಿ.ಪಿ.ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ.

ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ

ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ವಿಶ್ಲೇಷಣೆ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

“ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,

ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.


ಮಿಕ್ಕುದೆಲ್ಲಂ ಅವಿದ್ಯೆ”

–– ರಾಷ್ಟ್ರಕವಿ ಕುವೆಂಪು.

# ಪರಿವಿಡಿ


| ಕ್ರ.ಸಂ | ಅಧ್ಯಾಯಗಳು | ವಿವರ | ಪುಟಸಂಖ್ಯೆ |
|---|---|---|---|
| 1 | ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶ ವಿಶ್ಲೇಷಣೆ: ಮೂಲ ಕಲ್ಪನೆಗಳು | 1.1 ಮಾಡ್ಯೂಲ್‌ನ ಪರಿಚಯ<br>1.2 ಮಾಡ್ಯೂಲ್‌ನ ಉದ್ದೇಶಗಳು<br>1.3 ವ್ಯಾಪ್ತಿ<br>1.4 ಮೂಲ ಕಲ್ಪನೆಗಳು | 1 |
| 2 | ಶೈಕ್ಷಣಿಕ ಸಮೀಕ್ಷೆಗಳು | 2.1 ಆಶಯ<br>2.2 ಶೈಕ್ಷಣಿಕ ಸಮೀಕ್ಷೆಗಳ ಗುರಿಗಳು<br>2.3 ಶೈಕ್ಷಣಿಕ ಸಮೀಕ್ಷೆಗಳ ಉದ್ದೇಶಗಳು<br>2.4 ಶೈಕ್ಷಣಿಕ ಸಮೀಕೆಗಳ ವ್ಯಾಪ್ತಿ ಮತ್ತು ಪ್ರಾಮುಖ್ಯತೆ | 3 |
| 3 | ಶೈಕ್ಷಣಿಕ ಸಮೀಕ್ಷೆಗಳು: ಒಂದು ಅವಲೋಕನ | 3.1 ಶೈಕ್ಷಣಿಕ ಸಮೀಕ್ಷೆಗಳು ನಡೆದು ಬಂದ ಹಾದಿ<br>3.2 ಶೈಕ್ಷಣಿಕ ಸಮೀಕ್ಷೆಗಳ ಹಿನ್ನೆಲೆ ಮತ್ತು ಅವಲೋಕನ<br>3.3 ಪ್ರಸ್ತುತ ಕೈಗೊಂಡಿರುವ ಶೈಕ್ಷಣಿಕ ಸಮೀಕ್ಷೆಗಳ ಅವಲೋಕನ<br>3.4 ಶೈಕ್ಷಣಿಕ ಸಮೀಕ್ಷೆಗಳ ಅಧ್ಯಯನ ವಿಧಾನಗಳು<br>3.5 ಶೈಕ್ಷಣಿಕ ಸಮೀಕ್ಷೆಗಳನ್ನು ಕೈಗೊಳ್ಳುವ ತಂತ್ರಗಳು | 9 |
| 4 | ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ | 4.1 ಶೈಕ್ಷಣಿಕ ಸಮೀಕ್ಷೆಯಲ್ಲಿ ದತ್ತಾಂಶ ಸಂಗ್ರಹಣೆಯ ವಿಧಾನಗಳು<br>4.2 ದತ್ತಾಂಶ ಸಂಗ್ರಹಣೆಯ ಸಾಧನ ಮತ್ತು ತಂತ್ರಗಳು<br>4.3 ದತ್ತಾಂಶ ಸಂಗ್ರಹಣೆಯ ಕ್ರೋಢೀಕರಣ ಮತ್ತು ವಿಶ್ಲೇಷಣೆ<br>4.4 ದತ್ತಾಂಶಗಳನ್ನು ಪ್ರತಿನಿಧಿಸುವುದು<br>4.5 ದತ್ತಾಂಶಗಳ ಸಂಗ್ರಹಣೆಯಲ್ಲಿ ತಂತ್ರಜ್ಞಾನದ ಬಳಕೆ | 18 |
| 5 | ಶೈಕ್ಷಣಿಕ ಸಮೀಕ್ಷೆಗಳ ಅನ್ವಯಗಳು | 5.1 ಸಮೀಕ್ಷೆಗಳನ್ನು ಕೈಗೊಳ್ಳಬಹುದಾದ ಕ್ಷೇತ್ರಗಳು<br>5.2 ಸಾಧನಾ ಸಮೀಕ್ಷೆಗಳ ಅನ್ವಯಗಳು<br>5.3 ಸಮೀಕ್ಷೆಯ ವರದಿಯನ್ನು ತಯಾರಿಸುವುದು<br>5.4 ಸಮೀಕ್ಷೆಯ ಫಲಿತಾಂಶಗಳು<br>5.5 ಪರಿಸಮಾಪ್ತಿ<br>5.6 ಮೌಲ್ಯಮಾಪನ ಪ್ರಶ್ನೆಗಳು | 33 |
| 6 | ಆಕರ ಗ್ರಂಥಗಳು | ಮಾಡ್ಯೂಲ್ ರಚನೆಗೆ ಬಳಸಿಕೊಂಡ ಆಕರಗಳು<br>ಪ್ರಕ್ರಿಯೆ | 42 |

# ಅಧ್ಯಾಯ 1 ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶ ವಿಶ್ಲೇಷಣೆ ಮೂಲ ಕಲ್ಪನೆಗಳು



## 1.1 ಮಾಡ್ಯೂಲ್ ಪರಿಚಯ:

ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಬೆಳವಣಿಗೆಗಳು, ಬದಲಾವಣೆಗಳು ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡುವಲ್ಲಿ ಶೈಕ್ಷಣಿಕ ಸಮೀಕ್ಷೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಂತಹ ಸಮೀಕ್ಷೆಗಳು ಶಿಕ್ಷಣದ ಗುಣಮಟ್ಟವನ್ನು ತಿಳಿಯಲು, ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಹೆಚ್ಚಿಸಲು, ಮಕ್ಕಳ ಕಲಿಕೆಯ ಮಟ್ಟವನ್ನು ಗುರುತಿಸಲು ಮತ್ತು ವಿವಿಧ ಶೈಕ್ಷಣಿಕ ಸ್ತರಗಳ ಕಾರ್ಯಚಟುವಟಿಕೆಗಳನ್ನು ತಿಳಿಯಲು ಸಹಾಯ ಮಾಡುತ್ತವೆ. ಅಷ್ಟೇ ಅಲ್ಲದೇ, ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬಹುದು. ಸಮೀಕ್ಷೆಗಳು ವಿದ್ಯಾರ್ಥಿಗಳ ಕಲಿಕಾ ಕೊರತೆಗಳನ್ನು ಗುರುತಿಸಲು ಮತ್ತು ಶೈಕ್ಷಣಿಕ ನೀತಿ ನಿಯಮಗಳನ್ನು ರೂಪಿಸಲು ಒಳನೋಟಗಳನ್ನು ನೀಡುತ್ತವೆ. ಸಮೀಕ್ಷೆಗಳನ್ನು ಕೈಗೊಳ್ಳುವಾಗ ವಿವಿಧ ವಿಧಾನ ಮತ್ತು ತಂತ್ರಗಳಿಂದ ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಬೇಕಾಗುತ್ತದೆ. ದತ್ತಾಂಶಗಳ ವಿಶ್ಲೇಷಣೆಯನ್ನು ಮಾಡುವುದರಿಂದ ಸಮೀಕ್ಷಾ ವಿಷಯದ ನೈಜ ಸ್ಥಿತಿಗತಿಗಳ ಬಗ್ಗೆ ಅರಿವಾಗುವುದಲ್ಲದೇ, ಉತ್ತಮಪಡಿಸಬೇಕಾದ ಕ್ಷೇತ್ರಗಳ ಕುರಿತು ಮಾಹಿತಿಯೂ ದೊರೆಯುತ್ತದೆ. ಆದ್ದರಿಂದ ದತ್ತಾಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಯು ಯಾವುದೇ ಸಮೀಕ್ಷೆಗಳ ಅವಿಭಾಜ್ಯ ಅಂಗವಾಗಿರುತ್ತದೆ. ಸಮೀಕ್ಷೆಗಳನ್ನು ಶಾಲಾ ಹಂತ, ಕ್ಲಸ್ಟರ್ ಹಂತ, ತಾಲ್ಲೂಕು ಹಂತ, ಜಿಲ್ಲಾ ಹಂತಗಳಷ್ಟೇ ಅಲ್ಲದೇ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿಯೂ ಕೈಗೊಳ್ಳಲಾಗುತ್ತದೆ.

ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಗುರುತಿಸಲು, ರಾಷ್ಟ್ರಮಟ್ಟದಲ್ಲಿ ಕಲಿಕಾ ಸಾಧನಾ ಸಮೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಸಮೀಕ್ಷೆಗಳನ್ನು ಯಾದೃಚ್ಛಿಕವಾಗಿ ಆಯ್ದ ಶಾಲೆಗಳಲ್ಲಿ ಕೈಗೊಳ್ಳಲಾಗುತ್ತದೆ. ಶೈಕ್ಷಣಿಕ ಸಮೀಕ್ಷೆಗಳ ಅಡಿಯಲ್ಲಿ ನಡೆಸಲಾಗುವ ಇಂತಹ ಸಾಧನಾ ಸಮೀಕ್ಷೆಗಳ ಫಲಿತಾಂಶವನ್ನು ನೀಡುವಾಗ ವಿದ್ಯಾರ್ಥಿವಾರು ಉತ್ತೀರ್ಣ/ಅನುತ್ತೀರ್ಣ ಎಂಬ ಫಲಿತಾಂಶ ನೀಡುವುದಿಲ್ಲ. ಆದರೆ ಫಲಿತಾಂಶವನ್ನು ವಿವಿಧ ಅಂಶವಾರು ನೀಡಲಾಗುತ್ತದೆ. ಈ ಸಮೀಕ್ಷೆಗಳಿಂದ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ತರಗತಿವಾರು ಮತ್ತು ವಿಷಯವಾರು ಆಯ್ದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಮತ್ತು ಸಂಬಂಧಿತ ಶಾಲೆಗಳ ಶೈಕ್ಷಣಿಕ ಪ್ರಗತಿ ಮತ್ತು ಮೂಲಸೌಕರ್ಯಗಳ ಚಿತ್ರಣ ದೊರೆಯುತ್ತದೆ. ಅಲ್ಲದೇ ಮುಂದಿನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಯೋಜನೆಗಳನ್ನು ರೂಪಿಸಲು ಮಾರ್ಗದರ್ಶನ ಮಾಡುತ್ತವೆ. ಹೀಗೆಂದ ಮಾತ್ರಕ್ಕೆ ಸಮೀಕ್ಷೆಗಳು ಲಿಖಿತ ರೂಪದಲ್ಲಿಯೇ ಇರಬೇಕಾಗಿಲ್ಲ. ಅಭಿಪ್ರಾಯಗಳನ್ನು ಸಂಗ್ರಹಿಸುವುದು, ಮಾಹಿತಿಗಳನ್ನು ಕಲೆಹಾಕುವುದು, ಕ್ಷೇತ್ರಭೇಟಿಗಳನ್ನು ಕೈಗೊಳ್ಳುವುದನ್ನೂ ಸಹ ಇವು ಒಳಗೊಂಡಿರುತ್ತವೆ. ವ್ಯವಸ್ಥಿತವಾಗಿ ಕೈಗೊಳ್ಳುವ ಸಮೀಕ್ಷೆಗಳು ಮತ್ತು ದತ್ತಾಂಶ ವಿಶ್ಲೇಷಣೆಗಳು ಶಾಲಾ ಹಂತದಲ್ಲಿನ ಸಣ್ಣ-ಪುಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದರಿಂದ ಹಿಡಿದು, ರಾಷ್ಟ್ರಮಟ್ಟದಲ್ಲಿ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ರೂಪಿಸುವವರೆಗೆ ಪ್ರತಿಯೊಂದು ಹಂತದಲ್ಲಿಯೂ ಸಹಾಯ ಮಾಡುತ್ತವೆ.

ಈ ಮಾಡ್ಯೂಲ್‌ನಲ್ಲಿ ಶೈಕ್ಷಣಿಕ ಸಮೀಕ್ಷೆಗಳ ಅರ್ಥ, ಪ್ರಾಮುಖ್ಯತೆ, ಗುರಿಗಳು, ಉದ್ದೇಶಗಳು, ಸಮೀಕ್ಷೆ ಕೈಗೊಳ್ಳುವ ವಿಧಾನಗಳು ಮತ್ತು ತಂತ್ರಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಹಾಗೆಯೇ ದತ್ತಾಂಶ ಸಂಗ್ರಹಣೆಗಾಗಿ ಬಳಸಬಹುದಾದ ಸಾಧನ ಮತ್ತು ತಂತ್ರಗಳು, ದತ್ತಾಂಶಗಳ ಕ್ರೋಢೀಕರಣ, ವಿಶ್ಲೇಷಣೆ ಮತ್ತು ತಂತ್ರಜ್ಞಾನದ ಬಳಕೆಯನ್ನು ಪರಿಚಯಿಸಲಾಗಿದೆ. ವಿವಿಧ ಹಂತಗಳಲ್ಲಿ ಸಮೀಕ್ಷೆಗಳನ್ನು ಹೇಗೆ ನಡೆಸಬಹುದು? ಸಮೀಕ್ಷೆಗಳಿಂದ ಶಾಲಾ ಶಿಕ್ಷಕರಿಗೆ, ಇಲಾಖೆಯ ಅನುಪಾಲನಾ ಅಧಿಕಾರಿಗಳಿಗೆ, ಯೋಜನಾಧಿಕಾರಿಗಳಿಗೆ ಮತ್ತು ಭಾಗೀದಾರರಿಗೆ ಉಂಟಾಗುವ ಪ್ರಯೋಜನಗಳೇನು? ಕೈಗೊಂಡ ಸಮೀಕ್ಷೆಯ ಫಲಿತಗಳನ್ನು ಸ್ಥಳೀಯ ಸನ್ನಿವೇಶಗಳಿಗೆ ಅನ್ವಯಿಸಿಕೊಂಡು, ಯೋಜನೆಗಳನ್ನು ಹೇಗೆ ರೂಪಿಸಿಕೊಳ್ಳಬಹುದು? ಎಂಬ ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಈ ಮಾಡ್ಯೂಲ್ ಒಟ್ಟು 5 ಅಧ್ಯಾಯಗಳನ್ನು ಒಳಗೊಂಡಿದ್ದು, ಪ್ರತೀ ಅಧ್ಯಾಯದಲ್ಲಿ ಗುಂಪು ಚರ್ಚೆ, ಚಿಂತನಶೀಲ ಪ್ರಶ್ನೆಗಳು, ಮೌಲ್ಯಮಾಪನ ಪ್ರಶ್ನೆಗಳು ಹಾಗೂ ಚಟುವಟಿಕೆಗಳಿವೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಲಿಂಕ್‌ಗಳು, ಆಕರ ಗ್ರಂಥಗಳು, ಜಾಲತಾಣಗಳ ವಿವರಗಳನ್ನು ನೀಡಲಾಗಿದೆ. ಒಟ್ಟಾರೆಯಾಗಿ ಈ ಮಾಡ್ಯೂಲ್‌ನ ಅಧ್ಯಯನವು ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆಯ ಬಗ್ಗೆ ಸ್ಪಷ್ಟ ಪರಿಕಲ್ಪನೆ ಮೂಡಿಸುವುದಲ್ಲದೇ, ಶಿಕ್ಷಕರು, ವಿವಿಧ ಹಂತದ ಅಧಿಕಾರಿಗಳು

ಮತ್ತು ಭಾಗೀದಾರರು ಸ್ವತಃ ಸಮೀಕ್ಷೆಗಳನ್ನು ಕೈಗೊಂಡು, ಅದರ ಫಲಿತಗಳ ಪ್ರಯೋಜನವನ್ನು ಪಡೆದುಕೊಳ್ಳಲು ಪ್ರೇರಣೆ ನೀಡುತ್ತದೆ.

## 1.2 ಮಾಡ್ಯೂಲ್‌ನ ಉದ್ದೇಶಗಳು:

- ➔ ಶೈಕ್ಷಣಿಕ ಸಮೀಕ್ಷೆಗಳ ಅಗತ್ಯತೆಗಳು ಮತ್ತು ಪ್ರಾಮುಖ್ಯತೆಯನ್ನು ಗುರುತಿಸುವರು.
- ➔ ಶೈಕ್ಷಣಿಕ ಸಮೀಕ್ಷೆಗಳ ವಿವಿಧ ವಿಧಾನಗಳ ಮಹತ್ವ ಮತ್ತು ಉಪಯುಕ್ತತೆಯನ್ನು ತಿಳಿಯುವರು.
- ➔ ಶೈಕ್ಷಣಿಕ ಸಮೀಕ್ಷೆಗಳನ್ನು ಕೈಗೊಳ್ಳುವ ಕೌಶಲಗಳನ್ನು ರೂಢಿಸಿಕೊಳ್ಳುವರು.
- ➔ ಶೈಕ್ಷಣಿಕ ಸಮೀಕ್ಷೆಗಳಲ್ಲಿ ದತ್ತಾಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ನಿಹಿತಾರ್ಥಗಳನ್ನು ಸೆಳೆದು ತಮ್ಮ ಕ್ಷೇತ್ರಗಳಿಗೆ ಅನ್ವಯಿಸಿಕೊಳ್ಳುವರು.

## 1.3 ವ್ಯಾಪ್ತಿ:


ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ ಈ ಮಾಡ್ಯೂಲ್ ಶಾಲಾ ಶಿಕ್ಷಕರು, ಮುಖ್ಯ ಶಿಕ್ಷಕರು, ಶೈಕ್ಷಣಿಕ ಆಡಳಿತಗಾರರು, ಅನುಪಾಲನಾ ಅಧಿಕಾರಿಗಳು, ಮೇಲ್ವಿಚಾರಣೆ ಮತ್ತು ಅನುಷ್ಠಾನಾಧಿಕಾರಿಗಳು ಹಾಗೂ ಶಿಕ್ಷಣ ಕ್ಷೇತ್ರದ ಎಲ್ಲಾ ಭಾಗೀದಾರರನ್ನು ಒಳಗೊಳ್ಳುತ್ತದೆ.

## 1.4 ಮೂಲ ಕಲ್ಪನೆಗಳು:

ಸಮೀಕ್ಷೆಗಳು: ಒಂದು ನಿರ್ದಿಷ್ಟ ಜನಸಮೂಹದಿಂದ ಮಾಹಿತಿಯನ್ನು ಮತ್ತು ದತ್ತಾಂಶಗಳನ್ನು ಸಂಗ್ರಹಿಸುವ ಒಂದು ವ್ಯವಸ್ಥಿತವಾದ ಸಾಧನ.

| | |
|---|---|
| **ಶೈಕ್ಷಣಿಕ ಸಮೀಕ್ಷೆ:** | ನಿರ್ದಿಷ್ಟವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೈಗೊಳ್ಳುವ ಸಮೀಕ್ಷೆಗಳು. |
| **ಸಾಧನಾ ಸಮೀಕ್ಷೆ:** | ವಿದ್ಯಾರ್ಥಿಗಳ ಕಲಿಕೆಯ ಫಲಗಳನ್ನು, ಕಲಿಕೆಯ ಸಾಮರ್ಥ್ಯಗಳನ್ನು ಮಾಪನ ಮಾಡುವ ಶೈಕ್ಷಣಿಕ ಸಮೀಕ್ಷೆ |
| **ದತ್ತಾಂಶಗಳು:** | ಜನಸಮೂಹದಿಂದ ಪಡೆಯುವ ಮಾಹಿತಿ |
| **ಪ್ರಾಥಮಿಕ ದತ್ತಾಂಶ:** | ಪ್ರತಿಸ್ಪಂದಕರಿಂದ ನೇರವಾಗಿ ಸಂಗ್ರಹಿಸುವ ಮಾಹಿತಿ |
| **ದ್ವಿತೀಯಕ ದತ್ತಾಂಶ:** | ಸಂಗ್ರಹಿತ ದತ್ತಾಂಶದಿಂದ ಸಂಗ್ರಹಿಸುವ ಮಾಹಿತಿ |

# ಅಧ್ಯಾಯ 2 ಶೈಕ್ಷಣಿಕ ಸಮೀಕ್ಷೆಗಳು



**ಕಲಿಕಾ ಫಲಗಳು:**

- ➔ ಶೈಕ್ಷಣಿಕ ಸಮೀಕ್ಷೆಗಳ ಅರ್ಥವನ್ನು ತಿಳಿಯುವರು.
- ➔ ಶೈಕ್ಷಣಿಕ ಸಮೀಕ್ಷೆಗಳ ಗುರಿಗಳನ್ನು ನಿರೂಪಿಸುವರು.
- ➔ ಶೈಕ್ಷಣಿಕ ಸಮೀಕ್ಷೆಗಳ ಉದ್ದೇಶಗಳನ್ನು ಪಟ್ಟಿಮಾಡುವರು.
- ➔ ಶೈಕ್ಷಣಿಕ ಸಮೀಕ್ಷೆಗಳ ಪ್ರಾಮುಖ್ಯತೆ ಮತ್ತು ವ್ಯಾಪ್ತಿಯನ್ನು ಗುರುತಿಸುವರು.

## 2.1 ಆಶಯ:

ಶೈಕ್ಷಣಿಕ ಸಮೀಕ್ಷೆಗಳು: ಒಂದು ನಿರ್ದಿಷ್ಟ ಜನಸಮೂಹದಿಂದ ಮಾಹಿತಿಯನ್ನು ಮತ್ತು ದತ್ತಾಂಶಗಳನ್ನು ಸಂಗ್ರಹಿಸುವ ಹಾಗೂ ವಿಶ್ಲೇಷಿಸುವ ಒಂದು ವ್ಯವಸ್ಥಿತವಾದ ಸಾಧನವನ್ನು ಸಮೀಕ್ಷೆ ಎನ್ನಲಾಗುತ್ತದೆ. ಸಂಶೋಧನೆಗಳನ್ನು ಮಾಡಲು, ಮಾರುಕಟ್ಟೆಯ ಪ್ರವೃತ್ತಿಗಳನ್ನು ವಿಶ್ಲೇಷಿಸಲು, ಅಭಿಪ್ರಾಯಗಳನ್ನು ಸಂಗ್ರಹಿಸಲು ಮತ್ತು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ದತ್ತಾಂಶಗಳನ್ನು ಸಂಗ್ರಹಿಸಲು ಸಮೀಕ್ಷೆಗಳನ್ನು ಕೈಗೊಳ್ಳಲಾಗುತ್ತದೆ. ಶೈಕ್ಷಣಿಕ ಸಮೀಕ್ಷೆಗಳು ಎಂದರೆ, ಹೆಸರೇ ಹೇಳುವಂತೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸಮೀಕ್ಷೆಗಳಾಗಿದ್ದು, ವಿದ್ಯಾರ್ಥಿಗಳು, ಶಿಕ್ಷಕರು, ಭಾಗೀದಾರರು, ಶಾಲೆಗಳು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಶೈಕ್ಷಣಿಕ ದತ್ತಾಂಶಗಳನ್ನು ಸಂಗ್ರಹಿಸಲು ಸಹಾಯ ಮಾಡುತ್ತವೆ. ಶೈಕ್ಷಣಿಕ ಫಲಿತಗಳನ್ನು ಮೌಲ್ಯಮಾಪನ ಮಾಡಲು, ಸುಧಾರಿಸಬಹುದಾದ ಕ್ಷೇತ್ರಗಳನ್ನು ಗುರುತಿಸಲು, ಬೋಧನಾ ವಿಧಾನಗಳನ್ನು ಮೌಲ್ಯಮಾಪನ ಮಾಡಲು, ನೀತಿ ನಿಯಮಗಳನ್ನು ರೂಪಿಸುವುದಕ್ಕಾಗಿ ಮಾಹಿತಿಗಳನ್ನು ಒದಗಿಸಲು ಶೈಕ್ಷಣಿಕ ಸಮೀಕ್ಷೆಗಳನ್ನು ನಡೆಸಲಾಗುತ್ತದೆ.

ಈ ಸಮೀಕ್ಷೆಗಳು ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿರುತ್ತವೆ. ಸಮೀಕ್ಷೆಗಳು ಶೈಕ್ಷಣಿಕ ಕ್ಷೇತ್ರದಲ್ಲಿನ ಯೋಜನೆಗಳು, ಕಾರ್ಯಕ್ರಮಗಳು, ಉಪಕ್ರಮಗಳನ್ನು ಅನುಷ್ಠಾನ ಮಾಡಿರುವುದರ ಫಲಿತಗಳು/ಪರಿಣಾಮಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ಹಾಗೂ ಒಳನೋಟಗಳನ್ನು ಅಧ್ಯಯನ ಮಾಡಿ ಇಲಾಖೆಯ ಮುಂದಿನ ನೀತಿ ನಿಯಮಗಳ ಅನುಷ್ಠಾನಕ್ಕೆ ಅವಕಾಶ ಮಾಡಿಕೊಡುತ್ತವೆ. ವಿವಿಧ ರೀತಿಯ ಗುಂಪುಗಳಿಂದ ದತ್ತಾಂಶವನ್ನು (ವಯಸ್ಸು, ಲಿಂಗ, ಗುಂಪು, ರಾಷ್ಟ್ರ, ಬುಡಕಟ್ಟು) ಒಂದೇ ಸಮಯದಲ್ಲಿ ಪಡೆದುಕೊಳ್ಳಲು ಸಮೀಕ್ಷೆಗಳು ಸಹಾಯ ಮಾಡುತ್ತದೆ. ಈ ರೀತಿಯ ವಿಶಾಲ ಹಿನ್ನೆಲೆಯಲ್ಲಿ ನಾವು ಸಮೀಕ್ಷೆಯನ್ನು ಕೈಗೊಳ್ಳುವಲ್ಲಿ ಮೂರು ರೀತಿಯ ಸಮೀಕ್ಷೆಯ ವಿಧಗಳನ್ನು ಕಾಣಬಹುದು.

1. ಪರಿಶೋಧನಾತ್ಮಕ/ಅನ್ವೇಷಣಾ ಸಮೀಕ್ಷೆ
2. ವಿವರಣಾತ್ಮಕ ಸಮೀಕ್ಷೆ
3. ಮುನ್ಸೂಚಕ ಸಮೀಕ್ಷೆ

ಹೀಗೆ ವಿವಿಧ ರೀತಿಯ ಸಮೀಕ್ಷೆಗಳ ಮೂಲಕ ಶೈಕ್ಷಣಿಕ ಕ್ಷೇತ್ರಗಳ ಸವಾಲುಗಳು ಮತ್ತು ಸಮಸ್ಯೆಗಳನ್ನು ತಿಳಿಯಬಹುದು, ಅಲ್ಲದೇ ಈ ಸವಾಲುಗಳು ಮತ್ತು ಸಮಸ್ಯೆಗಳಿಗೆ ಪರಿಹಾರ ಕಾರ್ಯಕ್ರಮಗಳನ್ನು ರೂಪಿಸಲು ಸಮೀಕ್ಷೆಗಳು ಉತ್ತಮ ತಂತ್ರವಾಗಿವೆ. ಸಮೀಕ್ಷೆಗಳು ಫಲಪ್ರದವಾಗುವಲ್ಲಿ ದತ್ತಾಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಯು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಶಿಕ್ಷಣದ ವಿವಿಧ ಅಂಶಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ವಿವಿಧ ವಿಧಾನಗಳನ್ನು ಅನುಸರಿಸಲಾಗುತ್ತದೆ. ಪ್ರಶ್ನಾವಳಿಗಳು, ಸಂದರ್ಶನಗಳು, ಅವಲೋಕನ, ಕೇಂದ್ರೀಕೃತ ಗುಂಪು ಚರ್ಚೆ ಮುಂತಾದ ವಿಧಾನಗಳ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಬಹುದು. ಸಂಗ್ರಹಿಸಿದ ದತ್ತಾಂಶಗಳನ್ನು ಎಕ್ಸೆಲ್ ಶೀಟ್, ಗೂಗಲ್ ಸ್ಪ್ರೆಡ್ ಶೀಟ್, ಅನೋವಾ (ANOVA) ಮುಂತಾದವುಗಳ ಸಹಾಯದಿಂದ ವಿಶ್ಲೇಷಿಸಿ

ನಿಖರವಾದ ಫಲಿತಾಂಶಗಳನ್ನು ಪಡೆಯಬಹುದು. ಶೈಕ್ಷಣಿಕ ಕ್ಷೇತ್ರದ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಪರಿಹಾರಗಳನ್ನು ಕಂಡುಹಿಡಿಯಲು ಇವು ಸಹಕಾರಿಯಾಗಿವೆ.

ಹೀಗೆ, ಶಿಕ್ಷಣ ವ್ಯವಸ್ಥೆಗಳ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ನಿರ್ಣಯಿಸಲು, ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ತಿಳಿವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ನೀತಿ ನಿರೂಪಕರು, ಶಿಕ್ಷಣತಜ್ಞರು, ಸಂಶೋಧಕರು ಮತ್ತು ಇತರ ಮಧ್ಯಸ್ಥಗಾರರಿಗೆ ಈ ಸಮೀಕ್ಷೆಗಳು ಮೌಲ್ಯಯುತವಾದ ಸಾಧನಗಳಾಗಿವೆ. ಒಟ್ಟಾರೆಯಾಗಿ ಶೈಕ್ಷಣಿಕ ಸಮೀಕ್ಷೆಗಳ ಆಶಯಗಳು ರಾಷ್ಟ್ರದ ಪ್ರತಿಯೊಂದು ಮಗುವೂ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಅವಕಾಶವನ್ನು ಗಳಿಸಿಕೊಳ್ಳಬೇಕು ಮತ್ತು ಪ್ರತಿಯೊಂದು ಮಗುವಿನ ಸಂಪೂರ್ಣ ಸಾಮರ್ಥ್ಯವು ಗರಿಷ್ಠ ಮಟ್ಟಕ್ಕೆ ಹೊರಹೊಮ್ಮಬೇಕೆಂಬುದೇ ಆಗಿದೆ. ಶಿಕ್ಷಣ ವ್ಯವಸ್ಥೆಯ ಹಲವಾರು ಆಯಾಮಗಳ ಬಗ್ಗೆ ಒಳನೋಟವನ್ನು ಒದಗಿಸುತ್ತಲೇ, ಶೈಕ್ಷಣಿಕ ಸಮೀಕ್ಷೆಗಳು ಶಿಕ್ಷಣ ಕ್ಷೇತ್ರದಲ್ಲಿ ತರಬಹುದಾದ ಧನಾತ್ಮಕ ಬದಲಾವಣೆಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

## 2.2 ಶೈಕ್ಷಣಿಕ ಸಮೀಕ್ಷೆಗಳ ಗುರಿಗಳು:

ಈಗಾಗಲೇ ತಿಳಿಸಿರುವಂತೆ ಶೈಕ್ಷಣಿಕ ಸಮೀಕ್ಷೆಗಳನ್ನು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಕ್ಷೇತ್ರಗಳಲ್ಲಿ ನಡೆಸಬಹುದಾಗಿದೆ. ಆದ್ದರಿಂದಲೇ ಶೈಕ್ಷಣಿಕ ಸಮೀಕ್ಷೆಗಳ ಗುರಿಗಳು ವ್ಯಾಪಕವಾಗಿವೆ. ಶೈಕ್ಷಣಿಕ ಸಮೀಕ್ಷೆಗಳ ಸಾಮಾನ್ಯ ಗುರಿಗಳು ಇಂತಿವೆ.

1. **ವಿದ್ಯಾರ್ಥಿಗಳ ಕಾರ್ಯಕ್ಷಮತೆ (ಸಾಮರ್ಥ್ಯಾಧಾರಿತ ಕಲಿಕೆ):** ವಿವಿಧ ವಿಷಯಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳನ್ನು, ಅವರಿಗೆ ಶೈಕ್ಷಣಿಕವಾಗಿ ಇರುವ ಅಡೆತಡೆಗಳನ್ನು ಅಥವಾ ಶಾಲೆಯಲ್ಲಿ ಅವರ ಒಟ್ಟಾರೆ ಕಾರ್ಯಕ್ಷಮತೆಯನ್ನು ಶಾಲೆ, ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನಿರ್ಣಯಿಸುವುದು.
2. **ಶಿಕ್ಷಕರ ಪರಿಣಾಮಕಾರಿತ್ವ:** ಶಿಕ್ಷಕರಿಗೆ ಅಗತ್ಯವಿರುವ ತರಬೇತಿಗಳು, ಅಳವಡಿಸಿಕೊಂಡಿರುವ ಬೋಧನಾ ವಿಧಾನಗಳು, ತರಗತಿಯಲ್ಲಿ ನಡೆಸುತ್ತಿರುವ ನಾವೀನ್ಯಯುತ ಚಟುವಟಿಕೆಗಳು, ಶಿಕ್ಷಕ–ವಿದ್ಯಾರ್ಥಿ ಸಂವಹನಗಳು ಮತ್ತು ಶಿಕ್ಷಕರ ಪರಿಣಾಮಕಾರಿತ್ವದ ಗ್ರಹಿಕೆಗಳ ಮೇಲೆ ದತ್ತಾಂಶಗಳನ್ನು ಸಂಗ್ರಹಿಸುವುದು.
3. **ಶಾಲಾ ಪರಿಸರ:** ಮಕ್ಕಳ ಸುರಕ್ಷತೆ, ಶಿಸ್ತು, ಶುಚಿತ್ವ, ಶಿಕ್ಷಕರ ಲಭ್ಯತೆ ಅಥವಾ ಕೊರತೆ, ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳು, ಶಾಲೆಗೆ ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ವಿದ್ಯಾರ್ಥಿಗಳಿಗೆ ಇರುವ ಭೌತಿಕ ಸೌಲಭ್ಯಗಳಂತಹ ಅಂಶಗಳನ್ನು ಒಳಗೊಂಡಂತೆ ಶಾಲೆಯೊಳಗಿನ ಒಟ್ಟಾರೆ ಶೈಕ್ಷಣಿಕ ವಾತಾವರಣ ಮತ್ತು ಸಂಸ್ಕೃತಿಯನ್ನು ಅನ್ವೇಷಿಸುವುದು.
4. **ಪೋಷಕರ ಒಳಗೊಳ್ಳುವಿಕೆ:** ತಮ್ಮ ಮಗುವಿನ ಶಿಕ್ಷಣ, ಶಾಲೆಯ ಕಾರ್ಯವೈಖರಿಯ ಬಗ್ಗೆ ಮಕ್ಕಳ ಸಕಾರಾತ್ಮಕ ಮನೋಭಾವ ಮತ್ತು ಶಿಕ್ಷಕರೊಂದಿಗೆ ಸಂವಹನದಲ್ಲಿ ಅವರ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಪೋಷಕರಿಂದ ಪ್ರತಿಕ್ರಿಯೆಯನ್ನು ಪಡೆದು, ಹಿಮ್ಮಾಹಿತಿಯನ್ನು ಶಾಲಾಭಿವೃದ್ಧಿಗೆ ಬಳಸಿಕೊಳ್ಳುವುದು.
5. **ಪಠ್ಯಕ್ರಮ ಮತ್ತು ಬೋಧನೆ:** ಪಠ್ಯಕ್ರಮದ ಸಾಮಗ್ರಿಗಳು, ಬೋಧನಾ ತಂತ್ರಗಳು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದು. ಶಿಕ್ಷಕರ, ಮಕ್ಕಳ, ಪೋಷಕರ ಮತ್ತು ಎಲ್ಲಾ ಭಾಗೀದಾರರ ಅಭಿಪ್ರಾಯಗಳನ್ನು ಸಂಗ್ರಹಿಸುವುದರ ಮೂಲಕ ಉತ್ತಮ ಆಚರಣೆಗಳನ್ನು/ ಅಭ್ಯಾಸಗಳನ್ನು ಗುರುತಿಸುವುದು; ಪಠ್ಯಕ್ರಮದ ವಿನ್ಯಾಸದಲ್ಲಿ ಬದಲಾವಣೆಗಳನ್ನು ತರುವುದು; ಉತ್ತಮ ತರಗತಿ ನಿರ್ವಹಣೆಗೆ ಯೋಜನೆಗಳನ್ನು ರೂಪಿಸುವುದು.
6. **ತಂತ್ರಜ್ಞಾನವನ್ನು ಸಮ್ಮಿಳಿತಗೊಳಿಸುವುದು:** ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿರುವದರೊಂದಿಗೆ, ಶಾಲೆಗಳಲ್ಲಿ ತಂತ್ರಜ್ಞಾನದ ಸಂಪನ್ಮೂಲಗಳ ಲಭ್ಯತೆ ಮತ್ತು ಅದರ ಪರಿಣಾಮಕಾರಿತ್ವವನ್ನು ನಿರ್ಣಯಿಸುವುದು.
7. **ಒಳಗೊಳ್ಳುವ ಶಿಕ್ಷಣ ಸೇವೆಗಳು:** ಪ್ರತಿಭಾನ್ವಿತ ವಿದ್ಯಾರ್ಥಿಗಳು, ಅವಕಾಶ ವಂಚಿತ ಮಕ್ಕಳು, ದುರ್ಬಲ ವರ್ಗದ ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳು, ವಿಕಲಾಂಗ ಅಥವಾ ವಿಶೇಷ ಅಗತ್ಯತೆಗಳಿರುವ ವಿದ್ಯಾರ್ಥಿಗಳಿಗೆ ಒಳಗೊಳ್ಳುವ ಶಿಕ್ಷಣ ಸೇವೆಗಳ ನಿಬಂಧನೆ ಮತ್ತು ಗುಣಮಟ್ಟದ ಕುರಿತು ಸಮೀಕ್ಷೆಗಳು ಮಾಹಿತಿಯನ್ನು ಸಂಗ್ರಹಿಸುವುದು.

ಮೇಲಿನ ವಿವಿಧ ಕ್ಷೇತ್ರಗಳನ್ನು ಗಮನಿಸಿದಾಗ ಶೈಕ್ಷಣಿಕ ಸಮೀಕ್ಷೆಗಳ ಗುರಿಗಳ ವ್ಯಾಪಕತೆಯು ಅರಿವಾಗುತ್ತದೆ. ನಿಖರವಾದ ದತ್ತಾಂಶಗಳನ್ನು ಸಂಗ್ರಹಿಸಿ, ವೈಜ್ಞಾನಿಕವಾಗಿ ಮಾಡುವ ಸಮೀಕ್ಷೆಗಳು ಶಿಕ್ಷಣ ಕ್ಷೇತ್ರದ ಸ್ಥಿತಿಗತಿಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತವೆ.

## 2.3 ಶೈಕ್ಷಣಿಕ ಸಮೀಕ್ಷೆಗಳ ಉದ್ದೇಶಗಳು:

ಶೈಕ್ಷಣಿಕ ಸಮೀಕ್ಷೆಗಳ ಉದ್ದೇಶಗಳು ಸಮೀಕ್ಷೆಯ ನಿರ್ದಿಷ್ಟ ಗುರಿಗಳು ಮತ್ತು ದೃಷ್ಟಿಕೋನವನ್ನು ಅವಲಂಬಿಸಿ ಬದಲಾಗಬಹುದು. ಆದಾಗ್ಯೂ, ಕೆಲವು ಸಾಮಾನ್ಯ ಉದ್ದೇಶಗಳು ಹೀಗಿವೆ:

- ➔ ವಿದ್ಯಾರ್ಥಿಗಳ ಕಲಿಕಾ ಸಾಧನೆಯ ಮೌಲ್ಯಮಾಪನವನ್ನು ಕೈಗೊಳ್ಳುವುದು
- ➔ ಬೋಧನಾ ಅಭ್ಯಾಸಗಳು ಮತ್ತು ಕಲಿಕಾ ಸಾಧನೆಗಿರುವ ಸಂಬಂಧಗಳನ್ನು ಗುರುತಿಸುವುದು
- ➔ ಶೈಕ್ಷಣಿಕ ಉಪಕ್ರಮ/ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವುದು
- ➔ ಬೋಧನೆಯ ಗುಣಮಟ್ಟ ಮತ್ತು ಸಂಪನ್ಮೂಲಗಳ ಲಭ್ಯತೆಗೆ ಸಂಬಂಧಿಸಿದಂತೆ ವಿದ್ಯಾರ್ಥಿ–ಸಂತೃಪ್ತಿ ಮಾಪನವನ್ನು ಕೈಗೊಳ್ಳುವುದು.
- ➔ ಸುರಕ್ಷತೆ, ಒಳಗೊಳ್ಳುವಿಕೆ ಮತ್ತು ವಿದ್ಯಾರ್ಥಿ–ಸಿಬ್ಬಂದಿ ನಡುವೆ ಬೆಂಬಲ ಸಂಬಂಧಗಳ ಬಗ್ಗೆ ಶಾಲಾ ಪರಿಸರದ ಮೌಲ್ಯಮಾಪನ ಮಾಡುವುದು.
- ➔ ವಿದ್ಯಾರ್ಥಿ, ಶಾಲೆ ಮತ್ತು ಪೋಷಕರ ಒಳಗೊಳ್ಳುವಿಕೆಯ ಅಧ್ಯಯನ ಕೈಗೊಳ್ಳುವುದು.
- ➔ ಸಮಾನ ಅವಕಾಶ ಮತ್ತು ಒಳಗೊಳ್ಳುವಿಕೆ ಶಿಕ್ಷಣದ ಪರಿಣಾಮಕಾರಿತ್ವದ ಫಲಿತಗಳನ್ನು ತಿಳಿಯುವುದು.

ಒಟ್ಟಾರೆಯಾಗಿ, ಶೈಕ್ಷಣಿಕ ಸಮೀಕ್ಷೆಗಳ ಉದ್ದೇಶಗಳು ಎಲ್ಲಾ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಗುಣಮಟ್ಟ, ಸಮಾನತೆ ಮತ್ತು ಪರಿಣಾಮಕಾರಿತ್ವವನ್ನು ಸುಧಾರಿಸುವ ಪ್ರಮುಖ ಗುರಿಯೊಂದಿಗೆ ಜೋಡಿಸಲ್ಪಟ್ಟಿವೆ

**ಗಮನಿಸಿ:**

- ➔ 2001 ರ ರ ಜನಗಣತಿಯ ಪ್ರಕಾರ ಗಂಡು ಮತ್ತು ಹೆಣ್ಣು ಮಕ್ಕಳ ನಡುವಿನ ಅನುಪಾತವು 1000 ಕ್ಕೆ 927 ಆಗಿತ್ತು. ಆದರೆ, 2011 ರ ಜನಗಣತಿಯ ಪ್ರಕಾರ ಈ ಸಂಖ್ಯೆಯು 911 ಕ್ಕೆ ಇಳಿದಿತ್ತು.
- ➔ 2011 ರ ಜನಗಣತಿಯ ಪ್ರಕಾರ ಲಿಂಗಾನುಪಾತವು ಅರುಣಾಚಲ ಪ್ರದೇಶದಲ್ಲಿ ಅತ್ಯಧಿಕವಾಗಿದ್ದು (972) ಹರಿಯಾಣದಲ್ಲಿ ಕೇವಲ 834 ಆಗಿತ್ತು. (1000 ಗಂಡುಮಕ್ಕಳಿಗೆಮೇಲಿನ ದತ್ತಾಂಶಗಳು, ಹೆಣ್ಣು ಮಕ್ಕಳ ಸಂಖ್ಯ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿರುವುದನ್ನು ತೋರಿಸುತ್ತದೆ. ಲಿಂಗಾನುಪಾತದ ತೀವ್ರ ಕುಸಿತವು ಆತಂಕಕಾರಿಯಾಗಿದೆ. ಹೆಣ್ಣು ಮಕ್ಕಳು ತಮ್ಮ ಬದುಕು, ಉಳಿವು, ರಕ್ಷಣೆಮತ್ತು ಶಿಕ್ಷಣದಿಂದ ವಂಚಿತರಾಗುತ್ತಿದ್ದುದನ್ನು ಗಂಭೀರವಾಗಿ ಪರಿಗಣಿಸಿ ಮಾನ್ಯ ಪ್ರಧಾನ ಮಂತ್ರಿಗಳು ಮೊದಲಿಗೆ ಹರಿಯಾಣದ ಪಾಣಿಪಟ್‌ನಲ್ಲಿ "ಬೇಟಿ ಬಚಾವೋ ಬೇಟಿ ಪಢಾವೋ" ಯೋಜನೆಯನ್ನು 22 ಜನವರಿ 2015 ರಂದು ಜಾರಿಗೊಳಿಸಿದರು. ಆರಂಭಿಕ ಯಶಸ್ಸನ್ನು ಗಮನಿಸಿ ಈ ಯೋಜನೆಯನ್ನು ದೇಶವ್ಯಾಪಿ ವಿಸ್ತರಿಸಲಾಯಿತು.




ಸಮೀಕ್ಷೆಯ ಫಲಿತಗಳು ಹೊಸ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗುತ್ತವೆ!

**ಆಲೋಚಿಸಿ:** ಮೇಲಿನ ಯೋಜನೆಯನ್ನು ಹರಿಯಾಣದಲ್ಲೇ ಮೊದಲು ಆರಂಭಿಸಲು ಕಾರಣವೇನಿರಬಹುದು? ಸಮೀಕ್ಷೆಯ ಫಲಿತಾಂಶಗಳಿಗೂ ಈ ಯೋಜನೆಗೂ ಏನಾದರೂ ಸಂಬಂಧವಿದೆಯೇ?

ಹೆಚ್ಚಿನ ಮಾಹಿತಿಗಾಗಿ ಈ ಜಾಲತಾಣಕ್ಕೆ ಭೇಟಿ ನೀಡಿ:

https://wcd.nic.in/sites/default/files/Guideline.pdf

## 2.4 ಶೈಕ್ಷಣಿಕ ಸಮೀಕ್ಷೆಗಳ ವ್ಯಾಪ್ತಿ ಮತ್ತು ಪ್ರಾಮುಖ್ಯತೆ:

ಶೈಕ್ಷಣಿಕ ಸಮೀಕ್ಷೆಗಳ ವ್ಯಾಪ್ತಿಯು ವಿಶಾಲವಾಗಿದ್ದು, ಶಿಕ್ಷಣ ಕ್ಷೇತ್ರದ ಹಲವು ಮಜಲುಗಳನ್ನು ಮತ್ತು ಶಿಕ್ಷಣ ವ್ಯವಸ್ಥೆಯ ವಿವಿಧ ಅಂಶಗಳನ್ನು ಒಳಗೊಂಡಿದೆ. ಶೈಕ್ಷಣಿಕ ಸಮೀಕ್ಷೆಗಳನ್ನು ಶಾಲಾ ಹಂತದಿಂದ ಹಿಡಿದು, ರಾಷ್ಟ್ರೀಯ ಹಂತದವರೆಗೆ ಕೈಗೊಳ್ಳಬಹುದಾಗಿದೆ. ರಾಷ್ಟ್ರಮಟ್ಟದಲ್ಲಿ ಕೈಗೊಳ್ಳಲಾಗುವ ಸಮೀಕ್ಷೆಗಳು ಇಡೀ ದೇಶದ ಶೈಕ್ಷಣಿಕ ವ್ಯವಸ್ಥೆಯ ಚಿತ್ರಣವನ್ನು ನೀಡುತ್ತವೆ. ಶೈಕ್ಷಣಿಕ ಸಮೀಕ್ಷೆಗಳ ವ್ಯಾಪ್ತಿಯನ್ನು ಕೆಳಕಂಡಂತೆ ಗುರುತಿಸಬಹುದು.

**ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳು:** ವಿವಿಧ ವಿಷಯಗಳು ಮತ್ತು ವಿವಿಧ ತರಗತಿಯ ಹಂತಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಕಲಿಕೆಯ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು.

**ಬೋಧನಾ ಅಭ್ಯಾಸಗಳು ಮತ್ತು ಶಿಕ್ಷಕರ ಗುಣಮಟ್ಟ:** ಬೋಧನಾ ವಿಧಾನಗಳು, ಬೋಧನಾ ಸಾಮಗ್ರಿಗಳು, ತರಗತಿಯ ನಿರ್ವಹಣಾ ತಂತ್ರಗಳು ಮತ್ತು ಶಿಕ್ಷಕರಿಗೆ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದು.

**ಶಾಲಾ ಪರಿಸರ ಮತ್ತು ಶೈಕ್ಷಣಿಕ ವಾತಾವರಣ:** ಶಾಲೆಯ ಸುರಕ್ಷತೆ, ಶಾಲೆಯ ನೀತಿ ನಿಯಮಗಳು, ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆ ಮತ್ತು ಕಲಿಕೆಯ ವಾತಾವರಣವನ್ನೊಳಗೊಳ್ಳುವ ಅಂಶಗಳನ್ನು ಪರಿಶೀಲಿಸುವುದು.

**ಪೋಷಕರ ಮತ್ತು ಸಮುದಾಯದ ಒಳಗೊಳ್ಳುವಿಕೆ:** ಶಿಕ್ಷಣದಲ್ಲಿ ಪೋಷಕರು/ಸಮುದಾಯದ ಪಾಲ್ಗೊಳ್ಳುವಿಕೆ, ಶಾಲೆಗಳೊಂದಿಗೆ ಸಂಬಂಧ ಮತ್ತು ಶಾಲೆಯ ಕಾರ್ಯಕ್ಷಮತೆಯ ಗ್ರಹಿಕೆಗಳ ಬಗ್ಗೆ ಪೋಷಕರು ಮತ್ತು ಸಮುದಾಯದ ಸದಸ್ಯರಿಂದ ಪ್ರತಿಕ್ರಿಯೆಯನ್ನು ಸಂಗ್ರಹಿಸುವುದು.

**ಶೈಕ್ಷಣಿಕ ಸಮಾನತೆ ಮತ್ತು ಪ್ರವೇಶ:** ಸಾಮಾಜಿಕ ಆರ್ಥಿಕ ಸ್ಥಿತಿ, ಜನಾಂಗ, ಜನಾಂಗೀಯತೆ, ಲಿಂಗ ಮತ್ತು ಅಂಗವೈಕಲ್ಯ ಸ್ಥಿತಿಯಂತಹ ಅಂಶಗಳ ಆಧಾರದ ಮೇಲೆ ವಿವಿಧ ವಿದ್ಯಾರ್ಥಿ ಜನಸಂಖ್ಯೆಯ ನಡುವೆ ಸಂಪನ್ಮೂಲಗಳು, ಅವಕಾಶಗಳು ಮತ್ತು ಶೈಕ್ಷಣಿಕ ಫಲಿತಾಂಶಗಳ ಪ್ರವೇಶದಲ್ಲಿನ ಅಸಮಾನತೆಗಳನ್ನು ಗುರುತಿಸುವುದು.

**ಪಠ್ಯಕ್ರಮ ಮತ್ತು ಮೌಲ್ಯಮಾಪನ:** ಪಠ್ಯಕ್ರಮದ ಮಾನದಂಡಗಳು, ಬೋಧನಾ ಸಾಮಗ್ರಿಗಳು ಮತ್ತು ಮೌಲ್ಯಮಾಪನಗಳ ನಡುವಿನ ಜೋಡಣೆಯನ್ನು ನಿರ್ಣಯಿಸುವುದು, ಹಾಗೆಯೇ ಪಠ್ಯಕ್ರಮದ ಸುಧಾರಣೆ ಮತ್ತು ನಾವೀನ್ಯತೆಗಾಗಿ ವಿಷಯಗಳನ್ನು ಗುರುತಿಸುವುದು.

**ತಂತ್ರಜ್ಞಾನವನ್ನು ಸಮ್ಮಿಳಿತಗೊಳಿಸುವುದು ಮತ್ತು ಡಿಜಿಟಲ್ ಸಾಕ್ಷರತೆ:** ಶಿಕ್ಷಣದಲ್ಲಿ ತಂತ್ರಜ್ಞಾನದ ಲಭ್ಯತೆ ಮತ್ತು ಬಳಕೆಯನ್ನು ಪರಿಶೀಲಿಸುವುದು ತಂತ್ರಜ್ಞಾನ ಸಮ್ಮಿಳಿತ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯ ಪ್ರಭಾವವನ್ನು ನಿರ್ಣಯಿಸುವುದು ಮತ್ತು ವಿದ್ಯಾರ್ಥಿಗಳ ಡಿಜಿಟಲ್ ಸಾಕ್ಷರತೆಯ ಕೌಶಲ್ಯಗಳನ್ನು ಮೌಲ್ಯಮಾಪನ ಮಾಡುವುದು.

**ಒಳಗೊಳ್ಳುವ ಶಿಕ್ಷಣ ಮತ್ತು ಆಚರಣೆಗಳು/ಅಭ್ಯಾಸಗಳು:** ಪ್ರತಿಭಾನ್ವಿತ ವಿದ್ಯಾರ್ಥಿಗಳು, ಅವಕಾಶ ವಂಚಿತ ಮಕ್ಕಳು, ದುರ್ಬಲ ವರ್ಗದ ಮಕ್ಕಳು–ವಿಶೇಷವಾಗಿ ಹೆಣ್ಣುಮಕ್ಕಳು, ವಿಕಲಾಂಗ ಅಥವಾ ವಿಶೇಷ ಅಗತ್ಯತೆಗಳಿರುವ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುವುದು, ಹಾಗೆಯೇ ಎಲ್ಲಾ ವಿದ್ಯಾರ್ಥಿಗಳ ವೈವಿಧ್ಯಮಯ ಕಲಿಕೆಯ ಅಗತ್ಯಗಳನ್ನು ಒಳಗೊಳ್ಳುವ ಆಚರಣೆಗಳನ್ನು ಉತ್ತೇಜಿಸುವುದು.

**ಶಿಕ್ಷಣ ನೀತಿ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಮೌಲ್ಯಮಾಪನ:** ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ನೀತಿಗಳು, ಉಪಕ್ರಮಗಳು ಮತ್ತು ಮಧ್ಯಸ್ಥಿಕೆಗಳ ಪರಿಣಾಮಕಾರಿತ್ವವನ್ನು ನಿರ್ಣಯಿಸುವುದು ಮತ್ತು ಶೈಕ್ಷಣಿಕ ಪೂರೈಸುವ ಫಲಿತಾಂಶಗಳನ್ನು ಸುಧಾರಿಸುವುದು.

ವಿಶ್ವಾದ್ಯಂತ ಶಿಕ್ಷಣ ವ್ಯವಸ್ಥೆಗಳ ಗುಣಮಟ್ಟ, ಸಮಾನತೆ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಸಾಕ್ಷ್ಯ ಆಧಾರಿತ ಆಚರಣೆಗಳು, ನೀತಿ–ನಿಯಮಗಳನ್ನು ರೂಪಿಸುವುದು ಮತ್ತು ಸಂಪನ್ಮೂಲ ಹಂಚಿಕೆಯನ್ನು ತಿಳಿಸುವಲ್ಲಿ ಶೈಕ್ಷಣಿಕ ಸಮೀಕ್ಷೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

## ಶೈಕ್ಷಣಿಕ ಸಮೀಕ್ಷೆಗಳ ಪ್ರಾಮುಖ್ಯತೆ:

ಶೈಕ್ಷಣಿಕ ಸಮೀಕ್ಷೆಗಳು ಹಲವಾರು ಕಾರಣಗಳಿಗಾಗಿ ಮುಖ್ಯವಾಗಿವೆ:

**ದತ್ತಾಂಶಗಳನ್ನು ನಿರ್ಧರಿಸುವುದು:** ಶಿಕ್ಷಣತಜ್ಞರು, ನೀತಿ ನಿರೂಪಕರು ಮತ್ತು ಇತರ ಮಧ್ಯಸ್ಥಗಾರರು ಪಠ್ಯಕ್ರಮದ ಅಭಿವೃದ್ಧಿ, ಸಂಪನ್ಮೂಲ ಹಂಚಿಕೆ ಮತ್ತು ಶೈಕ್ಷಣಿಕ ನೀತಿಯ ಬಗ್ಗೆ ಪೂರ್ವಾಲೋಚಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಬಳಸಬಹುದಾದ ಮೌಲ್ಯಯುತವಾದ ದತ್ತಾಂಶ ಮತ್ತು ಒಳನೋಟಗಳನ್ನು ಸಮೀಕ್ಷೆಗಳು ಒದಗಿಸುತ್ತವೆ.

**ಸುಧಾರಣೆಗಾಗಿ ಶೈಕ್ಷಣಿಕ ಕ್ಷೇತ್ರಗಳನ್ನು ಗುರುತಿಸುವುದು:** ಶಿಕ್ಷಣ ವ್ಯವಸ್ಥೆಯಲ್ಲಿನ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗುರುತಿಸಲು ಸಮೀಕ್ಷೆಗಳು ಸಹಾಯ ಮಾಡುತ್ತವೆ. ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು ಮತ್ತು ಕೊರತೆಗಳನ್ನು ಪರಿಹರಿಸಲು ಅಲ್ಲದೇ ಮಧ್ಯವರ್ತನೆಗಳನ್ನು ಕಾರ್ಯಗತಗೊಳಿಸಲು ಭಾಗೀದಾರರಿಗೆ ಅವಕಾಶ ನೀಡುತ್ತದೆ.

**ವಿದ್ಯಾರ್ಥಿಗಳ ಅಗತ್ಯತೆಗಳನ್ನು ಕಂಡುಕೊಳ್ಳುವುದು:** ಸಮೀಕ್ಷೆಗಳು ವಿದ್ಯಾರ್ಥಿಗಳ ವೈವಿಧ್ಯಮಯ ಅಗತ್ಯಗಳು ಮತ್ತು ಆದ್ಯತೆಗಳನ್ನು ಅರ್ಥಮಾಡಿಕೊಳ್ಳಲು ಶಿಕ್ಷಣತಜ್ಞರಿಗೆ ಅನುವು ಮಾಡಿಕೊಡುತ್ತದೆ. ಈ ಎಲ್ಲಾ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸಲು ಸೂಕ್ತವಾದ ಬೋಧನಾ ತಂತ್ರಗಳು ಮತ್ತು ಬೆಂಬಲ ಸೇವೆಗಳ ಅಭಿವೃದ್ಧಿಗೆ ಅವಕಾಶ ನೀಡುತ್ತದೆ.

**ಕಾರ್ಯಕ್ರಮ/ಯೋಜನೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದು:** ಶೈಕ್ಷಣಿಕ ಕಾರ್ಯಕ್ರಮಗಳು, ಉಪಕ್ರಮಗಳು ಮತ್ತು ಮಧ್ಯವರ್ತನೆಗಳು ಫಲಾನುಭವಿಗಳಿಗೆ ತಲುಪಿರುವ ಬಗ್ಗೆ ಮತ್ತು ಅವುಗಳ ಗುಣಮಟ್ಟದ ಬಗ್ಗೆ ಖಾತರಿಪಡಿಸಿಕೊಳ್ಳುವುದು ಜೊತೆಗೆ ಅವುಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು ಸಮೀಕ್ಷೆಗಳು ಸಹಾಯಕವಾಗಿವೆ.

**ಭವಿಷ್ಯದ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು:** ನಿಯತಕಾಲಿಕವಾಗಿ ನಡೆಸಿದ ಸಮೀಕ್ಷೆಗಳು ಶೈಕ್ಷಣಿಕ ಫಲಿತಾಂಶಗಳಲ್ಲಿನ ಪ್ರವೃತ್ತಿಗಳು ಮತ್ತು ಬದಲಾವಣೆಗಳ ಮೇಲ್ವಿಚಾರಣೆಗೆ ಅವಕಾಶ ಮಾಡಿಕೊಡುತ್ತವೆ. ನೀತಿ–ನಿಯಮಗಳ ಬದಲಾವಣೆಗಳು, ವಿದ್ಯಾರ್ಥಿಗಳ ಸಾಧನೆ ಮತ್ತು ಶೈಕ್ಷಣಿಕ ಸಮಾನತೆಯ ಇತರ ಅಂಶಗಳ ಪ್ರಭಾವದ ಬಗ್ಗೆ ಮೌಲ್ಯಯುತ ಮಾಹಿತಿಯನ್ನು ಒದಗಿಸುತ್ತದೆ.

**ಉತ್ತರದಾಯಿತ್ವವನ್ನು ಉತ್ತೇಜಿಸುವುದು:** ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಫಲಿತಾಂಶಗಳ ಕುರಿತು ಮಧ್ಯಸ್ಥಗಾರರಿಗೆ ವಸ್ತುನಿಷ್ಠ ಅಂಕಿಅಂಶಗಳನ್ನು ಒದಗಿಸುವ ಮೂಲಕ ಸಮೀಕ್ಷೆಗಳು ಹೊಣೆಗಾರಿಕೆಯನ್ನು ಉತ್ತೇಜಿಸುತ್ತವೆ, ಇದನ್ನು ಶಾಲೆಗಳು, ಜಿಲ್ಲೆಗಳು ಮತ್ತು ನೀತಿ ನಿರೂಪಕರನ್ನು ಅವರ ಕ್ರಮಗಳು ಮತ್ತು ನಿರ್ಧಾರಗಳಿಗೆ ಜವಾಬ್ದಾರರನ್ನಾಗಿ ಮಾಡಲು ಬಳಸಬಹುದು.

**ಭಾಗೀದಾರರನ್ನು ತೊಡಗಿಸಿಕೊಳ್ಳುವುದು:** ಸಮೀಕ್ಷೆಗಳು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ನಿರ್ವಾಹಕರು ಮತ್ತು ಸಮುದಾಯದ ಸದಸ್ಯರು ಸೇರಿದಂತೆ ವಿವಿಧ ಮಧ್ಯಸ್ಥಗಾರರನ್ನು ತೊಡಗಿಸಿಕೊಳ್ಳುತ್ತವೆ.

**ಸಂಪನ್ಮೂಲ ಹಂಚಿಕೆಯನ್ನು ನಿರ್ಧರಿಸುವುದು:** ಹೆಚ್ಚಿನ ಸಂಪನ್ಮೂಲಗಳು ಅಗತ್ಯವಿರುವ ಕ್ಷೇತ್ರಗಳನ್ನು ಗುರುತಿಸುವ ಮೂಲಕ ಸಂಪನ್ಮೂಲ ಹಂಚಿಕೆಗೆ ಆದ್ಯತೆ ನೀಡಲು ಸಮೀಕ್ಷೆಗಳು ಸಹಾಯ ಮಾಡುತ್ತವೆ. ಆಯಾ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದ ಸಮೀಕ್ಷೆಗಳು ಸಂಪನ್ಮೂಲಗಳ ಸಮರ್ಪಕ ಹಂಚಿಕೆ ಮತ್ತು ಬಳಕೆಗೆ ಮಾರ್ಗದರ್ಶನ ನೀಡುತ್ತವೆ.

**ಸಂಶೋಧನೆ ಮತ್ತು ಜ್ಞಾನದ ಬೆಳವಣಿಗೆಗೆ ಕೊಡುಗೆ:** ಸಮೀಕ್ಷೆಗಳು ಸಂಶೋಧನಾ ಉದ್ದೇಶಗಳಿಗಾಗಿ ಬಳಸಬಹುದಾದ ದತ್ತಾಂಶಗಳನ್ನು ಸಂಗ್ರಹಿಸುತ್ತವೆ, ಶಿಕ್ಷಣ ಕ್ಷೇತ್ರದಲ್ಲಿ ಜ್ಞಾನದ ಬೆಳವಣಿಗೆಗೆ ಕೊಡುಗೆ ನೀಡುತ್ತವೆ ಮತ್ತು ಸಾಕ್ಷ್ಯಾಧಾರಿತ ಆಚರಣೆಗಳು ಮತ್ತು ನೀತಿಗಳ ಶಿಫಾರಸ್ಸುಗಳನ್ನು ತಿಳಿಸುತ್ತವೆ.

ಒಟ್ಟಾರೆಯಾಗಿ, ಶೈಕ್ಷಣಿಕ ಸಮೀಕ್ಷೆಗಳು ಶೈಕ್ಷಣಿಕ ಗುಣಮಟ್ಟ, ಸಮಾನತೆ ಮತ್ತು ಪರಿಣಾಮಕಾರಿತ್ವವನ್ನು ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಶೈಕ್ಷಣಿಕ ಸಮೀಕ್ಷೆಗಳನ್ನು ಕೈಗೊಂಡು ದತ್ತಾಂಶಗಳನ್ನು ವಿಶ್ಲೇಷಿಸುವುದರಿಂದ,

- ಶೈಕ್ಷಣಿಕ ಆಡಳಿತಗಾರರು, ಮೇಲ್ವಿಚಾರಣೆ ಮತ್ತು ಅನುಷ್ಠಾನಾಧಿಕಾರಿಗಳು ಹಾಗೂ ಶಿಕ್ಷಕವೃಂದದವರ ವೃತ್ತಿ ಬೆಳವಣಿಗೆಗೆ ಸಹಕಾರಿಯಾಗುತ್ತದೆ.
- ಶಿಕ್ಷಕರಿಗೆ ತಮ್ಮ ಶೈಕ್ಷಣಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ.
- ವಿದ್ಯಾರ್ಥಿಗಳು ಕಲಿಕಾಫಲಗಳನ್ನು ಸಾಧಿಸುವಂತೆ ಮಾಡಲು ಸೂಕ್ತ ಯೋಜನೆಗಳನ್ನು, ಉಪಕ್ರಮಗಳನ್ನು ರೂಪಿಸಲು ಅವಕಾಶ ಮಾಡಿಕೊಡುತ್ತದೆ.
- ಮುಖ್ಯಶಿಕ್ಷಕರು ಶಾಲಾ ಶೈಕ್ಷಣಿಕ ಅಭಿವೃದ್ಧಿಗೆ ಸೂಕ್ತ ಕ್ರಿಯಾಯೋಜನೆ ರೂಪಿಸಲು ನೆರವಾಗುತ್ತದೆ.
- ಶೈಕ್ಷಣಿಕ ಆಡಳಿತಾಧಿಕಾರಿಗಳು ಶೈಕ್ಷಣಿಕ ಕಾರ್ಯಕ್ರಮಗಳ ಸ್ಥಿತಿಗತಿಗಳನ್ನು ಅವಲೋಕಿಸಿ ಮುಂದಿನ ಯೋಜನೆಗಳನ್ನು ತಯಾರಿಸಲು ಪ್ರೋತ್ಸಾಹಿಸುತ್ತದೆ.

**ಗುಂಪು ಚಟುವಟಿಕೆ:**

ನೀವು ಶಿಕ್ಷಕರು/ಮುಖ್ಯಶಿಕ್ಷಕರು/ಸಿಆರ್‌ಪಿ/ಬಿಆರ್‌ಸಿ/ಬಿಇಒ/ಡಿಡಿಪಿಐ/ ಇತರೆ ಅನುಪಾಲನಾಧಿಕಾರಿಗಳಾಗಿದ್ದಲ್ಲಿ ಮೇಲಿನ ಯಾವ ಕ್ಷೇತ್ರದಲ್ಲಿ ಸಮೀಕ್ಷೆಯನ್ನು ಕೈಗೊಳ್ಳಲು ಬಯಸುತ್ತೀರಿ? ಏಕೆ? ಈ ಕ್ಷೇತ್ರಗಳಲ್ಲದೆ ಸ್ಥಳೀಯ ಸನ್ನಿವೇಶಗಳಿಗನುಗುಣವಾಗಿ ನೀವು ಸಮೀಕ್ಷೆಯನ್ನು ಕೈಗೊಳ್ಳಲು ಇಚ್ಛಿಸುವ ಎರಡು ಕ್ಷೇತ್ರಗಳನ್ನು ಗುರುತಿಸಿ.

# ಅಧ್ಯಾಯ 3 ಶೈಕ್ಷಣಿಕ ಸಮೀಕ್ಷೆಗಳು ಒಂದು ಅವಲೋಕನ



**ಕಲಿಕೆಯ ಫಲಗಳು:**

1. ಶೈಕ್ಷಣಿಕ ಸಮೀಕ್ಷೆಗಳ ಹಿನ್ನೆಲೆಯನ್ನು ಗ್ರಹಿಸುವರು.
2. ಶೈಕ್ಷಣಿಕ ಸಮೀಕ್ಷೆಗಳನ್ನು ಅವಲೋಕಿಸುವರು.
3. ಶೈಕ್ಷಣಿಕ ಸಮೀಕ್ಷೆಗಳನ್ನು ಕೈಗೊಳ್ಳುವ ಸಾಧನಗಳು ಮತ್ತು ತಂತ್ರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಯುವರು.
4. ವಿವಿಧ ಸಾಧನ ಮತ್ತು ತಂತ್ರಗಳನ್ನು ಬಳಸಿ ಸಮೀಕ್ಷೆಗಳನ್ನು ಕೈಗೊಳ್ಳುವರು.

## 3.1 ಶೈಕ್ಷಣಿಕ ಸಮೀಕ್ಷೆಗಳು ನಡೆದು ಬಂದ ಹಾದಿ:

ಭಾರತದಲ್ಲಿ ಮೊದಲ ಭೌಗೋಳಿಕ ಸಮೀಕ್ಷೆಯನ್ನು 1767 ರಲ್ಲಿ ಮೇಜರ್ ಜೇಮ್ಸ್ ರೆನ್ನೆಲ್ ಅವರು ಕೈಗೊಂಡರು. ಇದರಿಂದ ಬಂಗಾಳ ಮತ್ತು ಸುತ್ತಲಿನ ಪ್ರದೇಶಗಳ ನಕ್ಷೆಯನ್ನು ಅಧಿಕೃತವಾಗಿ ಪ್ರಕಟಿಸಲು ಸಾಧ್ಯವಾಯಿತು. ಈ ಸಮೀಕ್ಷೆಯು Trigonometrical Survey of India, 1802ರಲ್ಲಿ ಕೈಗೊಂಡ ಭೌಗೋಳಿಕ ಸಮೀಕ್ಷೆಗೆ ನಾಂದಿಯಾಯಿತು. ಇದರಿಂದ ಭಾರತ ಉಪಖಂಡದ ಸ್ಪಷ್ಟವಾದ ಭೌಗೋಳಿಕ ನಕ್ಷೆಯು ದೊರೆಯಿತು. ಆದ್ದರಿಂದಲೇ ಈ ಸಮೀಕ್ಷೆಯನ್ನು ಒಂದು ಪ್ರಮುಖ ಭೌಗೋಳಿಕ ಸಮೀಕ್ಷೆ ಎಂದು ಪರಿಗಣಿಸಲಾಗಿದೆ.

> Survey of India ದ ಕೇಂದ್ರ ಕಛೇರಿಯು ಉತ್ತರಾಖಂಡ್ ರಾಜ್ಯದ ಡೆಹರಾಡೂನ್‌ನಲ್ಲಿದೆ. ಇದು ಭಾರತದಲ್ಲಿ ಭೌಗೋಳಿಕ ಸಮೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದೆ. ಇದು ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸ್ವಾತಂತ್ರ್ಯ ನಂತರ ವಿವಿಧ ಸಂಸ್ಥೆಗಳು/ಇಲಾಖೆಗಳು ನಡೆಸಿರುವ ಸಮೀಕ್ಷೆಗಳು:

| ಕ್ರಮ ಸಂಖ್ಯೆ | ಸಂಸ್ಥೆ/ಇಲಾಖೆಯ ಹೆಸರು | ಸಮೀಕ್ಷೆಯ ವಿಷಯ | ವರ್ಷ |
|---|---|---|---|
| 1 | Ministry of Finance, Government of India | ಸಾಕ್ಷರತೆ, ಶಾಲಾ ಹಾಜರಾತಿ ಮತ್ತು ಶಿಕ್ಷಣವನ್ನು ಪಡೆಯುವುದು | 1950 |
| 2 | National Sample Survey Office | ಭಾರತದ ಸಾಮಾಜಿ–ಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದು | ವಿವಿಧ ಯೋಜನೆಗಳನ್ನು ರೂಪಿಸುವ ಮುನ್ನ 1950 ರಿಂದ |
| 3 | SHAH Commission | ಭಾರತದಲ್ಲಿ ಶಿಕ್ಷಕರ ಸ್ಥಿತಿಗತಿಗಳು ಮತ್ತು ಬೋಧನಾ ವಿಧಾನಗಳು | 1977-79 |
| 4 | PRATHAM | Annual Status of Education Report (ASER) | 2005 ರಿಂದ ಪ್ರತಿ ವರ್ಷ |
| 5 | NCERT | National Achievement Survey | 2001 ರಿಂದ |

| | | | |
|---|---|---|---|
| 6 | NIEPA | District Information System for Education (DISE) | 1995 ರಿಂದ |
| 7 | Department of Higher Education Ministry of HRD, India | All India Survey on Higher Education | 2010 |
| 8 | Niti Ayog | School Education Quality Index (SEQI) | 2019 |
| 9 | Ministry of Health and Family Welfare | National Family Health Survey 5 | 2019-2021 |
| 10 | Ministry of Health and Family Welfare | Comprehensive National Nutritional Survey | 2016-2018 |

ಹೀಗೆ ಸರ್ಕಾರದ ವಿವಿಧ ಸಂಸ್ಥೆಗಳು, ಇಲಾಖೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಅನೇಕ ಸಮೀಕ್ಷೆಗಳನ್ನು ನಡೆಸುತ್ತಲೇ ಬಂದಿವೆ. ಇಂತಹ ಸಮೀಕ್ಷೆಗಳು ಆಯಾ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಗುರುತಿಸಲು ದತ್ತಾಂಶಗಳನ್ನು ಒದಗಿಸುತ್ತವೆ. ಇದರಿಂದ ಸಮಸ್ಯೆಗಳಿಗೆ ಕಾರಣಗಳು ತಿಳಿಯುವುದಲ್ಲದೇ, ಅವುಗಳ ಪರಿಹಾರಕ್ಕೂ ಯೋಜನೆಗಳನ್ನು ರೂಪಿಸಬಹುದಾಗುತ್ತದೆ. ಸರ್ಕಾರವು ವಿವಿಧ ನೀತಿ ನಿಯಮಗಳನ್ನು ರೂಪಿಸುವಲ್ಲಿ ಸಮೀಕ್ಷೆಗಳು ನಿಖರವಾದ ದತ್ತಾಂಶಗಳನ್ನು ಒದಗಿಸುವುದರ ಮೂಲಕ ಅತಿ ಮುಖ್ಯ ಪಾತ್ರವನ್ನು ವಹಿಸುತ್ತವೆ.

**ಶೈಕ್ಷಣಿಕ ಸಮೀಕ್ಷೆಗಳು:** ಸ್ವತಂತ್ರ ಭಾರತದ ಮೊದಲ ಶೈಕ್ಷಣಿಕ ಸಮೀಕ್ಷೆಯನ್ನು 1956ರಲ್ಲಿ NCERT ಯು ಕೈಗೊಂಡಿತು. ದೇಶದಲ್ಲಿ ಶಿಕ್ಷಣದ ಸ್ಥಿತಿಗತಿಗಳು, ಶೈಕ್ಷಣಿಕ ಸೌಲಭ್ಯ ಮತ್ತು ಸಂಪನ್ಮೂಲಗಳ ಲಭ್ಯತೆ, ಶೈಕ್ಷಣಿಕ ವಲಯದಲ್ಲಿರುವ ಕುಂದುಕೊರತೆಗಳನ್ನು ತಿಳಿದುಕೊಳ್ಳುವುದು ಈ ಸಮೀಕ್ಷೆಯ ಪ್ರಮುಖ ಉದ್ದೇಶಗಳಾಗಿದ್ದವು. ಈ ಸಮೀಕ್ಷಾ ವರದಿಯ ಆಧಾರದ ಮೇಲೆಯೇ, ಭಾರತದ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿಯು 1968 ರಲ್ಲಿ ರೂಪುಗೊಂಡಿತು. 1956ರಲ್ಲಿ ಕೈಗೊಂಡ ಸಮೀಕ್ಷೆಗೆ ಹೊಸ ಮಾಹಿತಿಗಳನ್ನು ಸೇರಿಸಲು 1965ರಲ್ಲಿ ಎರಡನೆಯ ಅಖಿಲ ಭಾರತ ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಇದೇ ರೀತಿಯ ಸಮೀಕ್ಷೆಗಳನ್ನು ಓಅಇಖಖಿ ಯು ನಿಯಮಿತವಾಗಿ 1973, 1978, 1986, 1993, 2002 ಮತ್ತು 2009ರಲ್ಲಿ ರಾಷ್ಟ್ರಮಟ್ಟದಲ್ಲಿ ನಡೆಸಿದೆ. ಈ ಸಮೀಕ್ಷೆಗಳು ಶಿಕ್ಷಣ ನೀತಿ–ನಿಯಮಗಳನ್ನು ರೂಪಿಸುವಲ್ಲಿ, ಶೈಕ್ಷಣಿಕ ಉಪಕ್ರಮಗಳನ್ನು ಪ್ರಾರಂಭಿಸುವಲ್ಲಿ ಅಲ್ಲದೇ ಶೈಕ್ಷಣಿಕ ಯೋಜನೆಗಳನ್ನು ಯೋಜಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿವೆ.

**ವಿವಿಧ ಸಮೀಕ್ಷೆಗಳನ್ನು ಆಧರಿಸಿ ರಚಿತವಾದ ಶೈಕ್ಷಣಿಕ ಆಯೋಗಗಳು**

1. 1854 ರ ವುಡ್ಸ್ ಆಯೋಗ
2. 1882 ರ ಹಂಟರ್ ಆಯೋಗ
3. 1937 ರ ಗಾಂಧೀಜಿಯವರ ಮೂಲ ಶಿಕ್ಷಣ
4. 1948 ರ ರಾಧಾಕೃಷ್ಣ ಆಯೋಗ
5. 1952 ರ ಸೆಕೆಂಡರಿ ಶಿಕ್ಷಣ ಆಯೋಗ
6. 1953 ರ ಯೂನಿವರ್ಸಿಟಿ ಗ್ರಾಂಟ್ ಕಮಿಷನ್
7. 1964 ರ ಕೊಠಾರಿ ಆಯೋಗ
8. 1968 ರ ರಾಷ್ಟ್ರೀಯ ಶಿಕ್ಷಣ ನೀತಿ
9. 1986 ರ ರಾಷ್ಟ್ರೀಯ ಶಿಕ್ಷಣ ನೀತಿ
10. 2005 ರ ರಾಷ್ಟ್ರೀಯ ಜ್ಞಾನ ಆಯೋಗ
11. 2020 ರ ರಾಷ್ಟ್ರೀಯ ಶಿಕ್ಷಣ ನೀತಿ

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಜಾಲತಾಣವನ್ನು ವೀಕ್ಷಿಸಿ:

https://www.ncert.nic.in/all-india-school-education-survey.php

ನಿಮ್ಮ ಅನುಭವ ಹಂಚಿಕೊಳ್ಳಿ

ನೀವು ಇದುವರೆಗೂ ಯಾವ ಸಮೀಕ್ಷೆಗಳಲ್ಲಿ ಪಾಲ್ಗೊಂಡಿದ್ದೀರಿ? ಹೆಸರಿಸಿ.

## 3.2 ಶೈಕ್ಷಣಿಕ ಸಮೀಕ್ಷೆಗಳ ಹಿನ್ನೆಲೆ ಮತ್ತು ಅವಲೋಕನ:

ಶೈಕ್ಷಣಿಕ ಸಮೀಕ್ಷೆಗಳ ಹಿನ್ನೆಲೆಯು ಶಿಕ್ಷಣ ವ್ಯವಸ್ಥೆಯ ವಿವಿಧ ಅಂಶಗಳ ಬಗ್ಗೆ ವ್ಯವಸ್ಥಿತ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಸಂಗ್ರಹಿಸುವ ಅಗತ್ಯತೆಯಲ್ಲಿ ನೆಲೆಗೊಂಡಿದೆ. ಐತಿಹಾಸಿಕವಾಗಿ, ಹಲವಾರು ಕಾರಣಗಳಿಗಾಗಿ ಶೈಕ್ಷಣಿಕ ಸಮೀಕ್ಷೆಗಳನ್ನು ನಡೆಸಲಾಗಿದೆ:

- ➔ **ಶೈಕ್ಷಣಿಕ ನೀತಿ-ನಿಯಮಗಳ ಅಭಿವೃದ್ಧಿ:** ಸರ್ಕಾರಗಳು ಮತ್ತು ಶೈಕ್ಷಣಿಕ ಅಧಿಕಾರಿಗಳು ನೀತಿ ಅಭಿವೃದ್ಧಿ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ತಿಳಿಸಲು ಸಮೀಕ್ಷೆಗಳನ್ನು ಬಳಸುತ್ತಾರೆ. ವಿದ್ಯಾರ್ಥಿಗಳ ಸಾಧನೆ, ಶಾಲೆಯ ಕಾರ್ಯಕ್ಷಮತೆ ಮತ್ತು ಇತರ ಸಂಬಂಧಿತ ಅಂಶಗಳ ಮೇಲೆ ದತ್ತಾಂಶಗಳನ್ನು ಸಂಗ್ರಹಿಸುವ ಮೂಲಕ, ನೀತಿ ನಿರೂಪಕರು ಸುಧಾರಣೆಗೆ ಅಗತ್ಯವಿರುವ ಕ್ಷೇತ್ರಗಳನ್ನು ಗುರುತಿಸಬಹುದು ಮತ್ತು ಉದ್ದೇಶಿತ ಮಧ್ಯಸ್ಥಿಕೆಗಳನ್ನು ಅಭಿವೃದ್ಧಿಪಡಿಸಬಹುದು.
- ➔ **ಗುಣಮಟ್ಟದ ಭರವಸೆ:** ಶೈಕ್ಷಣಿಕ ಸಮೀಕ್ಷೆಗಳು ಶಿಕ್ಷಣ ವ್ಯವಸ್ಥೆಯಲ್ಲಿ ಗುಣಮಟ್ಟ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳು, ಬೋಧನೆಯ ಪರಿಣಾಮಕಾರಿತ್ವ ಮತ್ತು ಶಾಲೆಯ ವಾತಾವರಣವನ್ನು ನಿರ್ಣಯಿಸುವ ಮೂಲಕ, ಸಮೀಕ್ಷೆಗಳು ಮಧ್ಯಸ್ಥಗಾರರಿಗೆ ಒದಗಿಸಲಾದ ಶಿಕ್ಷಣದ ಒಟ್ಟಾರೆ ಗುಣಮಟ್ಟದ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ.
- ➔ **ಸಂಶೋಧನಾ ಉದ್ದೇಶಗಳು:** ಶೈಕ್ಷಣಿಕ ಸಮೀಕ್ಷೆಗಳು ಶಿಕ್ಷಣ ಕ್ಷೇತ್ರದಲ್ಲಿ ಜ್ಞಾನದ ಅರಿವನ್ನು ವಿಸ್ತರಿಸುತ್ತದೆ. ಪ್ರವೃತ್ತಿಗಳನ್ನು ಅನ್ವೇಷಿಸಲು, ಚರಾಂಶಗಳ ನಡುವಿನ ಸಂಬಂಧಗಳನ್ನು ಪರಿಶೋಧಿಸಲು ಮತ್ತು ಶೈಕ್ಷಣಿಕ ಫಲಿತಾಂಶಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗುರುತಿಸಲು ಸಂಶೋಧಕರು ಸಮೀಕ್ಷೆ ದತ್ತಾಂಶಗಳನ್ನು ಬಳಸುತ್ತಾರೆ.
- ➔ **ಕಾರ್ಯಕ್ರಮದ ಮೌಲ್ಯಮಾಪನ:** ಶಾಲೆಗಳು, ಜಿಲ್ಲೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಕಾರ್ಯಕ್ರಮಗಳು ಮತ್ತು ಉಪಕ್ರಮಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು ಸಮೀಕ್ಷೆಗಳನ್ನು ಬಳಸುತ್ತೇವೆ. ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಮತ್ತು ಇತರ ಮಧ್ಯಸ್ಥಗಾರರಿಂದ ಪ್ರತಿಕ್ರಿಯೆಯನ್ನು ಸಂಗ್ರಹಿಸುವ ಮೂಲಕ, ಶಿಕ್ಷಣತಜ್ಞರು ಮಧ್ಯಸ್ಥಿಕೆಗಳ ಪ್ರಭಾವವನ್ನು ನಿರ್ಣಯಿಸಬಹುದು ಮತ್ತು ಕಾರ್ಯಕ್ರಮದ ಮುಂದುವರಿಕೆ ಅಥವಾ ಮಾರ್ಪಾಡಿನ ಕುರಿತು ದತ್ತಾಂಶ-ಆಧಾರಿತ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು.

ಒಟ್ಟಾರೆಯಾಗಿ, ಶೈಕ್ಷಣಿಕ ಸಮೀಕ್ಷೆಗಳ ಹಿನ್ನೆಲೆಯು ದತ್ತಾಂಶವನ್ನು ಸಂಗ್ರಹಿಸಲು, ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಮತ್ತು ಶಿಕ್ಷಣ ವ್ಯವಸ್ಥೆಯೊಳಗೆ ಫಲಿತಾಂಶಗಳನ್ನು ಸುಧಾರಿಸಲು ದೀರ್ಘಕಾಲದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ತಂತ್ರಜ್ಞಾನ ಮತ್ತು ಸಂಶೋಧನಾ ವಿಧಾನಗಳು ವಿಕಸನಗೊಳ್ಳುತ್ತಲೇ ಇರುವುದರಿಂದ, ಶೈಕ್ಷಣಿಕ ಸಮೀಕ್ಷೆಗಳು ಶಿಕ್ಷಣದಲ್ಲಿ ನೀತಿ-ನಿಯಮಗಳು, ಸಂಶೋಧನೆ ಮತ್ತು ಆಚರಣೆಗಳನ್ನು ತಿಳಿಸಲು ಅಮೂಲ್ಯವಾದ ಸಾಧನವಾಗಿ ಉಳಿಯುತ್ತವೆ.

## 3.3 ಪ್ರಸ್ತುತ ಕೈಗೊಂಡಿರುವ ಶೈಕ್ಷಣಿಕ ಸಮೀಕ್ಷೆಗಳ ಅವಲೋಕನ:

➔ ಋಾಷ್ಟ್ರೀಯ ಸಾಧನಾ ಸಮೀಕ್ಷೆ (National Achievement Survey-NAS)

ರಾಷ್ಟ್ರೀಯ ಸಾಧನಾ ಸಮೀಕ್ಷೆಯನ್ನು ವಿವಿಧ ಹಂತ ಮತ್ತು ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ತಿಳಿಯಲು ನಡೆಸಲಾಗುತ್ತದೆ. ಈ ಸಾಧನಾ ಸಮೀಕ್ಷೆಗಳನ್ನು ಸಾಮಾನ್ಯವಾಗಿ ಮೂರು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. 2017 ಮತ್ತು 2021 ರಲ್ಲಿ ಸಾಧನಾ ಸಮೀಕ್ಷೆಗಳನ್ನು ನಡೆಸಲಾಗಿದೆ. ಮುಂದಿನ 2024 ರಲ್ಲಿ ಸಾಧನಾ ಸಮೀಕ್ಷೆಯನ್ನು ಇಡೀ ದೇಶಾದ್ಯಂತ ಕೈಗೊಳ್ಳುವ ಸಂಭವವಿದೆ. ತರಗತಿಗಳನ್ನು ಮತ್ತು ಶಾಲೆಗಳನ್ನು ಒಂದು ನಿರ್ದಿಷ್ಟ ಕ್ರಮ ಅನುಸರಿಸಿ ಆಯ್ಕೆ ಮಾಡಲಾಗುತ್ತದೆ.

**ರಾಷ್ಟ್ರೀಯ ಸಾಧನಾ ಪರೀಕ್ಷೆ 2021:** ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ತಿಳಿಯಲು ಈ ಸಮೀಕ್ಷೆಯನ್ನು ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಸಲಾಗಿದೆ. ವಿದ್ಯಾರ್ಥಿಗಳ ಕಲಿಕೆಯ ಜೊತೆಗೆ ಕೋವಿಡ್ ಸಮಯದಲ್ಲಿ ಪರ್ಯಾಯ ವಿಧಾನದ ಮೂಲಕ ಅವರು ಕಲಿಕೆಗೆ ತೊಡಗಿಸಿಕೊಂಡಿರುವ ಬಗ್ಗೆ, ಶಾಲೆಯ ಮೂಲಭೂತ ಸೌಕರ್ಯಗಳ ಬಗ್ಗೆ, ಪೋಷಕರ ಬೆಂಬಲದ ಬಗ್ಗೆ ತಿಳಿದುಕೊಳ್ಳಲು ಶಾಲಾ ಪ್ರಶ್ನಾವಳಿ, ಶಿಕ್ಷಕರ ಪ್ರಶ್ನಾವಳಿ, ವಿದ್ಯಾರ್ಥಿ ಪ್ರಶ್ನಾವಳಿಗಳ ಮೂಲಕ ಸಮೀಕ್ಷೆ ನಡೆಸಿ ಫಲಿತಾಂಶವನ್ನು ವಿಶ್ಲೇಷಿಸಲಾಗಿದೆ. ಸಾಧನಾ ಪರೀಕ್ಷೆಗಳನ್ನು ನಡೆಸಲು ಮೌಲ್ಯಾಂಕನಕಾರರಿಗೆ ಪೂರ್ವಭಾವಿಯಾಗಿ ತರಬೇತಿ ನೀಡಿ, ಬ್ಲಾಕ್ ಹಂತದಿಂದ ರಾಷ್ಟ್ರಮಟ್ಟದವರೆಗಿನ ವಿವಿಧ ಹಂತದ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಸಲಾಗಿದೆ. ಈ ಸಾಧನಾ ಸಮೀಕ್ಷೆಯು ವಿದ್ಯಾರ್ಥಿಗಳ ಅಥವಾ ಶಾಲೆಗಳ ವೈಯಕ್ತಿಕ ಸಾಧನೆಯನ್ನು ಮೌಲ್ಯಾಂಕನ ಮಾಡುವುದಿಲ್ಲ. ಇದು ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ತರಗತಿವಾರು ಮತ್ತು ವಿಷಯವಾರು ಆಯ್ದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಮತ್ತು ಸಂಬಂಧಿತ ಶಾಲೆಗಳ ಶೈಕ್ಷಣಿಕ ಪ್ರಗತಿ ಮತ್ತು ಮೂಲಸೌಕರ್ಯಗಳ ಚಿತ್ರಣವನ್ನು ನೀಡುತ್ತದೆ

2017 ಮತ್ತು 2021 ರಲ್ಲಿ ನಡೆದ ರಾಷ್ಟ್ರೀಯ ಸಾಧನಾ ಸಮೀಕ್ಷೆಯ ಫಲಿತಾಂಶಗಳನ್ನು ಅವಲೋಕನಕ್ಕಾಗಿ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ತರಗತಿ: 3**

| SUBJECT | 2017 Performance in Percentage | | 2021 Performance in Percentage | |
|---|---|---|---|---|
| | State | National | State | National |
| Language | 78 | 68 | 62.16 | 62.04 |
| Mathematics | 75 | 64 | 57.14 | 57.04 |
| EVS | 74 | 65 | 58.14 | 57.04 |

**ತರಗತಿ: 5**

| SUBJECT | 2017 Performance in Percentage | | 2021 Performance in Percentage | |
|---|---|---|---|---|
| | State | National | State | National |
| Language | 71 | 58 | 57.16 | 55.04 |
| Mathematics | 67 | 53 | 44.13 | 44.03 |
| EVS | 68 | 57 | 46.12 | 48.03 |

**ತರಗತಿ: 8**

| SUBJECT | 2017 Performance in Percentage | | 2021 Performance in Percentage | |
|---|---|---|---|---|
| | State | National | State | National |
| Language | 63 | 57 | 52.12 | 53.03 |
| Mathematics | 51 | 42 | 35.09 | 36.03 |
| Science | 53 | 44 | 39.09 | 39.02 |
| Social Science | 51 | 44 | 40.09 | 39.02 |

**ತರಗತಿ: 10**

| SUBJECT | 2017 Performance in Percentage | | 2021 Performance in Percentage | |
|---|---|---|---|---|
| | State | National | State | National |
| Language | 42.36 | 36 | 46.11 | 43.03 |
| Mathematics | 38.33 | 34 | 32.08 | 32.02 |
| Science | 38.04 | 34 | 35.07 | 35.02 |
| Social Science | 42.36 | 39 | 39.08 | 37.02 |
| MIL Comprehension | 54.35 | 49 | 35.07 | 41.02 |

**ಹೆಚ್ಚಿನ ಓದಿಗಾಗಿ:**

https://nas.gov.in ಜಾಲತಾಣವನ್ನು ಗಮನಿಸಬಹುದು.

**ಗುಂಪು ಚರ್ಚೆ:** ಮೇಲಿನ ದತ್ತಾಂಶಗಳಲ್ಲಿ, ಪ್ರಾಥಮಿಕ ಹಂತದಿಂದ ಮುಂದುವರೆದಂತೆ ಫಲಿತಾಂಶದಲ್ಲಿ ಆಗಿರುವ ಬದಲಾವಣೆಗಳೇನು? ಇದರ ಬಗ್ಗೆ ನೀವು ಹೇಗೆ ಪರಿಭಾವಿಸುವಿರಿ?

## ರಾಜ್ಯ ಕಲಿಕಾ ಸಾಧನಾ ಸಮೀಕ್ಷೆ– 2022–23 (CSAS Census Based State Achievement Survey)

ಕರ್ನಾಟಕ ರಾಜ್ಯದಲ್ಲಿ 2015 ರಲ್ಲಿ 4 ರಿಂದ 9 ನೇ ತರಗತಿವರೆಗಿನ 53889 ಶಾಲೆಗಳ 35,19,676 ವಿದ್ಯಾರ್ಥಿಗಳಿಗೆ ಮತ್ತು 2018 ರಲ್ಲಿ 4 ರಿಂದ 10 ನೇ ತರಗತಿವರೆಗಿನ 53,964 ಶಾಲೆಗಳ 40,70, 302 ಲಕ್ಷ ವಿದ್ಯಾರ್ಥಿಗಳಿಗೆ ಗಣತಿ ಆಧಾರಿತ ಕಲಿಕಾ ಸಾಧನಾ ಸಮೀಕ್ಷೆಯನ್ನು ನಡೆಸಲಾಗಿದ್ದು, ಈ ಸಮೀಕ್ಷೆಯು ಭಾರತದಲ್ಲಿ ಅತ್ಯಂತ ದೊಡ್ಡ ಪ್ರಮಾಣದ ಕಲಿಕಾ ಸಾಧನಾ ಸಮೀಕ್ಷೆಯಾಗಿತ್ತು. ನಂತರದ ವರ್ಷಗಳಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹಾಗೂ ಇತರೆ ಕಾರಣಗಳಿಂದಾಗಿ ಸಮೀಕ್ಷೆಯನ್ನು ನಡೆಸಲು ಸಾಧ್ಯವಾಗಿರಲಿಲ್ಲ. 2022–23 ನೇ ಸಾಲಿನಲ್ಲಿ 3,5,8,9 ಮತ್ತು 10 ನೇ ತರಗತಿಗಳ 3312 ಆಯ್ದ ಶಾಲೆಗಳ 2,11,843 ವಿದ್ಯಾರ್ಥಿಗಳಿಗೆ ದಿನಾಂಕ 17.01.2023 ಮತ್ತು 18.01.2023 ರಲ್ಲಿ ನಡೆಸಲಾಯಿತು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಡಿಯಲ್ಲಿನ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ(ಏಖಇಂః) ಅಂಗಸಂಸ್ಥೆಯಾದ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತಿನ (KSQAAC) ಮೂಲಕ ರಾಜ್ಯ ಕಲಿಕಾ ಸಾಧನಾ ಸಮೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ.

### ಸಮೀಕ್ಷೆಯ ಫಲಿತಗಳು:

- ➔ 3 ಮತ್ತು 5 ನೇ ತರಗತಿಯಲ್ಲಿ ಕಲಿಕೆ ಉತ್ತಮವಾಗಿದ್ದು 8, 9 ಮತ್ತು 10 ನೇ ತರಗತಿಯಲ್ಲಿ ಕಲಿಕಾ ಪ್ರಗತಿ ಕುಂಠಿತವಾಗಿರುವುದು ಕಂಡುಬಂದಿದೆ.
- ➔ ಬಾಲಕ ಮತ್ತು ಬಾಲಕಿಯರ ಕಲಿಕೆಯ ನಡುವೆ ಹೆಚ್ಚಿನ ಅಂತರವೇನೂ ಕಂಡುಬಂದಿರುವುದಿಲ್ಲ. ಆದರೆ 8, 9 ಮತ್ತು 10ನೇ ತರಗತಿಯಲ್ಲಿ ವಿದ್ಯಾರ್ಥಿಗಳ ಸಾಧನೆ ಕಡಿಮೆ ಇದ್ದು ಗುಣಮಟ್ಟವನ್ನು ಸುಧಾರಿಸುವ ಕ್ರಮದ ಅವಶ್ಯಕತೆ ಇರುತ್ತದೆ.
- ➔ ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನು ಹೋಲಿಸಿದಾಗ 3 ಮತ್ತು 5 ನೇ ತರಗತಿಯಲ್ಲಿ ಗಮನಾರ್ಹ ವ್ಯತ್ಯಾಸವೇನಿರುವುದಿಲ್ಲ. 8, 9 ಮತ್ತು 10 ನೇ ತರಗತಿಯಲ್ಲಿ ನಗರ ಪ್ರದೇಶದ ಶಾಲೆಗಳಲ್ಲಿ ಕಲಿಕಾ ಸಾಧನೆ ಕಡಿಮೆ ಇದ್ದು, ನಗರ ಪ್ರದೇಶದ ಶಾಲೆಗಳ ಕಡೆ ಹೆಚ್ಚು ಗಮನ ಹರಿಸಬೇಕಾಗಿರುತ್ತದೆ.
- ➔ ವರ್ಗವಾರು ಕಲಿಕಾ ಸಾಧನೆ ಪರಿಶೀಲಿಸಿದಾಗ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಸಾಧನೆ ಕಡಿಮೆ ಇದ್ದು ಪ್ರತ್ಯೇಕ ಯೋಜನೆ ರೂಪಿಸುವ ಅಗತ್ಯತೆಯನ್ನು ತಿಳಿಸಿದೆ.
- ➔ A (ನಗರ), B (ಅರೆ ನಗರ) ಮತ್ತು C (ಗ್ರಾಮೀಣ) ವಲಯದ ಶಾಲೆಗಳಲ್ಲಿ A ವಲಯದ ಕಲಿಕಾ ಸಾಧನೆ ಪ್ರೌಢಶಾಲೆಗಳಲ್ಲಿ ಕಡಿಮೆ ಇರುವುದು ಕಂಡುಬಂದಿದೆ.
- ➔ ವಿಷಯವಾರು ವಿಶ್ಲೇಷಣೆ ಗಮನಿಸಿದಾಗ ಪ್ರೌಢಶಾಲೆಗಳ ಗಣಿತ ಮತ್ತು ವಿಜ್ಞಾನ ವಿಷಯಗಳ ವಿದ್ಯಾರ್ಥಿಗಳ ಕಲಿಕಾ ಸಾಧನೆ ಬಹಳ ಕಡಿಮೆ ಇದ್ದು, ಮೂಲ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ವಿಷಯವಾರು ಪ್ರತ್ಯೇಕ ಯೋಜನೆ ರೂಪಿಸುವ ಅವಶ್ಯಕತೆ ಇದೆ.
- ➔ ಆದರ್ಶ ಶಾಲೆಗಳ ವಿದ್ಯಾರ್ಥಿಗಳ ಕಲಿಕಾ ಸಾಧನೆ ಎಲ್ಲಾ ವಿಷಯಗಳಲ್ಲಿ ಉತ್ತಮವಾಗಿದ್ದು ಉಳಿದ ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಧನೆ ಸುಧಾರಿಸಲು ಕ್ರಮ ಕೈಗೊಳ್ಳಬೇಕಿದೆ.
- ➔ ವಿದ್ಯಾರ್ಥಿಗಳಿಗೆ ನೀಡಿದ ಪ್ರಶ್ನೆಪತ್ರಿಕೆಯಲ್ಲಿ ಬಹು ಆಯ್ಕೆ ಮತ್ತು ವಿವರಣಾತ್ಮಕ ಪ್ರಶ್ನೆಗಳನ್ನು ನೀಡಿದ್ದು, ವಿದ್ಯಾರ್ಥಿಗಳು ಬಹು ಆಯ್ಕೆ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದ್ದು, ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರಿಸಲು ವಿದ್ಯಾರ್ಥಿಗಳು ಸಮಸ್ಯೆಗಳನ್ನು ಎದುರಿಸಿದ್ದು, ಅವರ ಬರೆವಣಿಗೆ ಸಾಮರ್ಥ್ಯ ಕಡಿಮೆಯಾಗಿರುವುದು ಕಂಡುಬಂದಿದೆ. ವಿದ್ಯಾರ್ಥಿಗಳ ಬರೆವಣಿಗೆ ಸಾಮರ್ಥ್ಯ ವೃದ್ಧಿಸಲು ಉತ್ತಮ ಯೋಜನೆಗಳನ್ನು ರೂಪಿಸುವ ಅಗತ್ಯತೆ ಇರುವುದು ಕಂಡು ಬಂದಿದೆ.

### ಚಿಂತನಶೀಲ ಪ್ರಶ್ನೆಗಳು:

1. ASER ಸಮೀಕ್ಷೆಯ ಬಗ್ಗೆ ನಿಮಗೆ ತಿಳಿದಿರುವ ವಿಷಯಗಳೇನು?

2. ಸಾಧನಾ ಸಮೀಕ್ಷೆ (Achievement Survey) ಮತ್ತು ಸಾಧನಾ ಪರೀಕ್ಷೆ (Achievement Test) ಇವೆರೆಡೂ ಒಂದೇ ಆಗಿದೆ ಎಂದು ನೀವು ಭಾವಿಸುವಿರಾ? ಚರ್ಚಿಸಿ.

- **ವಾರ್ಷಿಕ ಶಿಕ್ಷಣ ವರದಿ (ASER-Annual Status of Education Report):**

ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ನಿರ್ಣಯಿಸಲು ಭಾರತದಲ್ಲಿ ನಡೆಸಿದ ಪ್ರಮುಖ ಸಮೀಕ್ಷೆಯಾಗಿದೆ. ೦ಖಇಖ ಸಮೀಕ್ಷೆಯನ್ನು ಪ್ರಥಮ್ ಸಂಸ್ಥೆ ಸಾಮಾನ್ಯವಾಗಿ ನಡೆಸುತ್ತದೆ. ಸಾಕ್ಷರತೆ, ಸಂಖ್ಯಾಶಾಸ್ತ್ರ ಮತ್ತು ಶಾಲಾ ದಾಖಲಾತಿ ಸೇರಿದಂತೆ ಶಿಕ್ಷಣದ ವಿವಿಧ ಅಂಶಗಳ ಬಗ್ಗೆ ಮೌಲ್ಯಯುತ ಒಳನೋಟಗಳನ್ನು ಈ ಸಮೀಕ್ಷೆ ಒದಗಿಸುತ್ತದೆ. ASER ವರದಿಯು ಸಾಮಾನ್ಯವಾಗಿ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ ವಿವಿಧ ವಯೋಮಾನದ ಮಕ್ಕಳ ಶೈಕ್ಷಣಿಕ ಸ್ಥಿತಿ, ಶಾಲಾ ಮೂಲಸೌಕರ್ಯ, ಶಿಕ್ಷಕರ ಹಾಜರಾತಿ ಮತ್ತು ಇತರ ಸಂಬಂಧಿತ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ನೀತಿ–ನಿರೂಪಕರು, ಶಿಕ್ಷಣತಜ್ಞರು, ಸಂಶೋಧಕರು ಮತ್ತು ಎನ್‌ಜಿಒಗಳಿಗೆ ಇದು ಅಮೂಲ್ಯವಾದ ಸಂಪನ್ಮೂಲವಾಗಿದೆ.

**ಚಟುವಟಿಕೆ:** 2023 ರಲ್ಲಿ ನಡೆಸಲಾದ Beyond Basic ಎಂಬ ASER ವರದಿಯಲ್ಲಿ 26 ರಾಜ್ಯಗಳಲ್ಲಿನ 14 ರಿಂದ 18 ವಯೋಮಾನದ 34,745 ಮಕ್ಕಳನ್ನು ಸಮೀಕ್ಷೆಗೆ ಒಳಪಡಿಸಲಾಯಿತು. ಈ ವಯೋಮಾನದ ಮಕ್ಕಳು ಕೈಗೊಳ್ಳುವ ವಿವಿಧ ಚಟುವಟಿಕೆಗಳಾವುವು? ಶಾಲೆಗೆ ಹೋಗುತ್ತಿದ್ದಾರೆಯೇ? ಪರೀಕ್ಷೆಗೆ ತಯಾರಿ ನಡೆದಿದೆಯೇ? ಕೆಲಸಕ್ಕೆ ಹೋಗುತ್ತಿದ್ದಾರೆಯೇ? ಇವರಿಗೆ ಅಂಕಗಣಿತದ ಮೂಲ ಸಾಮರ್ಥ್ಯಗಳಿವೆಯೇ? ನಿತ್ಯಜೀವನದಲ್ಲಿ ರಿಯಾಯಿತಿ, ಶೇಕಡ ಮೊದಲಾದ ಪರಿಕಲ್ಪನೆಗಳನ್ನು ಅನ್ವಯಿಸುತ್ತಾರೆಯೇ? ಅವರಲ್ಲಿ ಎಷ್ಟು ಜನ ಮೊಬೈಲ್ ಬಳಸುತ್ತಾರೆ? ಮೊಬೈಲ್‌ನ್ನು ಏಕೆ ಬಳಸುತ್ತಾರೆ? ಡಿಜಿಟಲ್ ತಂತ್ರಜ್ಞಾನದ ಅರಿವು ಇದೆಯೇ? ಅವರು ಭವಿಷ್ಯದಲ್ಲಿ ಯಾವ ಕೆಲಸ ಮಾಡಲು ಇಷ್ಟಪಡುತ್ತಾರೆ? ಎಲ್ಲಿಯವರೆಗೆ ಓದಲು ಬಯಸುತ್ತಾರೆ? ಅವರ ಮಾದರಿ ವ್ಯಕ್ತಿ ಯಾರು? ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಮೀಕ್ಷೆಯನ್ನು ನಡೆಸಿ, ದತ್ತಾಂಶಗಳನ್ನು ವಿಶ್ಲೇಷಿಸಿ ವರದಿಯನ್ನು ಸಿದ್ಧಪಡಿಸಲಾಯಿತು. ಈ ವರದಿಯ ಬಗ್ಗೆ ತಿಳಿಯಲು ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ.

https://asercentre.org/wp-content/uploads/2022/12/ASER-2023-Report-1.pdf

## 3.4 ಶೈಕ್ಷಣಿಕ ಸಮೀಕ್ಷೆಗಳ ಅಧ್ಯಯನ ವಿಧಾನಗಳು:

1. **ಅಡ್ಡ ವಿಭಾಗೀಯ ಸಮೀಕ್ಷೆ (Cross-Sectional Survey):** ಅಧ್ಯಯನಕಾರರು ಶೈಕ್ಷಣಿಕ ಕ್ಷೇತ್ರ ಬಗ್ಗೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲು ಬಯಸಿದಾಗ ಅಡ್ಡ ವಿಭಾಗೀಯ ಸಮೀಕ್ಷೆಗಳನ್ನು ಸಂಶೋಧಕರು ಬಳಸುತ್ತಾರೆ. ಎಂದರೆ ವಿವಿಧ ರೀತಿಯ ಗುಂಪುಗಳಿಂದ ದತ್ತಾಂಶವನ್ನು (ಅದು ವಯಸ್ಸು, ಲಿಂಗ, ಗುಂಪು, ರಾಷ್ಟ್ರ, ಬುಡಕಟ್ಟು ಇತ್ಯಾದಿ) ಒಂದೇ ಸಮಯದಲ್ಲಿ ಪಡೆದುಕೊಳ್ಳುವಂತಹದಾಗಿರುತ್ತದೆ. ಉದಾಹರಣೆಗೆ: ವಿವಿಧ ವಯೋಮಾನದ ಮಕ್ಕಳ ಸಾಮಾಜಿಕೀಕರಣದ ಪರಿಣಾಮದ ಅಧ್ಯಯನ ಮುಂತಾದುವಗಳನ್ನು ಅಧ್ಯಯನ ಮಾಡಲು ಬಯಸಿದಾಗ ಮಾತ್ರ ಈ ರೀತಿಯ ಸಂಶೋಧನೆಯನ್ನು ಬಳಸಲಾಗುತ್ತದೆ.
2. **ನೀಳ ಸಮೀಕ್ಷೆ (Longitudinal Survey):** ಅಧ್ಯಯನಕಾರರು ಯಾವುದೇ ಶೈಕ್ಷಣಿಕ ಯೋಜನೆಯ ದೀರ್ಘಕಾಲದವರೆಗಿನ ಪರಿಣಾಮವನ್ನು ತಿಳಿಯಲು ನೀಳ ಸಮೀಕ್ಷೆಗಳನ್ನು ಬಳಸಬಹುದು. ಉದಾಹರಣೆಗೆ, ವಿವಿಧ ವಯೋಮಾನದ ಮಕ್ಕಳ ವರ್ತನೆಯ ಬದಲಾವಣೆಗಳು ಮತ್ತು ಫಲಾನುಭವಿ ಕ್ಷೇತ್ರಗಳ ಮೇಲೆ ಬೀರುವ ದೀರ್ಘಕಾಲ ಪರಿಣಾಮ ಇವುಗಳನ್ನು ತಿಳಿಯಲು ಬಳಸಬಹುದು.

ಈ ರೀತಿಯ ವಿಶಾಲ ಹಿನ್ನಲೆಯಲ್ಲಿ ನಾವು ಸಮೀಕ್ಷೆಯನ್ನು ಕೈಗೊಳ್ಳುವಲ್ಲಿ ಮೂರು ರೀತಿಯ ವಿಧಗಳನ್ನು ಕಾಣಬಹುದು.

i. **ಪರಿಶೋಧನಾತ್ಮಕ/(Investigative) ಸಮೀಕ್ಷೆ:** ಪರಿಶೋಧನಾತ್ಮಕ ಸಮೀಕ್ಷೆಯು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅವಕಾಶಗಳನ್ನು ಅನ್ವೇಷಿಸುವ ಗುರಿಯನ್ನು ಹೊಂದಿದೆ. ಈ ಸಮೀಕ್ಷೆಯು ಶೈಕ್ಷಣಿಕ ಬೆಳವಣಿಗೆಗೆ ಸಹಾಯಕವಾಗುವ ಸಂಭಾವ್ಯ ಕ್ಷೇತ್ರಗಳನ್ನು ಅನ್ವೇಷಿಸಲು ಮತ್ತು ಶೈಕ್ಷಣಿಕ ಆಸಕ್ತಿಯ ಸಂಶೋಧನಾ ವಿಷಯದ ಕುರಿತು ಹೊಸ ಒಳನೋಟಗಳನ್ನು ಗುರುತಿಸುವ ಗುರಿಯನ್ನು ಹೊಂದಿದೆ. ಈ ರೀತಿಯ ಸಮೀಕ್ಷೆಯು ಗುಣಾತ್ಮಕ ಫಲಿತಾಂಶಗಳಿಗೆ ಕಾರಣವಾಗುವ ಮುಕ್ತ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಫಲಾನುಭವಿ ಗುಂಪುಗಳು ಹೇಗೆ ಬಳಸಿಕೊಂಡಿವೆ ಮತ್ತು ಅವರಿಗಾದ ಅನುಭವವನ್ನು

ಹೇಗೆ ಸುಧಾರಿಸಬಹುದು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದರೆ ಅಂತಹ ಕ್ಷೇತ್ರಗಳಿಗೆ ಪರಿಶೋಧನಾ ಸಮೀಕ್ಷೆಯು ಅತ್ಯಂತ ಪರಿಣಾಮಕಾರಿ ವಿಧವಾಗಿದೆ. ಇಂತಹ ಸಮೀಕ್ಷೆಯು ಸಂಬಂಧಿಸಿದ ಕ್ಷೇತ್ರಗಳಲ್ಲಿ ಹೆಚ್ಚು ಜ್ಞಾನವನ್ನು ಗಳಿಸಲು ಸೂಕ್ತವಾಗಿವೆ.

ii. **ವಿವರಣಾತ್ಮಕ ಸಮೀಕ್ಷೆ:** ಈ ಸಮೀಕ್ಷೆಯು ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಫಲಾನುಭವಿಗಳು, ಪೋಷಕರು ಮತ್ತು ಭಾಗೀದಾರರ ಅಭಿಪ್ರಾಯಗಳನ್ನು ವಿವರಿಸುವ ಗುರಿಯನ್ನು ಹೊಂದಿದೆ. ಶೈಕ್ಷಣಿಕ ಸಂಶೋಧನೆಯು ಪರಿಮಾಣಾತ್ಮಕ ದತ್ತಾಂಶಕ್ಕೆ ಕಾರಣವಾಗುವ ಹೆಚ್ಚು ರಚನಾತ್ಮಕ, ನಿರ್ದಿಷ್ಟ ಮತ್ತು ಸ್ಪಷ್ಟತೆಯನ್ನು ಒಳಗೊಂಡ ಪ್ರಶ್ನೆಗಳ ಗುಂಪಾಗಿದೆ. ಈ ರೀತಿಯ ಸಮೀಕ್ಷೆ, ಅಧ್ಯಯನ ಕ್ಷೇತ್ರವು ಒಂದು ನಿರ್ದಿಷ್ಟ ವಿಷಯವನ್ನು ಹೇಗೆ ಸ್ವೀಕರಿಸುತ್ತದೆ ಎಂಬುದನ್ನು ವಿವರಿಸುವ ಗುರಿಯನ್ನು ಹೊಂದಿದೆ. ಒಂದು ನಿರ್ದಿಷ್ಟ ಬೋಧನಾ ವಿಧಾನ/ ಕಾರ್ಯಕ್ರಮವು ಅದರ ವಿದ್ಯಾರ್ಥಿಗಳ/ಫಲಾನುಭವಿಗಳ ಅಗತ್ಯಗಳಿಗೆ ಸರಿಹೊಂದುತ್ತದೆಯೇ ಎಂದು ತಿಳಿಯಲು ಶಿಕ್ಷಣ ಇಲಾಖೆ ಬಯಸಿದರೆ, ವಿವರಣಾತ್ಮಕ ಸಮೀಕ್ಷೆ ಸೂಕ್ತವಾಗುತ್ತದೆ.

iii. **ಮುನ್ಸೂಚಕ (Predictive) ಸಮೀಕ್ಷೆ:** ಈ ಸಮೀಕ್ಷೆಯು ಶೈಕ್ಷಣಿಕ ಕಾರ್ಯಕ್ರಮಗಳು, ಯೋಜನೆ ಮತ್ತು ಉಪಕ್ರಮಗಳ ಅನುಷ್ಠಾನದ ಕಾರಣ–ಪರಿಣಾಮದ ಸಂಬಂಧದ ಮೂಲಕ ಅದರ ಪ್ರವೃತ್ತಿಯನ್ನು ಊಹಿಸುವ ಗುರಿಯನ್ನು ಹೊಂದಿದೆ. ಈ ವಿಧದ ಸಮೀಕ್ಷೆಯು ನಿರ್ದಿಷ್ಟವಾಗಿದ್ದು ಪ್ರಯೋಗದ ಮೂಲಕ ಎರಡು ಚರಾಂಶಗಳ ನಡುವಿನ ಕಾರಣ ಮತ್ತು ಪರಿಣಾಮದ ಸಂಬಂಧವನ್ನು "ಮುನ್ಸೂಚಿಸುವ" ಗುರಿಯನ್ನು ಹೊಂದಿದೆ. ಈ ರೀತಿಯ ಶೈಕ್ಷಣಿಕ ಸಮೀಕ್ಷೆಯು ಪರಿಮಾಣಾತ್ಮಕ ಫಲಿತಾಂಶಗಳಿಗೆ ಕಾರಣವಾಗುತ್ತವೆ ಮತ್ತು ಎರಡು ಚರಾಂಶಗಳ ನಡುವೆ ಇರುವ ಮಾದರಿಯನ್ನು ವಿವರಿಸಲು ನಿರ್ದಿಷ್ಟವಾಗಿ ಬಳಸಲಾಗುತ್ತದೆ. ಉದಾಹರಣೆಗೆ, ಒಂದು ನಿರ್ದಿಷ್ಟ ಬೋಧನಾ ವಿಧಾನ ಮಕ್ಕಳ ಕಲಿಕೆಯನ್ನು ಹೆಚ್ಚಿಸುತ್ತದೆಯೇ ಎಂದು ತಿಳಿಯಲು ಬಯಸಿದರೆ ಮುನ್ಸೂಚಕ ಸಮೀಕ್ಷೆಯು ಅತ್ಯಂತ ಸೂಕ್ತವಾಗಿದೆ.

## 3.5 ಶೈಕ್ಷಣಿಕ ಸಮೀಕ್ಷೆಗಳನ್ನು ಕೈಗೊಳ್ಳುವ ತಂತ್ರಗಳು:

a. **ಆನ್‌ಲೈನ್ ಸಮೀಕ್ಷೆ:** ಈ ವಿಧಾನವು ವಿಭಿನ್ನ ಪ್ರಶ್ನೆ ಪ್ರಕಾರಗಳು, ಬಹುಆಯ್ಕೆ, ದರ್ಜಾ ಮಾಪನ ಆಧಾರಿತ ಪ್ರಶ್ನೆಗಳಿಗೆ ಸೂಕ್ತವಾಗಿದೆ.

b. **ಮುಖಾಮುಖಿ ಸಮೀಕ್ಷೆಗಳು:** ಸಂದರ್ಶಕರು ಪೂರ್ವನಿಯೋಜಿತ ಸಮಯ ಮತ್ತು ಸ್ಥಳದಲ್ಲಿ ಪ್ರತಿಸ್ಪಂದಕರನ್ನು (Respondents) ಭೇಟಿಯಾಗುವುದರಿಂದ ಮುಖಾಮುಖಿ ಸಮೀಕ್ಷೆಗಳಿಗೆ ಪ್ರತಿಕ್ರಿಯಿಸಿದವರ ಕಡೆಯಿಂದ ಶೀಘ್ರವಾಗಿ ಮಾಹಿತಿಯನ್ನು ಪಡೆಯಬಹುದು. ಆದ್ದರಿಂದ ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹಿಸುವಾಗ ಸಂದರ್ಶಕರು ನೇರವಾಗಿ ಮಾಹಿತಿ ನೀಡುವವರೊಂದಿಗೆ ಕೆಲಸ ಮಾಡುತ್ತಾರೆ ಮತ್ತು ಅವರ ಅನುಮಾನಗಳನ್ನು ಬಗೆಹರಿಸುತ್ತಾರೆ. ಕಡಿಮೆ ಸಾಕ್ಷರತೆ ಹೊಂದಿರುವ ಪ್ರತಿಸ್ಪಂದಕರಿಗೆ ಮುಖಾಮುಖಿ ಸಮೀಕ್ಷೆಗಳು ಸೂಕ್ತವಾಗಿರುತ್ತದೆ. ಹೆಚ್ಚುವರಿಯಾಗಿ,ಹೆಚ್ಚು ಮುಕ್ತ ಪ್ರಶ್ನೆಗಳನ್ನು ಕೇಳುವ ಮೂಲಕ ಆಳವಾದ ಒಳನೋಟಗಳನ್ನು ಹೊರತರಲು ಇದು ಸಹಾಯ ಮಾಡುತ್ತದೆ.

c. **ಫೋಕಸ್ ಗುಂಪುಗಳು:** ಮುಖಾಮುಖಿ ಸಮೀಕ್ಷೆಯಂತೆ, ಫೋಕಸ್ ಗುಂಪು ಸಮೀಕ್ಷೆ ಲಾಭದಾಯಕ ಹಾಗೂ ಇದರಲ್ಲಿ ವ್ಯಕ್ತಿಗತವಾಗಿ ಮಾಹಿತಿಯನ್ನು ಪಡೆಯಬಹುದು. ಪ್ರಶ್ನಾವಳಿಯಲ್ಲಿ ಪಡೆದ ಉತ್ತರದಲ್ಲಿ ಗೊಂದಲವಾದರೆ ಅಥವಾ ಸ್ಪಷ್ಟತೆ ಇಲ್ಲದಿದ್ದರೆ ಸೂಕ್ತ ಮಾಹಿತಿಯನ್ನು ಪಡೆಯಲು ಈ ವಿಧಾನವನ್ನು ಬಳಸಲಾಗುವುದು. ಸುಗಮಕಾರರು, ಗುಂಪನ್ನು ಮುನ್ನಡೆಸುವಾಗ ಪ್ರತಿ ವಿಷಯದ ಕುರಿತು ತಮ್ಮ ಪ್ರತಿಕ್ರಿಯೆಯನ್ನು ಹಂಚಿಕೊಳ್ಳಬಹುದು.

d. **ಪ್ಯಾನಲ್ ಮಾದರಿ:** ಪ್ಯಾನಲ್ ಗುಂಪಿನಲ್ಲಿ ಭಾಗವಹಿಸಲು ಉದ್ದೇಶಿತ ಗುಂಪಿನಿಂದ ಯಾದೃಚ್ಛಿಕವಾಗಿ ಮಾದರಿಯನ್ನು ಆಯ್ಕೆಮಾಡುವುದು. ಈ ಗುಂಪು ಅಧ್ಯಯನದ ಭಾಗವಾಗಿದ್ದು, ಸಮೀಕ್ಷಾ ಪ್ರಶ್ನಾವಳಿಯನ್ನು ಬಳಸಿ ಇವರಿಂದ ಮಾಹಿತಿಯನ್ನು ತೆಗೆದುಕೊಳ್ಳಲಾಗುವುದು.

e. **ಫೋನ್ ಸಮೀಕ್ಷೆ:** ಇಂದಿನ ವೈಜ್ಞಾನಿಕ ತಂತ್ರಜ್ಞಾನದ ಯುಗದಲ್ಲಿ ಬಹುಶಃ ಎಲ್ಲರ ಮನೆಯಲ್ಲೂ ಫೋನ್ ಇದ್ದೇ ಇರುತ್ತದೆ. ಫೋನ್‌ಗಳ ಮೂಲಕ ಸಮೀಕ್ಷೆಗೆ ಅಗತ್ಯವಾದ ಮಾಹಿತಿಯನ್ನು ಸಮೀಕ್ಷಾ

ಫಲಾನುಭವಿಗಳಿಂದ ಸೂಕ್ತ ಪ್ರಶ್ನಾವಳಿಗಳ ಮೂಲಕ ಪಡೆಯಬಹುದು. ಅದಕ್ಕಾಗಿಯೇ ಫೋನ್ ಸಮೀಕ್ಷೆಗಳು ಹೆಚ್ಚು ಅನುಕೂಲಕರವಾಗಿದೆ. ಫೋನ್ ಸಮೀಕ್ಷೆಗಳು ಸಮಯ–ನಿರ್ಬಂಧಿತವಾಗಿರುತ್ತದೆ. ಸಾಮಾನ್ಯವಾಗಿ 15 ನಿಮಿಷಕ್ಕಿಂತ ಹೆಚ್ಚು ಸಮಯ ನಿಗದಿಯಾಗಿರುವುದಿಲ್ಲ. ಈ ಅವಧಿಯಲ್ಲಿ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಬಹುದು.

f. **ಇ–ಮೇಲ್ ಸಮೀಕ್ಷೆಗಳು:** ಈ ಸಮೀಕ್ಷೆಯಲ್ಲಿ ಪ್ರಶ್ನಾವಳಿಗಳನ್ನು ನೇರವಾಗಿ ಪ್ರತಿಸ್ಪಂದಕರಿಗೆ ವಿತರಿಸಲಾಗುವುದಿಲ್ಲ ಮತ್ತು ಉದ್ದೇಶಿತ ಪ್ರತಿಸ್ಪಂದಕರಿಗೆ ಅಂಚೆ ಸೇವೆಯ ಮೂಲಕ ಕಳುಹಿಸಿಕೊಡಲಾಗುತ್ತದೆ. ಪ್ರತಿಸ್ಪಂದಕರು ನಂತರ ಈ ಸಮೀಕ್ಷೆಗಳನ್ನು ಪೂರ್ಣಗೊಳಿಸಬೇಕು ಮತ್ತು ಮೇಲ್ ಮೂಲಕ ಹಿಂತಿರುಗಿಸಬೇಕು. ಮೇಲ್ ಸಮೀಕ್ಷೆಯನ್ನು ರಚಿಸುವಾಗ,ಪ್ರಶ್ನಾವಳಿಯು ಒಂದು ಪುಟವನ್ನು ಮೀರಿರಬಾರದು, ಜೊತೆಗೆ, ಸಮೀಕ್ಷೆ ನಡೆಸುವ ಸಂಸ್ಥೆಯ ಶೀರ್ಷಿಕೆ ಪತ್ರ ಮತ್ತು ಈ ಸಮೀಕ್ಷೆಯ ಉದ್ದೇಶದಿಂದ ಉತ್ತರಿಸುವ ಕವರ್ ಲೆಟರ್ ಸೇರಿಸಿ ಹೆಚ್ಚುವರಿಯಾಗಿ ಕಳುಹಿಸಬೇಕು ಇದು ಸಮೀಕ್ಷೆಯ ಅಂತಿಮ ದಿನಾಂಕವನ್ನು ಒಳಗೊಂಡಿರಬೇಕು.

g. **ಕಿಯೋಸ್ಕ್ ಸಮೀಕ್ಷೆಗಳು:** ಇತ್ತೀಚಿನ ದಿನಗಳಲ್ಲಿ ಕಿಯೋಸ್ಕ್‌ಗಳು ಪ್ರತಿಸ್ಪಂದಕರಿಗೆ ಸಮೀಕ್ಷೆಗಳನ್ನು ತೆಗೆದುಕೊಳ್ಳುವ ವೈಶಿಷ್ಟ್ಯವನ್ನು ಸಹ ನೀಡುತ್ತವೆ. ಕಿಯೋಸ್ಕ್ ಸಮೀಕ್ಷೆಗಳು ಸಮೀಕ್ಷಾ ಮಾಹಿತಿ ನೀಡುವುದರ ಜೊತೆಗೆ ಸಂವಾದದ ನಂತರ ತಕ್ಷಣವೇ ಪ್ರತಿಕ್ರಿಯೆಯನ್ನು ಸಂಗ್ರಹಿಸುವ ಗುರಿಯನ್ನು ಒಳಗೊಂಡಿವೆ.


h. **ಪೇಪರ್ ಸಮೀಕ್ಷೆಗಳು:** ಪೇಪರ್ ಸಮೀಕ್ಷೆಗಳು ಹೆಚ್ಚು ಪ್ರಯಾಸವಿಲ್ಲದೆ ಮಾಹಿತಿಯನ್ನು/ಪ್ರತಿಕ್ರಿಯೆಗಳನ್ನು ಪಡೆಯಲು ಸಹಾಯ ಮಾಡುತ್ತವೆ. ಆನ್‌ಲೈನ್ ಆವೃತ್ತಿಯನ್ನು ಪ್ರವೇಶಿಸಲು ಸಾಧ್ಯವಾಗದವರಿಗೆ ಪೇಪರ್ ಸಮೀಕ್ಷೆಯು ಅತ್ಯುತ್ತಮ ಪರ್ಯಾಯ ವಿಧಾನವಾಗಿದೆ. ತಂತ್ರಜ್ಞಾನ ತಿಳಿವಳಿಕೆ ಕಡಿಮೆ ಇರುವ ಜನರಿಗೆ ಪೇಪರ್ ಸಮೀಕ್ಷೆಗಳು ಹೆಚ್ಚು ಪರಿಣಾಮಕಾರಿ ಸಾಧನವಾಗಿವೆ.

i. **SMS ಸಮೀಕ್ಷೆಗಳು:** SMS ಸಮೀಕ್ಷೆಗಳು ಪಠ್ಯ ಸಂದೇಶಗಳ ಮೂಲಕ ಬಳಸಿದ ಪ್ರತಿಕ್ರಿಯೆಯನ್ನು ಸಂಗ್ರಹಿಸಲು ಅವಕಾಶ ಮಾಡಿಕೊಡುತ್ತವೆ. ಖಿಒಖ ಕಳುಹಿಸಿದಾಗ, ಅದು ಹಸ್ತಚಾಲಿತವಾಗಿ ಅಥವಾ ಖಿಒಖ ಪ್ಲಾಟ್‌ಫಾರ್ಮ್‌ಗಳನ್ನು ಬಳಸುವಾಗ, ಫಲಾನುಭವಿಗಳು ಸಮೀಕ್ಷೆಯನ್ನು ಪ್ರವೇಶಿಸಲು ಕಿರು ಸಂಕೇತವನ್ನು ಬರೆಯಬಹುದು ಅಥವಾ ಅವರ ಫೋನ್‌ಗಳ ಮೂಲಕ ಸಮೀಕ್ಷೆ ಲಿಂಕ್ ಮೇಲೆ ಕ್ಲಿಕ್ ಮಾಡಬಹುದು. ಆದಾಗ್ಯೂ, ಸಮೀಕ್ಷೆಗಳನ್ನು ಕಳುಹಿಸಲು ಬಳಕೆದಾರರಿಂದ ಅನುಮತಿಯನ್ನು ಹೊಂದುವುದು ಅಗತ್ಯ. ಸಂದೇಶಗಳು ಚಿಕ್ಕದಾಗಿರಬೇಕು ಮತ್ತು ಗುಣಾತ್ಮಕ ಪ್ರತಿಕ್ರಿಯೆಯನ್ನು ಪ್ರಮಾಣೀಕರಿಸುವಂತೆ ಮಾಡಬೇಕು.

j. **ಚಾಟ್ ಸಮೀಕ್ಷೆಗಳು:** ಚಾಟ್ ಮೂಲಕ ಪ್ರಶ್ನೆಗಳಿಗೆ ಉತ್ತರಿಸಲು ಪ್ರತಿಸ್ಪಂದಕರಿಗೆ ಅನುಮತಿಸುವ ಹೊಸ ಸಮೀಕ್ಷೆ ವಿಧಾನವಾಗಿದೆ. ಈ ರೀತಿಯ ಸಮೀಕ್ಷೆಯು ಶೀಘ್ರ ಮಾಹಿತಿಯನ್ನು ಪಡೆಯಲು ಪ್ರಯೋಜನಕಾರಿಯಾಗಿದೆ ಏಕೆಂದರೆ ಇದು ನೈಜವಾದ ಮತ್ತು ಅತೀ ಕಡಿಮೆ ಸಮಯದ ಪ್ರತಿಕ್ರಿಯೆಯನ್ನು ಸಂಗ್ರಹಿಸಲು ಸಹಾಯಕವಾಗುತ್ತದೆ. ಅಲ್ಲದೇ, ಚಾಟ್ ಸಮೀಕ್ಷೆಗಳು ಬಳಸಲು ಸುಲಭವಾಗಿವೆ ಮತ್ತು ಸಮೀಕ್ಷೆಯ ನಿರ್ದಿಷ್ಟ ಅಗತ್ಯಗಳಿಗೆ ಸರಿಹೊಂದುವಂತೆ ಮಾಡಬಹುದು ಅಥವಾ ಪ್ರತಿಕ್ರಿಯೆಯನ್ನು ಸಂಗ್ರಹಿಸಲು ಚಾಟ್ ಸಮೀಕ್ಷೆಯು ಉತ್ತಮ ವಿಧಾನವಾಗಿದೆ.

ಅಧ್ಯಾಯ 4

# ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ



**ಕಲಿಕೆಯ ಫಲಗಳು:**

1. ಸಮೀಕ್ಷೆಗಳಿಗೆ ಅಗತ್ಯವಾದ ದತ್ತಾಂಶಗಳನ್ನು ಸಂಗ್ರಹಿಸುವರು ಮತ್ತು ವಿಶ್ಲೇಷಿಸುವರು.
2. ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆಗಾಗಿ ತಂತ್ರಜ್ಞಾನವನ್ನು ಬಳಸುವ ಕೌಶಲವನ್ನು ಗಳಿಸುವರು.
3. ಕೊಟ್ಟಿರುವ ದತ್ತಾಂಶಗಳನ್ನು ವಿಶ್ಲೇಷಿಸುವರು.
4. ಶೈಕ್ಷಣಿಕ ಸಮೀಕ್ಷೆಗಳ ಒಳನೋಟಗಳನ್ನು ಗ್ರಹಿಸುವರು.

## 4.1 ಶೈಕ್ಷಣಿಕ ಸಮೀಕ್ಷೆಯಲ್ಲಿ ದತ್ತಾಂಶ ಸಂಗ್ರಹಣೆಯ ವಿಧಾನಗಳು

ದತ್ತಾಂಶಗಳನ್ನು ಸಂಗ್ರಹಿಸಲು ಸಮೀಕ್ಷೆಗಳನ್ನು ಕೈಗೊಳ್ಳಲಾಗುತ್ತದೆ. ಸಮೀಕ್ಷೆಗಳಲ್ಲಿ ದತ್ತಾಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಯು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕರಾರುವಕ್ಕಾಗಿ ಸಂಗ್ರಹಿಸುವ ದತ್ತಾಂಶಗಳ ಆಧಾರದ ಮೇಲೆಯೇ ಸಮೀಕ್ಷೆಗಳ ಫಲಿತಾಂಶ ನಿರ್ಧರಿತವಾಗುತ್ತದೆ. ದತ್ತಾಂಶಗಳನ್ನು ಎರಡು ವಿಧಗಳಲ್ಲಿ ಸಂಗ್ರಹಿಸಬಹುದು.

**1. ಗುಣಾತ್ಮಕ ದತ್ತಾಂಶಗಳು:** ಗುಣಾತ್ಮಕ ದತ್ತಾಂಶಗಳು ವಿವರಣಾತ್ಮಕವಾಗಿದ್ದು, ಅಸಾಂಖ್ಯಿಕ ದತ್ತಾಂಶಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿಗತ ಅನುಭವಗಳು ಮತ್ತು ಗ್ರಹಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಈ ದತ್ತಾಂಶಗಳು ಸಹಾಯ ಮಾಡುತ್ತವೆ. ತಳಮಟ್ಟದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು, ಸಂಕೀರ್ಣ ಸಮಸ್ಯೆಗಳನ್ನು ತಿಳಿಯಲು, ವಿಭಿನ್ನ ದೃಷ್ಟಿಕೋನಗಳನ್ನು ಮತ್ತು ಸಮೀಕ್ಷೆಯ ಪ್ರಾಕಲ್ಪನೆಗಳನ್ನು ಅರ್ಥೈಸಲು ಗುಣಾತ್ಮಕ ದತ್ತಾಂಶಗಳು ನೆರವಾಗುತ್ತವೆ. ಸುಲಭವಾಗಿ ಮೌಲ್ಯೀಕರಣಕ್ಕೊಳ ಪಡದ ದತ್ತಾಂಶಗಳನ್ನು ಅರ್ಥೈಸಲು ಗುಣಾತ್ಮಕ ದತ್ತಾಂಶಗಳು ಸಹಾಯಕವಾಗಿವೆ. ಆದರೆ ಕೆಲವೊಮ್ಮೆ ಇಂತಹ ದತ್ತಾಂಶಗಳು ವ್ಯಕ್ತಿ ನಿಷ್ಠವಾಗಿರುವ ಸಾಧ್ಯತೆಗಳಿರುತ್ತವೆ.

**2. ಪರಿಮಾಣಾತ್ಮಕ ದತ್ತಾಂಶಗಳು:** ಪರಿಮಾಣಾತ್ಮಕ ದತ್ತಾಂಶಗಳು ಸಾಂಖ್ಯಿಕ ದತ್ತಾಂಶಗಳಾಗಿದ್ದು, ಇವುಗಳನ್ನು ಸಂಖ್ಯಾಶಾಸ್ತ್ರದನ್ವಯ ವಿಶ್ಲೇಷಿಸಬಹುದು. ಈ ವಿಧದ ದತ್ತಾಂಶಗಳು ಪ್ರಮಾಣ ಮತ್ತು ಆವೃತ್ತಿಗಳ (frequencies) ಬಗ್ಗೆ ಮಾಹಿತಿ ನೀಡುತ್ತಲೇ, ವಿವಿಧ ಅಂಶಗಳಿಗಿರುವ ಸಂಬಂಧಗಳನ್ನು, ವಿನ್ಯಾಸಗಳನ್ನು ಮತ್ತು ಪ್ರವೃತ್ತಿಗಳನ್ನು (trends) ಮೌಲ್ಯೀಕರಣಕ್ಕೊಳಪಡಿಸುತ್ತವೆ. ಪರಿಮಾಣಾತ್ಮಕ ದತ್ತಾಂಶಗಳಿಂದ ನಿಖರವಾದ ದತ್ತಾಂಶಗಳನ್ನು ಪಡೆಯಬಹುದು ಅಲ್ಲದೇ ಚರಾಂಶಗಳನ್ನು ಹೋಲಿಸಬಹುದು, ಸಹಸಂಬಂಧಗಳನ್ನು ಪತ್ತೆ ಮಾಡಬಹುದು ಮತ್ತು ಬಹುಮುಖ್ಯವಾಗಿ ಸಂಖ್ಯಾಶಾಸ್ತ್ರದನ್ವಯ ತೀರ್ಮಾನಗಳನ್ನು ಕೈಗೊಳ್ಳಬಹುದು. ಪರಿಮಾಣಾತ್ಮಕ ದತ್ತಾಂಶಗಳನ್ನು ಪಡೆಯುವ ಒಂದು ಉತ್ತಮ ವಿಧಾನದಲ್ಲಿ ಸಮೀಕ್ಷೆಗಳು ಮಹತ್ತರ ಪಾತ್ರವನ್ನು ವಹಿಸುತ್ತವೆ.

ಒಟ್ಟಾರೆಯಾಗಿ ಯಾವುದೇ ಸಮೀಕ್ಷೆಯಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ದತ್ತಾಂಶಗಳು ಬಹುಮುಖ್ಯವಾಗಿದ್ದು, ನಮ್ಮ ಸಮೀಕ್ಷೆಯ ವಿಷಯದ ಬಗ್ಗೆ ವಿಶದವಾಗಿ ಮತ್ತು ಸಮಗ್ರವಾಗಿ ತಿಳಿದುಕೊಳ್ಳಲು ಸಹಾಯಕವಾಗಿವೆ. ಈ ಎರಡೂ ವಿಧದ ದತ್ತಾಂಶಗಳನ್ನು ಸೂಕ್ತವಾಗಿ ಸಂಯೋಜಿಸುವುದರ ಮೂಲಕ ಸಮೀಕ್ಷೆಯ ಫಲಿತಗಳಲ್ಲಿ ಸಮಂಜಸತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಬಹುದು. ಇಷ್ಟೇ ಅಲ್ಲದೇ ದತ್ತಾಂಶಗಳ ಸಂಗ್ರಹಣೆಯಲ್ಲಿ ಎರಡು ವಿಧಗಳಿವೆ.

- **ಪ್ರಾಥಮಿಕ ದತ್ತಾಂಶ:** ದತ್ತಾಂಶಗಳನ್ನು ನೇರವಾಗಿ ಸಂಗ್ರಹಿಸುವುದು. ಉದಾಹರಣೆಗೆ, ಮಕ್ಕಳ ಶೂಸ್ ಗಾತ್ರವನ್ನು ತಿಳಿಯಲು, ನೇರವಾಗಿ ಮಕ್ಕಳ ಪಾದದ ಅಳತೆಯನ್ನು ತೆಗೆದುಕೊಳ್ಳುವುದು
- **ದ್ವಿತೀಯಕ ದತ್ತಾಂಶ:** ಈಗಾಗಲೇ ಪ್ರಕಟಗೊಂಡಿರುವ ಅಥವಾ ಸಂಗ್ರಹಿಸಿರುವ ಮೂಲದಿಂದ ದತ್ತಾಂಶಗಳನ್ನು ಕಲೆಹಾಕುವುದು. ದಾಖಲೆಗಳು, ಪುಸ್ತಕಗಳು, ಸಂಶೋಧನಾ ಲೇಖನಗಳು, ಅಂತರ್ಜಾಲದ ಲೇಖನಗಳು ಮುಂತಾದುವುಗಳು ದ್ವಿತೀಯಕ ದತ್ತಾಂಶಗಳನ್ನು ಪಡೆಯಲು ಇರುವ ಬಹು ಮುಖ್ಯ ಮೂಲಗಳು.

ಹೀಗೆ ಹಲವು ವಿಧಾನಗಳಿಂದ ದತ್ತಾಂಶಗಳನ್ನು ಸಂಗ್ರಹಿಸಬಹುದು. ದತ್ತಾಂಶಗಳನ್ನು ಸಂಗ್ರಹಿಸಲು ಹಲವು

ಸಾಧನ ಮತ್ತು ತಂತ್ರಗಳನ್ನು ಬಳಸುತ್ತೇವೆ. ಈ ದತ್ತಾಂಶಗಳನ್ನು ವಿಶ್ಲೇಷಿಸುವುದೂ ಸಹ ಬಹುಮುಖ್ಯವಾಗುತ್ತದೆ. ಏಕೆಂದರೆ, ದತ್ತಾಂಶಗಳ ವಿಶ್ಲೇಷಣೆಯು ಸಮೀಕ್ಷೆಯ ಫಲಿತಾಂಶವನ್ನು ತಿಳಿಯಲು ಸಹಾಯ ಮಾಡುತ್ತದೆ.

## 4.2 ದತ್ತಾಂಶ ಸಂಗ್ರಹಣೆಯ ಸಾಧನ ಮತ್ತು ತಂತ್ರಗಳು:

ಯಾವುದೇ ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳುವ ಮೊದಲು, ಸಮೀಕ್ಷೆಯ ಸಾಧನ ಮತ್ತು ತಂತ್ರಗಳನ್ನು ಸ್ಪಷ್ಟವಾಗಿ ತಿಳಿದಿರಬೇಕಾಗುತ್ತದೆ. ಸಮೀಕ್ಷೆಗಳಿಗೆ ಬೇಕಾಗುವ ಮಾಹಿತಿಯನ್ನು ಸಂಗ್ರಹಿಸಬೇಕೆಂದರೆ ಅದಕ್ಕೆ ಸೂಕ್ತವಾದ ಸಾಧನ-ತಂತ್ರಗಳನ್ನು ಮೊದಲೇ ನಿರ್ಧರಿಸಿ ಅವುಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿರಬೇಕು.

i. **ಪ್ರಶ್ನಾವಳಿಗಳು:** ಪ್ರಶ್ನಾವಳಿಗಳು ದತ್ತಾಂಶ ಸಂಗ್ರಹಣೆಯಲ್ಲಿ ಉತ್ತಮ ಸಾಧನವಾಗಿವೆ. ಪ್ರಶ್ನಾವಳಿಗಳನ್ನು ಕೊಟ್ಟು ದತ್ತಾಂಶಗಳನ್ನು ಪಡೆಯುವುದು ಸುಲಭವಾಗಿದೆ ಅಲ್ಲದೇ, ಏಕಕಾಲದಲ್ಲಿ ಹಲವಾರು ಜನರ ಅಭಿಪ್ರಾಯಗಳನ್ನು ತಿಳಿಯಬಹುದಾಗಿರುತ್ತದೆ. ಅಲ್ಲದೇ ಒಂದು ವ್ಯವಸ್ಥೆಯ ಬಗ್ಗೆ ಒದಗಿಸಿರುವ ಸೌಲಭ್ಯಗಳ ಬಗ್ಗೆ ಹಿಮ್ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರಶ್ನಾವಳಿಗಳ ಬಹುಮುಖ್ಯ ಉಪಯೋಗವೆಂದರೆ, ದೊಡ್ಡ ಪ್ರಮಾಣದಲ್ಲಿ ದತ್ತಾಂಶಗಳನ್ನು ಶೀಘ್ರವಾಗಿ ಸಂಗ್ರಹಿಸಬಹುದು. ಅಲ್ಲದೇ ಜನರ ಪ್ರತಿಕ್ರಿಯೆಗಳನ್ನು ಸುಲಭವಾಗಿ ಹೋಲಿಸಬಹುದು ಮತ್ತು ವಿಶ್ಲೇಷಿಸಬಹುದು. ಪ್ರಶ್ನಾವಳಿಗಳನ್ನು ರಚಿಸುವಾಗ ಗಮನಿಸಬೇಕಾದ ಅಂಶಗಳು:

- ಪ್ರಶ್ನೆಗಳು ಸಮೀಕ್ಷೆಯ ವಿಷಯಾಧಾರಿತವಾಗಿರಬೇಕು. ಪ್ರಶ್ನೆಗಳು ಸರಳವಾದ ಭಾಷೆಯಲ್ಲಿ ನಿಖರವಾಗಿಯೂ, ಸೂಕ್ತವಾಗಿಯೂ ಮತ್ತು ನಿಷ್ಪಕ್ಷಪಾತವಾಗಿಯೂ ಇರಬೇಕು.
- ಯಾವುದೇ ಸಮುದಾಯದವರಿಗೆ, ಯಾರದೇ ಭಾವನೆಗಳಿಗೆ ಧಕ್ಕೆ ತರುವಂತೆ ಇರಬಾರದು. ಪ್ರಶ್ನೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ರಚಿಸಬೇಕಾದಾಗ ಭಾಷಾಂತರ ಸಮರ್ಪಕವಾಗಿರಬೇಕು.
- ಒಂದೇ ಪ್ರಶ್ನೆಯಲ್ಲಿ ಎರಡು ಉಪಪ್ರಶ್ನೆಗಳನ್ನು ಸೇರಿಸಬಾರದು. ಪ್ರಶ್ನೆಗಳು ಧನಾತ್ಮಕವಾಗಿರುವಂತೆ ನೋಡಿಕೊಳ್ಳಬೇಕು.
- ಪ್ರತಿಸ್ಪಂದಕರಿಗೆ ಉತ್ತರಗಳ ಸುಳಿವು ಸಿಗದಂತೆ ಎಚ್ಚರ ವಹಿಸಬೇಕು. ಸರಳವಾದ ಪ್ರಶ್ನೆಗಳನ್ನು ಮೊದಲು ಕೇಳಿ ನಂತರ ಸೂಕ್ಷ್ಮ ವಿಷಯಗಳ ಬಗ್ಗೆ ಪ್ರಶ್ನಿಸುವುದು ಒಳಿತು. ಇದು ಪ್ರತಿಸ್ಪಂದಕರ ವಿಶ್ವಾಸವನ್ನು ಗಳಿಸಲು ಸಹಾಯ ಮಾಡುತ್ತದೆ.
- ಪ್ರಶ್ನಾವಳಿಗಳನ್ನು ರಚಿಸುವವರು ಪ್ರತಿಸ್ಪಂದಕರಿಗೆ ಅರ್ಥವಾಗುವಂತೆ ಸೂಚನೆಗಳನ್ನು ಸ್ಪಷ್ಟವಾಗಿ ನೀಡಬೇಕು. ಪ್ರಶ್ನಾವಳಿಯ ಪ್ರಾಮುಖ್ಯತೆಯನ್ನು ವಿಶದಪಡಿಸಬೇಕು.

**ಚಟುವಟಿಕೆ:** ನೀವು ಒಬ್ಬ ಮುಖ್ಯೋಪಾಧ್ಯಾಯರಾಗಿ ಶಿಕ್ಷಕರ ಬೋಧನಾ ವಿಧಾನಗಳ ಬಗ್ಗೆ ಮಕ್ಕಳ ಅಭಿಪ್ರಾಯವನ್ನು ತಿಳಿಯಲು ಒಂದು ಪ್ರಶ್ನಾವಳಿಯನ್ನು ರಚಿಸಲಿದ್ದೀರಿ ಎಂದು ಭಾವಿಸಿ. ಈ ಪ್ರಶ್ನಾವಳಿಯನ್ನು ಉತ್ತರಿಸುವ ಮೊದಲು ವಿದ್ಯಾರ್ಥಿಗಳಿಗೆ ನೀವು ನೀಡುವ ಸೂಚನೆಗಳನ್ನು ಪಟ್ಟಿಮಾಡಿ.

### ಪ್ರಶ್ನಾವಳಿಗಳನ್ನು ರೂಪಿಸುವ ವಿಧಗಳು:

- **ಆವೃತ-ಪ್ರತಿಕ್ರಿಯೆ (closed response)** ರೂಪದ ಪ್ರಶ್ನಾವಳಿ: ಈ ವಿಧದ ಪ್ರಶ್ನಾವಳಿಗಳಲ್ಲಿ ಪ್ರತಿಕ್ರಿಯೆಯು ಒಂದು ಚೌಕಟ್ಟಿನೊಳಗಿರುತ್ತದೆ. ಎಂದರೆ ಪ್ರಶ್ನೆಗಳಿಗೆ ಆಯ್ಕೆಗಳನ್ನು ನೀಡಿ ಪ್ರತಿಸ್ಪಂದಕರಿಗೆ ಸರಿ ಎನಿಸಿದ ಆಯ್ಕೆಯನ್ನು ಆರಿಸುವ ಅವಕಾಶವಿರುತ್ತದೆ. ಇವುಗಳಲ್ಲಿ ಬಹು ಆಯ್ಕೆಯ ಅಥವಾ ಬಹುಅಂಶ ಆಯ್ಕೆಯ ಪ್ರಶ್ನೆಗಳನ್ನು ರೂಪಿಸಬಹುದು.

**ಉದಾಹರಣೆ–1**

1. ಗಣಿತ ವಿಷಯವನ್ನು ಬೋಧಿಸುವಾಗ ಕಲಿಕೋಪಕರಣಗಳನ್ನು ಬಳಸಬೇಕು. ಏಕೆಂದರೆ,

a. ಅವು ಆಕರ್ಷಕವಾಗಿರುತ್ತವೆ.

b. ಅವು ಅಮೂರ್ತ ಕಲ್ಪನೆಯನ್ನು ಮೂರ್ತರೂಪಕ್ಕೆ ತರಲು ಸಹಾಯ ಮಾಡುತ್ತವೆ.

c. ಅದು ಶಿಕ್ಷಕರ ಕರ್ತವ್ಯ.

d. ಕಲಿಕೋಪಕರಣಗಳಿಲ್ಲದೇ ಮಕ್ಕಳು ಕಲಿಯುವುದಿಲ್ಲ.

ಗಣಿತ ವಿಷಯದ ಬೋಧನಾ ವಿಧಾನದ ಬಗ್ಗೆ ಶಿಕ್ಷಕರು ಯಾವ ಕ್ರಮಗಳನ್ನು ಅನುಸರಿಸುತ್ತಾರೆ ಮತ್ತು ಏಕೆ ಎಂದು ತಿಳಿದುಕೊಳ್ಳಬೇಕಾದಾಗ ಇಂತಹ ಪ್ರಶ್ನೆಯನ್ನು ರಚಿಸಬಹುದು. ಆಯ್ಕೆಗಳನ್ನು ನೀಡುವಾಗ ಅವುಗಳು ಪ್ರಶ್ನೆಯೊಂದಿಗೆ ಸೂಕ್ತ ಸಹ ಸಂಬಂಧ ಹೊಂದಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.

ಪ್ರಶ್ನಾವಳಿಯಲ್ಲಿ ಭಾಗವಹಿಸುವವರ ಮನೋಧರ್ಮವನ್ನು ಸೂಕ್ತವಾಗಿ ಅರ್ಥಮಾಡಿಕೊಳ್ಳಲು ಬಹುಅಂಶ ಆಯ್ಕೆಯ ಪ್ರಶ್ನೆಗಳನ್ನು ರಚಿಸಬಹುದು. ಪ್ರತಿಸ್ಪಂದಕರು ನೀಡುವ ಉತ್ತರಗಳು ಅವರ ಮನಸ್ಥಿತಿಯನ್ನು ತೋರಿಸುತ್ತವೆ.

**ಉದಾಹರಣೆ–2**

2. ಅವಕಾಶ ವಂಚಿತ ಹೆಣ್ಣುಮಕ್ಕಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡುವುದರಿಂದ

a. ಅವರಿಗೆ ಹೆಚ್ಚು ಅವಕಾಶಗಳು ಲಭ್ಯವಾಗುತ್ತವೆ.

b. ಸಮಾನ ಅವಕಾಶಗಳು ಸಿಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

c. ಗಂಡು ಮತ್ತು ಹೆಣ್ಣು ಮಕ್ಕಳ ಪಾತ್ರಗಳು ಅದಲು ಬದಲಾಗುತ್ತವೆ.

d. ಗಂಡು ಮಕ್ಕಳಿಗೆ ಅವಕಾಶಗಳು ಕಡಿಮೆಯಾಗುತ್ತವೆ.

ಇಲ್ಲಿ ಒಂದಕ್ಕಿಂತ ಹೆಚ್ಚು ಆಯ್ಕೆಗಳನ್ನು ಪ್ರತಿಸ್ಪಂದಕರು ಆಯ್ಕೆ ಮಾಡಬಹುದು. ಇದರಿಂದ ಈ ಸನ್ನಿವೇಶದಲ್ಲಿ ಅವರ ಅನಿಸಿಕೆ ಏನು ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು.

**ಚಟುವಟಿಕೆ:** ಜಿಲ್ಲಾ ಹಂತದಲ್ಲಿ ನೀವು ಒಂದು ತರಬೇತಿಯ ಆಯೋಜಕರಾಗಿದ್ದೀರಿ ಎಂದು ಭಾವಿಸಿ. ಈ ತರಬೇತಿ ಎಷ್ಟರ ಮಟ್ಟಿಗೆ ತರಗತಿಗಳಲ್ಲಿ ಅನುಷ್ಠಾನವಾಗುತ್ತಿದೆ ಎಂದು ನೀವು ತಿಳಿಯಬಯಸಿದ್ದೀರಿ. ಈ ಸಂದರ್ಭದಲ್ಲಿ ನೀವು ಯಾವ ವಿಧದ ಪ್ರಶ್ನೆಗಳನ್ನು ರಚಿಸುವಿರಿ? ಎರಡು ಉದಾಹರಣೆಗಳನ್ನು ಬರೆಯಿರಿ.

- **ದರ್ಜಾ ಮಾಪನಿಗಳು:** ಕೆಲವೊಮ್ಮೆ ಪ್ರಶ್ನೆಗಳಿಗೆ ಉತ್ತರಗಳು ಸರಿ ಅಥವಾ ತಪ್ಪು, ಒಪ್ಪುತ್ತೇನೆ ಅಥವಾ ಒಪ್ಪುವುದಿಲ್ಲ, ಎಂಬ ರೂಪದಲ್ಲಿರಬಹುದು. ಇವುಗಳನ್ನೇ ದರ್ಜಾ ಮಾಪನಿಗಳು ಎನ್ನುತ್ತೇವೆ. ಸರಿ ಅಥವಾ ತಪ್ಪು ಈ ಸಾಧನಕ್ಕೆ ಪ್ರಶ್ನೆಗಳನ್ನು/ಹೇಳಿಕೆಗಳನ್ನು ಕೊಡುವಾಗ ಸಮೀಕ್ಷೆಯ ಉದ್ದೇಶಗಳಿಗೆ ಅನುಗುಣವಾಗಿರಬೇಕು. ಒಪ್ಪುತ್ತೇನೆ ಅಥವಾ ಒಪ್ಪುವುದಿಲ್ಲ ವಿಧದ ಪ್ರಶ್ನೆಗಳಲ್ಲಿ ಬಲವಾಗಿ ಒಪ್ಪುತ್ತೇನೆ, ಸಾಮಾನ್ಯವಾಗಿ ಒಪ್ಪುತ್ತೇನೆ ಅಥವಾ ಒಪ್ಪುವುದಿಲ್ಲ, ಬಲವಾಗಿ ಒಪ್ಪುವುದಿಲ್ಲ ಎಂಬಂತಹ ಆಯ್ಕೆಗಳಿರಬಹುದು ಮತ್ತು ಅವುಗಳಿಗೆ ಕ್ರಮವಾಗಿ 1, 2, 3, 4 ಎಂಬ ಸಂಖ್ಯೆಯನ್ನೂ ಕೊಡಬಹುದು. ಪ್ರತಿಸ್ಪಂದಕರ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಅರಿಯಲು, 1 ರಿಂದ 10ರವರೆಗಿನ ಅಂಶಗಳನ್ನು ಹೊಂದಿರುವ ದರ್ಜಾ ಮಾಪನಿಗಳನ್ನು ಬಳಸಬಹುದು.
- **ಮುಕ್ತ–ಪ್ರತಿಕ್ರಿಯೆ (free/open response) ರೂಪದ ಪ್ರಶ್ನಾವಳಿ:** ಇಲ್ಲಿ ಪ್ರಶ್ನೆಗಳು ಪ್ರತಿಸ್ಪಂದಕರಿಂದ ವಿವರಣಾತ್ಮಕ ಪ್ರತಿಕ್ರಿಯೆಯನ್ನು ಬಯಸುತ್ತವೆ.

**ಉದಾಹರಣೆ 3:** ಶಾಲೆಗಳಲ್ಲಿ ಜೆಂಡರ್ ತಾರತಮ್ಯದ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯವನ್ನು ತಿಳಿಯಬೇಕಾಗಿದೆ ಎಂದಾಗ, ನಿಮ್ಮ ಶಾಲೆಯಲ್ಲಿ ಕಬಡ್ಡಿ, ಖೋ–ಖೋ ಆಟಗಳನ್ನು ಹೆಣ್ಣುಮಕ್ಕಳಿಗೂ ಆಡಿಸುತ್ತಾರೆಯೇ? ಅದು ನಿನಗೆ ಇಷ್ಟವಾಗುತ್ತದೆಯೇ? ಏಕೆ? ಎಂಬ ಪ್ರಶ್ನೆಯನ್ನು ಕೇಳಬಹುದು.

ಇದರಲ್ಲಿ ದೊರೆಯುವ ಪ್ರತಿಕ್ರಿಯೆಯಿಂದ ಶಾಲೆಯಲ್ಲಿ ಜೆಂಡರ್ ಸಮಾನತೆಯ ಅನುಷ್ಠಾನದ ಸ್ಥಿತಿಗತಿ ಮತ್ತು ವಿದ್ಯಾರ್ಥಿಯ ಮನಸ್ಥಿತಿ ಎರಡನ್ನೂ ಅರ್ಥೈಸಬಹುದು.

**ಉದಾಹರಣೆ 4:** ಶಾಲಾ ಫಲಿತಾಂಶವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ತಿಳಿಯಬೇಕಾದಲ್ಲಿ, ಶಿಕ್ಷಕರಿಗೆ ಕೇಳಬಹುದಾದ ಪ್ರಶ್ನೆಗಳೆಂದರೆ, ನೀವು ವಿಷಯದ ಪರಿಕಲ್ಪನೆಯನ್ನು ಮೂಡಿಸಲು ಯಾವ ಬೋಧನಾ ವಿಧಾನವನ್ನು ಅನುಸರಿಸುವಿರಿ? ಅದರಿಂದ ನೀವು ಕಂಡುಕೊಂಡಿರುವ ಉಪಯೋಗವೇನು?

ಇದರಿಂದ ವಿಷಯದ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

ಈ ಪ್ರಶ್ನಾವಳಿಗಳನ್ನು ಆನ್‌ಲೈನ್, ಮುಖಾಮುಖಿ, ಟೆಲಿಫೋನ್ ಮುಖಾಂತರ ಕೈಗೊಳ್ಳಬಹುದಾಗಿರುತ್ತದೆ. ಪ್ರಶ್ನಾವಳಿಗಳನ್ನು ಉದ್ದೇಶಿತ ಗುಂಪಿಗೆ ನೀಡುವ ಮೊದಲು, ಒಂದು ಚಿಕ್ಕದಾದ ಗುಂಪಿಗೆ (Pilot group) ಪ್ರಶ್ನಾವಳಿಯನ್ನು ನೀಡಿ ಅಭಿಪ್ರಾಯವನ್ನು ಪಡೆಯುವುದು ಸೂಕ್ತ. ಇದರಿಂದ ಪ್ರಶ್ನಾವಳಿಯಲ್ಲಿ ಬದಲಾವಣೆಗಳನ್ನು ಮಾಡಬೇಕಾದಲ್ಲಿ ಮಾಡಬಹುದು ಅಲ್ಲದೇ ಲೋಪದೋಷಗಳಿದ್ದಲ್ಲಿ ಪರಿಹರಿಸಿಕೊಳ್ಳಬಹುದು.

**ಪ್ರಶ್ನಾವಳಿಗಳ ಮಿತಿಗಳು:** ಪ್ರಶ್ನಾವಳಿಗಳ ಪ್ರತಿಸ್ಪಂದಕರು, ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳದಿದ್ದಾಗ, ನಿರಾಸಕ್ತಿಯಿಂದ, ನಿರ್ಲಕ್ಷ್ಯದಿಂದ ಅಥವಾ ಸೂಚನೆಗಳನ್ನು ಅರ್ಥಮಾಡಿಕೊಳ್ಳದೇ ಉತ್ತರಿಸಿದಾಗ ದತ್ತಾಂಶಗಳು ನಿಖರವಾಗಿ ದೊರೆಯದೇ ಇರಬಹುದು.

**II ಸಂದರ್ಶನಗಳು:** ಇವು ದತ್ತಾಂಶ ಸಂಗ್ರಹಣೆಯ ಒಂದು ಉತ್ತಮ ತಂತ್ರವಾಗಿವೆ. ವಿವಿಧ ಶೈಕ್ಷಣಿಕ ಕ್ಷೇತ್ರಗಳಲ್ಲಿ ವೈಯಕ್ತಿಕ ಅಭಿಪ್ರಾಯಗಳನ್ನು ಸಂಗ್ರಹಿಸಲು ಆಯ್ದ ವ್ಯಕ್ತಿಗಳ ಸಂದರ್ಶನಗಳನ್ನು ಮುಖಾಮುಖಿಯಾಗಿ ಮಾಡಬಹುದು.

ಸಮೀಕ್ಷೆಗೆ ಬೇಕಾಗುವ ಮಾಹಿತಿಗಳಿಗೆ ಅನುಗುಣವಾಗಿ ಸಂದರ್ಶನದ ಪ್ರಶ್ನೆಗಳನ್ನು ಮೊದಲೇ ರೂಪಿಸಿಕೊಂಡಿರುವುದು ಅಗತ್ಯ. ಇಂತಹ ಸಂದರ್ಶನಗಳನ್ನು ಸಂರಚಿತ ಸಂದರ್ಶನಗಳು ಎನ್ನಬಹುದು. ಕೆಲವೊಮ್ಮೆ ಸಂದರ್ಭಾನುಸಾರವಾಗಿ ಪ್ರಶ್ನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗಬಹುದು. ಸಾಧಾರಣ ಸಂಭಾಷಣೆಯಂತೆಯೇ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆದುಕೊಳ್ಳಬಹುದು. ಅಂತಹ ಸಂದರ್ಶನಗಳನ್ನು ಸಂರಚನಾರಹಿತ ಸಂದರ್ಶನಗಳು ಎನ್ನಬಹುದು.

ಈ ಎರಡೂ ವಿಧದ ಸಂದರ್ಶನಗಳು ವ್ಯಕ್ತಿಯ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮತ್ತು ಆಳವಾಗಿ ತಿಳಿಯಲು ನೆರವಾಗುತ್ತವೆ. ಸಂದರ್ಶನಕಾರರಿಗೆ ಅನುಮಾನಗಳು ಬಂದಾಗ, ಎದುರಿಗಿರುವವರನ್ನು ಮತ್ತೆ ಪ್ರಶ್ನಿಸಿ, ಸೂಕ್ತವಾದ ಮಾಹಿತಿಯನ್ನು ಪಡೆಯಬಹುದು. ಸಂರಚನಾರಹಿತ ಸಂದರ್ಶನಗಳನ್ನು ನಿರ್ವಹಿಸುವಾಗ ಡೈರಿಯಲ್ಲಿ ಬರೆದುಕೊಳ್ಳುವುದು ಅಥವಾ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳುವುದರಿಂದ ಯಾವುದೇ ವಿವರವು ಬಿಟ್ಟುಹೋಗದಂತೆ ನೋಡಿಕೊಳ್ಳಬಹುದು.  ಎಂದರೆ, ಇಲ್ಲಿ ನಮಗೆ ದೊರೆಯುವ ದತ್ತಾಂಶ ವಿಶ್ವಾಸಾರ್ಹವಾಗಿರುತ್ತದೆ.

**ಸಂದರ್ಶನದ ಮಿತಿಗಳು:** ಸಂದರ್ಶನಗಳನ್ನು ನಡೆಸುವಾಗ ಸಂದರ್ಶನಕಾರರನ್ನು ತರಬೇತುಗೊಳಿಸಬೇಕು. ಕೆಲವೊಮ್ಮೆ ನಮಗೆ ಬೇಕಾದ ಮಾಹಿತಿ ದೊರೆಯದೇ ಇರಬಹುದು. ಸಂದರ್ಶನ ನೀಡುತ್ತಿರುವವರ ಪೂರ್ವಗ್ರಹಗಳು ಒಮ್ಮೊಮ್ಮೆ ಸಮೀಕ್ಷೆಯ ಫಲಿತಗಳ ಮೇಲೆ ದುಷ್ಪರಿಣಾಮವನ್ನು ಬೀರಬಹುದು.

**ಚಟುವಟಿಕೆ:** ಮಾಹಿತಿಗಳನ್ನು ಸಂಗ್ರಹಿಸಲು ನಿಮ್ಮ ಕ್ಷೇತ್ರದಲ್ಲಿ ನೀವು ಯಾರ ಸಂದರ್ಶನವನ್ನು ಮಾಡಿದ್ದೀರಿ? ಅದಕ್ಕೆ ನಿಮ್ಮ ತಯಾರಿ ಹೇಗಿತ್ತು? ಚರ್ಚಿಸಿ. (ಉದಾ: ಶಾಲೆಗಳಲ್ಲಿ NGO ವತಿಯಿಂದ ಸಂಪನ್ಮೂಲಗಳ ಕೊಡುಗೆಯ ಕುರಿತು ಮಾಹಿತಿ, ಒಂದು ಬ್ಲಾಕ್‌ನಲ್ಲಿ SSLCಯಲ್ಲಿ ಅತಿ ಹೆಚ್ಚು ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರ/ಮುಖ್ಯಶಿಕ್ಷಕರ ಸಂದರ್ಶನ...)

**III ವೀಕ್ಷಣೆಗಳು:** ವೀಕ್ಷಣೆಗಳು ದತ್ತಾಂಶ ಸಂಗ್ರಹಣೆಯ ತಂತ್ರವಾಗಿದ್ದು ಸಾಕಷ್ಟು ಅನುಕೂಲಗಳನ್ನು ಹೊಂದಿದೆ. ಮಾಹಿತಿಗಳ ಸಂಗ್ರಹಣೆ ಮಾಡಲು ತರಗತಿ ಪ್ರಕ್ರಿಯೆಗಳನ್ನು, ಶೈಕ್ಷಣಿಕ ಚಟುವಟಿಕೆಗಳನ್ನು, ಶಾಲಾ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು. ಇದರಿಂದ ವಿದ್ಯಾರ್ಥಿಗಳ, ಪೋಷಕರ, ಆಡಳಿತವರ್ಗದವರ ವರ್ತನೆಗಳ ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸಬಹುದು. ವೀಕ್ಷಣೆಯಿಂದ ವಿದ್ಯಾರ್ಥಿಗಳು ನಡೆಸುವ ಸಂವಹನ, ಕಲಿಕೆಯ ಫಲಿತಗಳು, ಶಾಲಾ ವಾತಾವರಣ ಮತ್ತು ಕಲಿಕಾ ಪರಿಸರ ಇವುಗಳ ಬಗ್ಗೆ ಸೂಕ್ತ ದತ್ತಾಂಶಗಳು ಲಭ್ಯವಾಗುತ್ತವೆ. ವೀಕ್ಷಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ತಪಶೀಲು ಪಟ್ಟಿಯನ್ನು ರಚಿಸಿಕೊಳ್ಳುವುದು ಅಗತ್ಯ.

**ಉದಾಹರಣೆ 5:** ಅಧ್ಯಯನಕಾರರು ತರಗತಿಯೊಂದನ್ನು ವೀಕ್ಷಿಸುವ ಸಂದರ್ಭವನ್ನು ಪರಿಗಣಿಸೋಣ. ಆಗ,

| | |
|---|---|
| ಶಿಕ್ಷಕರು ಮಕ್ಕಳೊಂದಿಗೆ ನಗುಮೊಗದಿಂದ ಇದ್ದಾರೆಯೇ? | ಹೌದು/ಇಲ್ಲ |
| ಮಕ್ಕಳ ಮಟ್ಟಕ್ಕೆ ಇಳಿದು ಪರಿಕಲ್ಪನೆಯನ್ನು ಅರ್ಥೈಸುತ್ತಿದ್ದಾರೆಯೇ? | ಹೌದು/ಇಲ್ಲ |
| ಮಕ್ಕಳಿಗೆ ಸಾಕಷ್ಟು ಅವಕಾಶಗಳನ್ನು ಕೊಡುತ್ತಿದ್ದಾರೆಯೇ? | ಹೌದು/ಇಲ್ಲ |
| ತಂತ್ರಜ್ಞಾನದ ಬಳಕೆ ಆಗುತ್ತಿದೆಯೇ? | ಹೌದು/ಇಲ್ಲ |
| ಚಟುವಟಿಕೆಗಳ ನಿರ್ವಹಣೆ ಅಚ್ಚುಕಟ್ಟಾಗಿದೆಯೇ? | ಹೌದು/ಇಲ್ಲ |

ಈ ರೀತಿಯ ಪ್ರಶ್ನೆಗಳಿರುವ ತಪಶೀಲು ಪಟ್ಟಿ ತರಗತಿಯ ವೀಕ್ಷಣೆಯನ್ನು ಹೆಚ್ಚು ಸುಗಮಗೊಳಿಸುತ್ತದೆ ಅಲ್ಲದೇ ಶಿಕ್ಷಕರ ಸಾಮರ್ಥ್ಯ ಮತ್ತು ಮಕ್ಕಳ ಪಾಲ್ಗೊಳ್ಳುವಿಕೆಯ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ.

**ಮಿತಿಗಳು:** ಇದು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಅಲ್ಲದೇ ಅಧ್ಯಯನಕಾರರ ಉಪಸ್ಥಿತಿಯು ಸನ್ನಿವೇಶವನ್ನು ಪ್ರಭಾವಿಸಬಹುದು. ಅಧ್ಯಯನಕಾರರು ಹೆಚ್ಚಿನ ಪೂರ್ವಸಿದ್ಧತೆಯೊಂದಿಗೆ ವೀಕ್ಷಣೆಯನ್ನು ಮಾಡಬೇಕು.

**ಪರ್ಯಾಲೋಚಿಸಿ:**

ವೀಕ್ಷಣೆ/ಅವಲೋಕನ ವಿಧಾನದಿಂದ ದತ್ತಾಂಶ ಸಂಗ್ರಹಣೆ ಮಾಡುವಾಗ ತಪಶೀಲು ಪಟ್ಟಿ ಇಲ್ಲದಿದ್ದಲ್ಲಿ ಯಾವ ಪರಿಣಾಮಗಳಾಗಬಹುದು?

**III ಕೇಂದ್ರೀಕೃತ ಗುಂಪು ಚರ್ಚೆಗಳು (Focus group discussion):** ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು, ಆಡಳಿತ ವರ್ಗದವರು, ಶಿಕ್ಷಣ ಸಂಯೋಜಕರು, ಶಿಕ್ಷಣ ಸಂಪನ್ಮೂಲ ಅಧಿಕಾರಿಗಳು, ಸಮೂಹ ಸಂಪನ್ಮೂಲ ವ್ಯಕ್ತಿಗಳು ಮುಂತಾದ ಭಾಗೀದಾರರನ್ನು ಒಗ್ಗೂಡಿಸಿ, ಸಮೀಕ್ಷೆ ಸಂಬಂಧಿತ ಪ್ರಶ್ನೆಗಳನ್ನು ಚರ್ಚಿಸುವ ಅವಕಾಶವನ್ನು ನೀಡಬೇಕು. ಇದರಿಂದ ಭಾಗೀದಾರರ ಅಭಿಪ್ರಾಯಗಳು, ಅನುಭವಗಳು ಮತ್ತು ಗ್ರಹಿಕೆಗಳನ್ನು ತಿಳಿಯಬಹುದು. ಸಮೀಕ್ಷೆಗೆ ಸಹಾಯವಾಗುವ ಅಂಶಗಳ ಬಗ್ಗೆ ಮಾಹಿತಿ ಬೇಕೆಂದಾಗ ಸ್ಪಷ್ಟ ಮಾಹಿತಿ ಲಭ್ಯವಾಗುವವರೆಗೂ ಪ್ರಶ್ನೆಗಳನ್ನು ನಿರ್ದಿಷ್ಟಗೊಳಿಸಿ ಚರ್ಚೆಯನ್ನು ಮುಂದುವರೆಸಬಹುದು. ಚರ್ಚೆಯನ್ನು ನಿರ್ವಹಿಸುವ ಸುಗಮಕಾರರು ಚುರುಕಾಗಿದ್ದು, ಎಲ್ಲರ ಅಭಿಪ್ರಾಯಗಳನ್ನು ಸರಿಯಾಗಿ ಕ್ರೋಢೀಕರಿಸಬೇಕು.

**ಉದಾಹರಣೆ 6:** ವಿದ್ಯಾರ್ಥಿಗಳ ಕಲಿಕೆಯ ಸಾಧನೆಯಲ್ಲಿ ಅಡ್ಡಿಯನ್ನು ಉಂಟುಮಾಡುವ ಅಂಶಗಳ ಬಗ್ಗೆ ಸಮೀಕ್ಷೆ ನಡೆಸಬೇಕು ಎಂದಾಗ, ಮೊಬೈಲ್ ಬಳಕೆ, ಪೋಷಕರ ಬೆಂಬಲವಿಲ್ಲದಿರುವುದು,ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಭಾಷೆಯಲ್ಲಿ ಹಿಡಿತವಿಲ್ಲದಿರುವುದು ಹೀಗೆ ವಿವಿಧ ಅಂಶಗಳ ಬಗ್ಗೆ ಗುಂಪಿನಲ್ಲಿ ವಿವರವಾಗಿ ಚರ್ಚಿಸಬಹುದು. ಇದರಿಂದ ಸ್ಪಷ್ಟ ಮಾಹಿತಿ ದೊರೆಯುತ್ತದೆ.

**ಮಿತಿಗಳು:** ಇದು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಕೆಲವೊಮ್ಮೆ ಗುಂಪಿನಲ್ಲಿ ಭಿನ್ನಾಭಿಪ್ರಾಯಗಳು ಬಂದಾಗ ನಿರ್ಧಾರ ಕೈಗೊಳ್ಳುವುದು ಕಷ್ಟವಾಗುತ್ತದೆ. ಪ್ರತಿಸ್ಪಂದಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಅಧ್ಯಯನಕಾರರಿಗೆ ಇವರನ್ನು ಒಟ್ಟುಗೂಡಿಸುವುದೂ ಸಹ ಒಂದು ಸವಾಲಾಗುತ್ತದೆ.

**ಪರ್ಯಾಲೋಚಿಸಿ:**

- ➔ ಗುಂಪು ಕೇಂದ್ರಿತ ಚರ್ಚೆ ನಡೆಸುವಾಗ ಕೆಲವರು ಮಾತನಾಡದೇ ಸುಮ್ಮನೆ ಕುಳಿತಿದ್ದರೆ, ಅದನ್ನು ನೀವು ಹೇಗೆ ಪರಿಗಣಿಸುವಿರಿ?
- ➔ ಮನ-ಮಂಥನ (Brainstorming) ಕ್ಕೂ ಗುಂಪು ಕೇಂದ್ರಿತ ಚರ್ಚೆಗೂ ಏನು ವ್ಯತ್ಯಾಸ/ಸಾಮ್ಯತೆಗಳಿರಬಹುದು?

**IV ಲಭ್ಯವಿರುವ ದಾಖಲೆಗಳ ವಿಶ್ಲೇಷಣೆ:** ಶೈಕ್ಷಣಿಕ ದಾಖಲೆಗಳು, ವರದಿಗಳು, ಪಠ್ಯಕ್ರಮ, ಪಠ್ಯಪುಸ್ತಕ ಮುಂತಾದ ಲಭ್ಯವಿರುವ ದಾಖಲೆಗಳನ್ನು ವೀಕ್ಷಿಸಿ, ವಿಶ್ಲೇಷಿಸುವುದರಿಂದ ಪ್ರಸ್ತುತ ಸನ್ನಿವೇಶದ ಬಗ್ಗೆ ಸೂಕ್ತ ಮಾಹಿತಿ ಲಭ್ಯವಾಗುತ್ತದೆ.

**ಉದಾಹರಣೆ 7:** ಶಾಲೆಗಳಲ್ಲಿ ನಡೆಯುತ್ತಿರುವ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದಾಗ, ಆ ಕಾರ್ಯಕ್ರಮಗಳ ಬಗ್ಗೆ ಬರೆದಿರುವ ಟಿಪ್ಪಣಿ, ಛಾಯಾಚಿತ್ರಗಳು, ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳ ಅಭಿಪ್ರಾಯ ಇವೆಲ್ಲವನ್ನೂ ನೋಡಬಹುದು. ಹಾಗೆಯೇ, ತರಗತಿ ಪ್ರಕ್ರಿಯೆಯಲ್ಲಿ ಶಿಕ್ಷಕರ ತೊಡಗಿಸಿಕೊಳ್ಳುವಿಕೆಯನ್ನು ಗಮನಿಸಲು, ಅವರು ನೀಡಿರುವ ಚಟುವಟಿಕೆಗಳು, ಮಕ್ಕಳ ಪುಸ್ತಕಗಳು, ಮಕ್ಕಳು ಕಲಿತಿರುವ ವಿವಿಧ ವಿಷಯಗಳು ಇವುಗಳನ್ನು ಗಮನಿಸಬಹುದು.

**ಮಿತಿಗಳು:** ಕೆಲವೊಮ್ಮೆ ನೈಜ ಉದ್ದೇಶಗಳನ್ನು ಹೊರತುಪಡಿಸಿ, ಕೇವಲ ದಾಖಲೆಗಳಿಗಾಗಿಯೇ ಕಾರ್ಯಕ್ರಮಗಳು ನಡೆದಿದ್ದಾಗ ಸೂಕ್ತ ಮಾಹಿತಿ ಲಭ್ಯವಾಗದಿರಬಹುದು.

ಇಷ್ಟೇ ಅಲ್ಲದೇ ವ್ಯಕ್ತಿ ಅಧ್ಯಯನ, ಪ್ರಾಯೋಗಿಕ ವಿಧಾನಗಳಿಂದಲೂ ದತ್ತಾಂಶಗಳನ್ನು ಸಂಗ್ರಹಿಸಬಹುದು. ಆದರೆ ಮೇಲೆ ವಿವರಿಸಿರುವ ವಿಧಾನಗಳು ಪ್ರಾಥಮಿಕ ದತ್ತಾಂಶಗಳನ್ನು ಪಡೆಯುವ ಜನಪ್ರಿಯ ವಿಧಾನಗಳಾಗಿವೆ. ಒಟ್ಟಾರೆಯಾಗಿ ಇವೆಲ್ಲವೂ, ಸಮೀಕ್ಷೆಗಳನ್ನು ನಡೆಸುವಾಗ ಮಾಹಿತಿಗಳನ್ನು ಸಂಗ್ರಹಿಸುವ ವಿಧಾನಗಳಾಗಿವೆ. ಈ ಮಾಹಿತಿಗಳು ಮುಂದೆ ಸಮೀಕ್ಷೆಯ ಫಲಿತಗಳನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ ಅಲ್ಲದೇ ಪರಿಹಾರಗಳನ್ನು ಕಂಡುಹಿಡಿಯುವಲ್ಲಿ ತಮ್ಮ ಕೊಡುಗೆಗಳನ್ನು ನೀಡುತ್ತವೆ.

## 4.3 ದತ್ತಾಂಶ ಸಂಗ್ರಹಣೆಯ ಕ್ರೋಢೀಕರಣ ಮತ್ತು ವಿಶ್ಲೇಷಣೆ:

ಸಂಗ್ರಹಿಸಿದ ದತ್ತಾಂಶಗಳನ್ನು ಕ್ರೋಢೀಕರಿಸಿ, ವಿಶ್ಲೇಷಣೆ ಮಾಡುವುದು ಒಂದು ನಿರ್ಣಾಯಕ ಹಂತವಾಗಿದ್ದು, ಇದು ದತ್ತಾಂಶಗಳನ್ನು ಅರ್ಥೈಸಲು ಮತ್ತು ಅವುಗಳ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಲು ಸಹಾಯಕವಾಗಿವೆ. ಅಲ್ಲದೇ ದತ್ತಾಂಶಗಳ ವಿಶ್ಲೇಷಣೆಯಿಂದ ಸಮೀಕ್ಷೆಗಳ ಒಳನೋಟಗಳು ಮತ್ತು ಫಲಿತಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು ಪ್ರಾಪ್ತವಾಗುತ್ತವೆ. ದತ್ತಾಂಶಗಳ ವಿಶ್ಲೇಷಣೆಯನ್ನು ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ದತ್ತಾಂಶಗಳ ವಿಶ್ಲೇಷಣೆಯು ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ.

## ಪರಿಮಾಣಾತ್ಮಕ ದತ್ತಾಂಶಗಳ ವಿಶ್ಲೇಷಣೆ:

### ಪೂರ್ವ ತಯಾರಿ

- ➔ **ದತ್ತಾಂಶಗಳನ್ನು ಪರಿಷ್ಕರಿಸುವುದು:** ಸಂಗ್ರಹಿಸಿರುವ ಕಚ್ಚಾ ದತ್ತಾಂಶಗಳನ್ನು ಪರೀಕ್ಷಿಸುವ ಪ್ರಕ್ರಿಯೆಯನ್ನು ದತ್ತಾಂಶಗಳ ಪರಿಷ್ಕರಣೆ ಎನ್ನಬಹುದು. ಅಂದರೆ, ಎಲ್ಲಾ ದತ್ತಾಂಶಗಳೂ ಸರಿಯಾಗಿ ದಾಖಲಾಗಿವೆಯೇ ಅಥವಾ ದತ್ತಾಂಶಗಳ ಪಟ್ಟಿಯಲ್ಲಿ ಯಾವುದಾದರೂ ಅಂಶಗಳು ಬಿಟ್ಟುಹೋಗಿದೆಯೇ ಅಥವಾ ಏನಾದರೂ ದೋಷಗಳಿವೆಯೇ ಎಂದು ಪರಿಶೀಲಿಸಬೇಕು. ಪ್ರತಿಸ್ಪಂದನಾಕಾರರು ಉತ್ತರಿಸಿರುವ ಪ್ರಶ್ನಾವಳಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸುವ ಹಂತವೂ ಇದೇ ಆಗಿದೆ. ದತ್ತಾಂಶಗಳು ನಿಖರವಾಗಿವೆಯೇ, ಸುಸಂಗತವಾಗಿವೆಯೇ, ಏಕರೂಪವಾಗಿ ದಾಖಲಾಗಿವೆಯೇ, ಪೂರ್ಣವಾಗಿ ಸಂಗ್ರಹವಾಗಿವೆಯೇ ಮತ್ತು ವ್ಯವಸ್ಥಿತವಾಗಿ ಸಂಗ್ರಹವಾಗಿವೆಯೇ ಎಂಬುದನ್ನು ದೃಢೀಕರಿಸಲು ದತ್ತಾಂಶಗಳ ಪರಿಷ್ಕರಣೆಯನ್ನು ಮಾಡಲಾಗುತ್ತದೆ.

**ಉದಾಹರಣೆ 8:** ಕೆಲವೊಂದು ಪ್ರಶ್ನೆಗಳಿಗೆ ಪ್ರತಿಸ್ಪಂದನಕಾರರು ಉತ್ತರಿಸಿಲ್ಲ ಎಂದು ಭಾವಿಸೋಣ; ಆಗ, ಅಂತಿಮ ಹಂತದ ವಿಶ್ಲೇಷಣೆಗೆ ಈ ದತ್ತಾಂಶವನ್ನು ಪರಿಗಣಿಸುವಂತಿಲ್ಲ. ಈ ರೀತಿಯ ದತ್ತಾಂಶಗಳನ್ನು ಕೈಬಿಡುವುದೂ ಸಹ ದತ್ತಾಂಶಗಳ ಪರಿಷ್ಕರಣೆಯಲ್ಲಿ ಸಂಭವಿಸುತ್ತದೆ.

- ➔ **ದತ್ತಾಂಶಗಳ ಸಂಕೇತೀಕರಣ (coding)**: ಪ್ರಶ್ನಾವಳಿಗಳ ಉತ್ತರಗಳಿಗೆ ಸಂಖ್ಯೆಗಳನ್ನು ಅಥವಾ ಅಕ್ಷರಗಳನ್ನು ಸಂಕೇತವನ್ನಾಗಿ ಕೊಡುವ ಪ್ರಕ್ರಿಯೆಗೆ ದತ್ತಾಂಶಗಳ ಸಂಕೇತೀಕರಣ ಎನ್ನಬಹುದು. ಇದರಿಂದ ಹಲವಾರು ಪ್ರತಿಕ್ರಿಯೆಗಳು ಒಂದು ಸೀಮಿತ ಗುಂಪಿನಲ್ಲಿ ಸೇರಿಕೊಂಡು ದತ್ತಾಂಶಗಳು ಸೂಕ್ತವಾಗಿ ವಿಂಗಡಣೆಗೊಳ್ಳುತ್ತವೆ.

**ಉದಾಹರಣೆ 9**: ಒಂದು ಬಹು ಆಯ್ಕೆ ಪ್ರಶ್ನೆಯ ಉತ್ತರಗಳನ್ನು A), B), C) ಮತ್ತು D) ಎಂದು ಸಂಕೇತಿಸಿದ್ದಲ್ಲಿ, ಪ್ರತಿಯೊಂದು ಪ್ರಶ್ನೆಗೂ A ಉತ್ತರಗಳೆಲ್ಲ ಒಂದೆಡೆ ಇರುವಂತೆ B ಉತ್ತರಗಳೆಲ್ಲ ಒಂದೆಡೆ ಇರುವಂತೆ (ಅದೇ ರೀತಿ C ಮತ್ತು D ಗಳಿಗೂ) ದತ್ತಾಂಶಗಳನ್ನು ಸಂಗ್ರಹಿಸಿದಾಗ, ವಿಶ್ಲೇಷಣೆಯು ಸುಗಮವಾಗುತ್ತದೆ. ಇದರಿಂದ ದತ್ತಾಂಶಗಳು ಸರಿಯಾಗಿ ಜೋಡಿಸಲ್ಪಡುತ್ತವೆ.

ಅಷ್ಟೇ ಅಲ್ಲದೇ, ವಿನ್ಯಾಸಗಳನ್ನು ಗಮನಿಸಲು, ಚರಾಂಶಗಳ ನಡುವಿನ ಸಂಬಂಧಗಳನ್ನು ಕಂಡುಹಿಡಿಯಲು ಇದು ಸಹಾಯ ಮಾಡುತ್ತದೆ.

➔ **ದತ್ತಾಂಶಗಳ ವರ್ಗೀಕರಣ/ವಿಂಗಡಣೆ:** ದತ್ತಾಂಶಗಳನ್ನು ಅಗತ್ಯಾನುಸಾರವಾಗಿ ವಿಂಗಡಿಸಿಕೊಳ್ಳುವುದು ಅವಶ್ಯಕ. ಇದರಿಂದ ವಿಶ್ಲೇಷಣೆಯಲ್ಲಿ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಆವೃತ್ತಿ ವಿತರಣಾ ಪಟ್ಟಿಯನ್ನು ತಯಾರಿಸಿ, ದತ್ತಾಂಶಗಳನ್ನು ಗುಂಪುಮಾಡಬಹುದು. ಅಂಕಾಧಾರಿತ, ಆದಾಯ ಆಧಾರಿತ ಸಮೀಕ್ಷೆಗಳನ್ನು ಮಾಡುವಾಗ ವರ್ಗಾಂತರಗಳನ್ನು ಬಳಸಿಕೊಂಡು ದತ್ತಾಂಶಗಳನ್ನು ಗುಂಪು ಮಾಡಬಹುದು. ವರ್ಗಾಂತರಗಳಲ್ಲಿ ಅವಿಚ್ಛಿನ್ನ (continuous) ವರ್ಗಾಂತರ ಮತ್ತು ವಿಚ್ಛಿನ್ನ (discrete) ವರ್ಗಾಂತರಗಳಿದ್ದು ಒಂದನ್ನು ಸಂದರ್ಭಾನುಸಾರ ಆಯ್ಕೆ ಮಾಡಬಹುದು. ಈ ರೀತಿ ಗುಂಪು ಮಾಡಿದ ದತ್ತಾಂಶಗಳನ್ನು ಸಂಖ್ಯಾಶಾಸ್ತ್ರದನ್ವಯ ಸುಲಭವಾಗಿ ವಿಶ್ಲೇಷಿಸಬಹುದು.

**ಉದಾಹರಣೆ 10:** ಮಕ್ಕಳ ಸಾಧನೆಯ ಬಗ್ಗೆ ಸಮೀಕ್ಷೆಯನ್ನು ನಡೆಸಿದಾಗ, ನಗರ, ಗ್ರಾಮಾಂತರ, ಸರ್ಕಾರಿ, ಅನುದಾನಿತ, ಅನುದಾನರಹಿತ, ಗಂಡು, ಹೆಣ್ಣು ಹೀಗೆ ವಿವಿಧ ಗುಂಪುಗಳಲ್ಲಿ ದತ್ತಾಂಶಗಳನ್ನು ವಿಂಗಡಿಸಿ, ಆವೃತ್ತಿ ವಿತರಣಾ ಪಟ್ಟಿಯನ್ನು ತಯಾರಿಸಿದಾಗ ಪ್ರತಿಯೊಂದು ಗುಂಪಿನ ವಿಶ್ಲೇಷಣೆಯನ್ನು ಸುಲಭವಾಗಿ ಮಾಡಬಹುದು. ಅಲ್ಲದೇ ವಿದ್ಯಾರ್ಥಿಗಳ ಗ್ರೇಡ್‌ವಾರು (A+, A, B+, B, C+, C) ವಿಶ್ಲೇಷಣೆಯನ್ನು ಮಾಡಬೇಕಾದಾಗ, ಈ ಗ್ರೇಡ್‌ಗಳಿಗೆ ಅನುಗುಣವಾಗಿ ದತ್ತಾಂಶಗಳನ್ನು ವಿಂಗಡಿಸಿಕೊಳ್ಳುವುದು ಉತ್ತಮ.

**ಚಟುವಟಿಕೆ:** 2024 ಎಸ್. ಎಸ್. ಎಲ್. ಸಿ ಪರೀಕ್ಷೆ 1 ರ ತಾಲ್ಲೂಕುವಾರು ಮತ್ತು ಲಿಂಗವಾರು ಫಲಿತಾಂಶವನ್ನು ಕೆಳಗೆ ನೀಡಲಾಗಿದ್ದು, ಇದನ್ನು ಗಮನಿಸಿ, ಫಲಿತಾಂಶದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಚರ್ಚಿಸಿ.

**BLOCKWISE RESULT**

| Rank | Block | Appear | | | Passed | | | Fail | | | % Pass | | |
|---|---|---|---|---|---|---|---|---|---|---|---|---|---|
| | | B | G | T | B | G | T | B | G | T | B | G | T |
| 1 | T Narasipura | 1779 | 1847 | 3626 | 1605 | 1778 | 3383 | 174 | 69 | 243 | 90.22 | 96.26 | 93.30 |
| 2 | Mysuru Rural | 2501 | 2475 | 4976 | 2241 | 2389 | 4630 | 260 | 86 | 346 | 89.60 | 96.53 | 93.05 |
| 3 | Mysuru South | 2012 | 2228 | 4240 | 1756 | 2078 | 3834 | 256 | 150 | 406 | 87.28 | 93.27 | 90.42 |
| 4 | R Nagan | 1403 | 1420 | 2823 | 1186 | 1340 | 2526 | 217 | 80 | 297 | 84.53 | 94.37 | 89.48 |
| 5 | Nanjangud | 2370 | 2336 | 4706 | 1938 | 2144 | 4082 | 432 | 192 | 624 | 81.77 | 91.78 | 86.74 |
| 6 | Hunsur | 1907 | 2029 | 3936 | 1511 | 1844 | 3355 | 396 | 185 | 581 | 79.23 | 90.88 | 85.24 |
| 7 | Mysuru North | 2687 | 3339 | 6026 | 2135 | 2968 | 5103 | 552 | 371 | 923 | 79.46 | 88.89 | 84.68 |
| 8 | Periyapatna | 1551 | 1459 | 3010 | 1125 | 1314 | 2439 | 426 | 145 | 571 | 72.53 | 90.06 | 81.03 |
| 9 | HDKote | 1637 | 1816 | 3453 | 1184 | 1547 | 2731 | 453 | 269 | 722 | 72.33 | 85.19 | 79.09 |
| | | 17847 | 18949 | 36796 | 14681 | 17402 | 32083 | 3166 | 1547 | 4713 | 82.26 | 91.84 | 87.19 |

## ಗುಣಾತ್ಮಕ ದತ್ತಾಂಶಗಳ ವಿಶ್ಲೇಷಣೆ:

### ಪೂರ್ವ ತಯಾರಿ

- **ದತ್ತಾಂಶಗಳ ಪ್ರತಿಲಿಪಿ (Data Transcription):** ಸಂದರ್ಶನ ಅಥವಾ ಫೋಕಸ್ ಗುಂಪಿನ ಚರ್ಚೆಗಳಿಂದ ದೊರೆತಿರುವ ದತ್ತಾಂಶಗಳ ಟಿಪ್ಪಣಿಗಳನ್ನು, ಧ್ವನಿಮುದ್ರಿಕೆಗಳನ್ನು ಆಧರಿಸಿ ಮಾಹಿತಿಯನ್ನು ಮತ್ತೊಮ್ಮೆ ಬರೆದುಕೊಳ್ಳಬೇಕು. ಹೀಗೆ ಬರೆಯುವಾಗ ಸ್ಪಷ್ಟತೆ ಮತ್ತು ನಿಖರತೆಯ ಕಡೆಗೆ ಗಮನವಿರಬೇಕು. ಯಾವುದೇ ಮಾಹಿತಿ ಬಿಟ್ಟುಹೋಗದಂತೆ ಎಚ್ಚರಿಕೆ ವಹಿಸಬೇಕು.

**ಉದಾಹರಣೆ 11:** ಒಂದು ಸಾಧನಾ ಪರೀಕ್ಷೆಯಲ್ಲಿ ಮಕ್ಕಳ ಸಾಧನೆ ಕಡಿಮೆಯಾಗಿದೆ ಏಕೆ? ಎಂಬ ವಿಷಯದ ಕುರಿತು ಸಂದರ್ಶನವನ್ನು ನಡೆಸಿದ್ದೇವೆ ಎಂದರೆ, ಅದರಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನೆಲ್ಲ ಬರೆದುಕೊಳ್ಳುವುದು ಉತ್ತಮ. ಅತಿಯಾದ ಮೊಬೈಲ್ ಬಳಕೆ, ಪೋಷಕರ ಅಸಹಕಾರ, ಶಿಕ್ಷಕರ ಕೊರತೆ ಹೀಗೆ ಒಂದೊಂದು ಸಮಸ್ಯೆಗಳ ಬಗ್ಗೆ ಪ್ರತಿಸ್ಪಂದನಕಾರರು ಬೆಳಕು ಚೆಲ್ಲಿರಬಹುದು. ಅವುಗಳನ್ನೆಲ್ಲ ಪಟ್ಟಿ ಮಾಡಿಕೊಂಡು ಕೋಷ್ಟಕ ತಯಾರಿಸಿಕೊಳ್ಳುವುದು ಉತ್ತಮ.

- **ದತ್ತಾಂಶಗಳ ಸಂಕೇತೀಕರಣ (Data Coding):** ಗುಣಾತ್ಮಕ ದತ್ತಾಂಶಗಳಲ್ಲಿರುವ ಮುಖ್ಯ ವಿಷಯಾಂಶಗಳನ್ನು, ವಿನ್ಯಾಸಗಳನ್ನು ಅಥವಾ ಗುಂಪುಗಳನ್ನು ಗಮನಿಸಿ ಅವುಗಳಿಗೆ ಸೂಕ್ತ ಸಂಕೇತಗಳನ್ನು ನೀಡಬೇಕು ನಂತರ ಇವುಗಳನ್ನು ವಿಶ್ಲೇಷಿಸಬೇಕು. ಮೇಲಿನ ಉದಾಹರಣೆಯಲ್ಲಿ ಮೊಬೈಲ್ ಬಳಕೆಗೆ A ಎಂದೂ, ಪೋಷಕರ ಅಸಹಕಾರಕ್ಕೆ B ಎಂದೂ, ಶಿಕ್ಷಕರ ಕೊರತೆಗೆ C ಎಂದೂ ಸಂಕೇತಗಳನ್ನು ನೀಡಿ, ಬಂದ ಉತ್ತರಗಳನ್ನು ಇದಕ್ಕನುಗುಣವಾಗಿ ಜೋಡಿಸಬಹುದು.

## ದತ್ತಾಂಶಗಳ ವಿಶ್ಲೇಷಣೆ:

- **ವಿವರಣಾತ್ಮಕ ಅಂಕಿ-ಅಂಶಗಳ ವಿಶ್ಲೇಷಣೆ:** ಲಭ್ಯವಿರುವ ದತ್ತಾಂಶಗಳಿಗೆ ವ್ಯಾಪ್ತಿ, ಸರಾಸರಿ, ಮಧ್ಯಾಂಕ, ಬಹುಲಕ ಮತ್ತು ಮಾನಕ ವಿಚಲನೆಗಳನ್ನು ಕಂಡುಹಿಡಿಯಬೇಕು. ಇದರಿಂದ ದತ್ತಾಂಶಗಳ ಕೇಂದ್ರೀಯ ಪ್ರವೃತ್ತಿಯನ್ನು ಸರಿಯಾಗಿ ಅರ್ಥೈಸಬಹುದು. ಗುಂಪುಗಳಲ್ಲಿ ಯಾವುದಾದರೂ ವಿನ್ಯಾಸಗಳು ಕಂಡುಬರುತ್ತಿವೆಯೇ? ಮಾಹಿತಿಗಳು ಒಂದೇ ಕಡೆ ಕೇಂದ್ರೀಕೃತವಾಗಿವೆಯೇ? ಎಂಬುದನ್ನೂ ಪರೀಕ್ಷಿಸಬಹುದು. ಆ ಗುಂಪುಗಳಲ್ಲಿ ಚರಾಕ್ಷರಗಳ ವರ್ತನೆಗಳನ್ನು ಪರಿಶೀಲಿಸಬಹುದು. ಎಷ್ಟು ದತ್ತಾಂಶಗಳು ಸರಾಸರಿಗೆ ಸಮನಾಗಿವೆ? ಎಷ್ಟು ದತ್ತಾಂಶಗಳು ಸರಾಸರಿಗಿಂತ ಮೇಲಿವೆ/ಕೆಳಗಿವೆ? ದತ್ತಾಂಶಗಳ ಮಧ್ಯಾಂಕವೇನು? ಅತಿ ಹೆಚ್ಚು ಬಾರಿ ಪುನರಾವರ್ತಿತವಾಗಿರುವ ಅಂಶ ಯಾವುದು? ಎಂದು ವಿಶ್ಲೇಷಣೆಯನ್ನು ನಡೆಸಬಹುದು.

**ಉದಾಹರಣೆ 12:** ವಿದ್ಯಾರ್ಥಿಗಳ ಉತ್ತರಪತ್ರಿಕೆಗಳ ಪರಿಶೀಲನೆ ಎಂಬ ದತ್ತಾಂಶ ಸಂಗ್ರಹಣೆಯಲ್ಲಿ, ಪ್ರಶ್ನೆ ಸಂಖ್ಯೆ 5ಕ್ಕೆ 90% ಗಿಂತಲೂ ಹೆಚ್ಚು ವಿದ್ಯಾರ್ಥಿಗಳು ತಪ್ಪು ಉತ್ತರವನ್ನು ಬರೆದಿರುವುದು ಕಂಡುಬರುತ್ತಿದೆ. ಇದನ್ನು ವಿಶ್ಲೇಷಿಸುವಾಗ ತಪ್ಪು ಉತ್ತರಗಳಲ್ಲಿ ನಗರ ಪ್ರದೇಶದ ಮಕ್ಕಳೆಷ್ಟು? ಅರೆ ನಗರ ಅಥವಾ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೆಷ್ಟು? ಹೆಚ್ಚಿನ ಸಂಖ್ಯೆಯಲ್ಲಿ ಗಂಡು ಮಕ್ಕಳು ತಪ್ಪನ್ನು ಮಾಡಿದ್ದಾರೆಯೇ ಅಥವಾ ಹೆಣ್ಣುಮಕ್ಕಳೇ? ಸರಿ ಉತ್ತರ ಕೊಟ್ಟವರಲ್ಲಿ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶೇಕಡಾ ಪ್ರಮಾಣವೇನು? ಹೀಗೆ ತಪ್ಪು ಉತ್ತರ ಬರೆಯಲು ಕಾರಣಗಳೇನಿರಬಹುದು? ಹೀಗೆ ಹಲವು ಆಯಾಮಗಳಲ್ಲಿ ದತ್ತಾಂಶವನ್ನು ವಿಶ್ಲೇಷಣೆ ಮಾಡಬಹುದು.

| ಗಣಿತ | | ವಿಜ್ಞಾನ | |
|---|---|---|---|
| ಅಂಕಗಳು | ಗ್ರೇಡ್ | ಅಂಕಗಳು | ಗ್ರೇಡ್ |
| 49 | C | 56 | C+ |
| 74 | B+ | 67 | B |
| 80 | A | 85 | A |
| 48 | C | 58 | C+ |
| 54 | C+ | 55 | C+ |
| 48 | C | 45 | C |
| 62 | B | 51 | C+ |
| 65 | B | 69 | B |
| 53 | C+ | 64 | B |
| 84 | A | 78 | B+ |
| 76 | B+ | 61 | B |
| 94 | A+ | 89 | A |
| 64 | B | 69 | B |
| 86 | A | 77 | B+ |
| 46 | C | 50 | C+ |
| 62 | B | 57 | C+ |
| 64 | B | 55 | C+ |
| 54 | C+ | 50 | C+ |
| 84 | A | 90 | A+ |
| 71 | B+ | 75 | B+ |

**ಚಟುವಟಿಕೆ:**

ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ 20 ವಿದ್ಯಾರ್ಥಿಗಳು 100 ಅಂಕಗಳಿಗೆ ಗಳಿಸಿದ ಅಂಕಗಳು ಮತ್ತು ಗ್ರೇಡ್‌ಗಳನ್ನು ಪಕ್ಕದ ಕೋಷ್ಟಕದಲ್ಲಿ ಕೊಡಲಾಗಿದೆ. ಈ ಅಂಕಗಳ ಸರಾಸರಿಯನ್ನು ಮತ್ತು ಗುಣಮಟ್ಟ ಸಾಧನಾ ಸೂಚ್ಯಂಕವನ್ನು (Quality Performance Index) ಕಂಡುಹಿಡಿಯಿರಿ. ಎರಡೂ ವಿಷಯಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಹೋಲಿಸಿ. ಯಾವ ವಿಷಯದಲ್ಲಿ ವಿದ್ಯಾರ್ಥಿಗಳ ಸಾಧನೆ ಉತ್ತಮವಾಗಿದೆ? ಯಾವ ವಿಷಯದಲ್ಲಿ ಗುಣಮಟ್ಟ ಉತ್ತಮವಾಗಿದೆ? ಕಂಡುಹಿಡಿಯಿರಿ.

**ಸೂಚನೆ:** QPI ಕಂಡುಹಿಡಿಯಲು ಗ್ರೇಡ್ ಅಂಕಗಳು:

A+ ಗೆ 6 ಅಂಕಗಳು

A ಗೆ 5 ಅಂಕಗಳು

B+ ಗೆ 4 ಅಂಕಗಳು

B ಗೆ 3 ಅಂಕಗಳು

C+ ಗೆ 2 ಅಂಕಗಳು

C ಗೆ 1 ಅಂಕಗಳು

ಈ ವಿಶ್ಲೇಷಣೆಯ ಸಹಾಯದಿಂದ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಒಂದು ಕ್ರಿಯಾಯೋಜನೆಯನ್ನು ರಚಿಸಿ

**ಹೆಚ್ಚಿನ ಮಾಹಿತಿಗಾಗಿ:**

**ತಾರ್ಕಿಕ ಅಂಕಿಅಂಶಗಳ ವಿಶ್ಲೇಷಣೆ:**

**ಟಿ–ಪರೀಕ್ಷೆ (t-test):** ಎರಡು ಗುಂಪುಗಳ ದತ್ತಾಂಶಗಳ ನಡುವಿನ ಸರಾಸರಿಯಲ್ಲಿ ಗಮನಾರ್ಹ ವ್ಯತ್ಯಾಸವಿದ್ದಾಗ ಈ ಪರೀಕ್ಷೆಯನ್ನು ಬಳಸಬಹುದು. ಈ ಪರೀಕ್ಷೆಯಿಂದ ಪಿ–ಮೌಲ್ಯ (probability value/ಸಂಭವನೀಯತೆಯ ಮೌಲ್ಯ)ವನ್ನು ಕಂಡುಹಿಡಿದು ವಿಶ್ಲೇಷಣೆಯನ್ನು ಕೈಗೊಳ್ಳಲಾಗುತ್ತದೆ.ಇದರಲ್ಲಿ ಎರಡು ವಿಧಗಳಿವೆ.

i. **ಸ್ವತಂತ್ರ ನಮೂನೆ ಟಿ–ಪರೀಕ್ಷೆ:** ಉದಾಹರಣೆ 11: ಸೇತುಬಂಧ ತರಗತಿಗಳನ್ನು ನಡೆಸದೇ ಸಾಧನಾ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಗುಂಪಿನ ಸಾಧನೆಯ ಸರಾಸರಿಯನ್ನು ಹೋಲಿಸುವುದು.

ii. **ಅವಲಂಬಿತ ನಮೂನೆ ಟಿ–ಪರೀಕ್ಷೆ:** ಉದಾಹರಣೆ 12: ಸೇತುಬಂಧ ತರಗತಿಗಳನ್ನು ನಡೆಸಿದ ನಂತರ ಸಾಧನಾ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಗುಂಪಿನ ಸಾಧನೆಯ ಸರಾಸರಿಯನ್ನು ಹೋಲಿಸುವುದು.

**ಅನೋವಾ (ANOVA-Analysis Of Variance):** ಇದು ಪ್ರಸರಣ ವಿಚಲನೆಯ ವಿಶ್ಲೇಷಣೆಯಾಗಿದೆ. ಎರಡಕ್ಕಿಂತ ಹೆಚ್ಚು ಗುಂಪುಗಳ ಸರಾಸರಿಯನ್ನು ಹೋಲಿಸಿ ಅವು ಒಂದು ಗುಂಪಿಗಿಂತ ಇನ್ನೊಂದು ಗುಂಪು ಭಿನ್ನವಾಗಿದೆಯೇ ಎಂಬುದನ್ನು ಗಮನಿಸಬೇಕಾದಾಗ ಈ ವಿಶ್ಲೇಷಣೆಯನ್ನು ಬಳಸಬಹುದು. ಈ ವಿಶ್ಲೇಷಣೆಯು ಗುಂಪಿನೊಳಗಿನ ಸರಾಸರಿಯ ವ್ಯತ್ಯಾಸಗಳು ಮತ್ತು ಗುಂಪುಗಳ ನಡುವಿನ ಸರಾಸರಿ ಅಂತರಗಳನ್ನು ಹೋಲಿಸಬಲ್ಲವು.

**ಕೈ–ವರ್ಗ ಪರೀಕ್ಷೆ (ಕೈ ಎಂಬುದು ಒಂದು ಗ್ರೀಕ್ ವರ್ಣಮಾಲೆಯ ಅಕ್ಷರ) (chi-square test):** ಯಾವುದೇ ಎರಡು ಚರಾಂಶಗಳ ನಡುವೆ ಗಮನಾರ್ಹ ಸಹ–ಸಂಬಂಧವಿದೆಯೇ ಎಂಬುದನ್ನು ಪರೀಕ್ಷಿಸಲು ಈ ಪರೀಕ್ಷೆಯನ್ನು ಬಳಸಲಾಗುತ್ತದೆ.

**ಉದಾಹರಣೆ 13:** ವಿದ್ಯಾರ್ಥಿಗಳ ಸಾಧನೆ ಮತ್ತು ಅವರ ಆರ್ಥಿಕ ಸ್ಥಿತಿಗತಿಯ ದತ್ತಾಂಶಗಳಿವೆ ಎಂದು ಭಾವಿಸೋಣ. ಈ ಎರಡೂ ಅಂಶಗಳಿಗೂ ಗಮನಾರ್ಹ ಸಂಬಂಧ ಇದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಈ ಪರೀಕ್ಷೆಯನ್ನು ಉಪಯೋಗಿಸಬಹುದು.


ಒಟ್ಟಿನಲ್ಲಿ ತಾರ್ಕಿಕವಾಗಿ ನಡೆಸಲಾಗುವ ದತ್ತಾಂಶ ವಿಶ್ಲೇಷಣೆಯಿಂದ ನಮ್ಮ ಪ್ರಾಕಲ್ಪನೆಗಳು ಸರಿಯಾಗಿವೆಯೇ ಎಂದು ಪರೀಕ್ಷಿಸಿಕೊಳ್ಳಬಹುದು ಅಲ್ಲದೇ ಚರಾಂಶಗಳಿಗಿರುವ ಸಹ–ಸಂಬಂಧವನ್ನು ಅನ್ವೇಷಿಸಬಹುದು. p–ಮೌಲ್ಯದ ಅನ್ವಯ ಸಮೀಕ್ಷೆಯಿಂದ ದೊರೆಯಬಹುದಾದ ವಾಸ್ತವಾಂಶಗಳನ್ನು ನಿರ್ಣಯಿಸಬಹುದು.

## 4.4 ದತ್ತಾಂಶಗಳನ್ನು ಪ್ರತಿನಿಧಿಸುವುದು:

ದತ್ತಾಂಶಗಳನ್ನು ನಕ್ಷೆಗಳ ರೂಪದಲ್ಲಿ ಪ್ರತಿನಿಧಿಸುವುದು: ದತ್ತಾಂಶಗಳನ್ನು ನಕ್ಷೆಗಳ ರೂಪದಲ್ಲಿ ಪ್ರತಿನಿಧಿಸುವುದರಿಂದ ಎಲ್ಲರಿಗೂ ಸುಲಭವಾಗಿ ದತ್ತಾಂಶಗಳ ವಿಶ್ಲೇಷಣೆ ಅರ್ಥವಾಗುತ್ತದೆ. ನಮಗೆ ದೊರೆತಿರುವ ದತ್ತಾಂಶಗಳನ್ನು ಚಾರ್ಟ್‌ಗಳು, ನಕ್ಷೆಗಳು ಮತ್ತು ಚಿತ್ರಗಳ ರೂಪದಲ್ಲಿ ಹೋಲಿಸಬಹುದು. ದತ್ತಾಂಶಗಳನ್ನು ಹೋಲಿಸಲು ಅನುಕೂಲವಾಗುವಂತೆ ಪೈ–ನಕ್ಷೆ, ಜೋಡಿಸ್ತಂಭ ನಕ್ಷೆ, ಅಡ್ಡ ಸ್ತಂಭ ನಕ್ಷೆ, ನೇರ ಸ್ತಂಭ ನಕ್ಷೆ, ರೇಖಾನಕ್ಷೆಗಳನ್ನು ನಿರ್ಧರಿಸಿ ಅವುಗಳಲ್ಲಿ ದತ್ತಾಂಶಗಳನ್ನು ಪ್ರತಿನಿಧಿಸಬೇಕು. ಇವುಗಳ ಸಹಾಯದಿಂದ ಚರಾಂಶಗಳ ನಡುವಿನ ಸಂಬಂಧಗಳನ್ನು ಸುಲಭವಾಗಿ ವಿಶ್ಲೇಷಿಸಬಹುದು. ಫಲಿತಾಂಶಗಳಲ್ಲಿ ಆಸಕ್ತಿ ಇರುವವರು ಈ ನಕ್ಷೆಗಳನ್ನು ನೋಡಿದಾಗ ಸುಲಭವಾಗಿ ಫಲಿತಾಂಶಗಳನ್ನು ನೆನಪಿನಲ್ಲಿಡಬಹುದು. ಹೇಳಿಕೆಗಳಿಗಿಂತಲೂ ನಕ್ಷೆಗಳು ನೇರವಾಗಿ ಓದುಗರಿಗೆ ಅರ್ಥವಾಗಬಲ್ಲವು. ಆದರೆ, ಯಾವುದೇ ಕಾರಣಕ್ಕೂ ನಕ್ಷೆಗಳು ವಿಶ್ಲೇಷಣೆಯ ಹಾದಿ ತಪ್ಪಿಸುವಂತೆ ಇರಬಾರದು.

**ಉದಾಹರಣೆ 14:** 2024 ರ ಕರ್ನಾಟಕ ರಾಜ್ಯದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ವಿಷಯವಾರು ಉತ್ತೀರ್ಣರಾದ ಲಿಂಗವಾರು ವಿದ್ಯಾರ್ಥಿಗಳ ಶೇಕಡಾ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಈ ದತ್ತಾಂಶವನ್ನು ನಕ್ಷೆಯಲ್ಲಿ ಪ್ರತಿನಿಧಿಸಿದಾಗ ದೊರೆಯುವ ನಕ್ಷೆಯನ್ನು ಗಮನಿಸಿ.

| ವಿಷಯ | ಗಂಡು | ಹೆಣ್ಣು | ಒಟ್ಟು |
|---|---|---|---|
| ಪ್ರಥಮ ಭಾಷೆ | 78.30 | 90.12 | 84.27 |
| ದ್ವಿತೀಯ ಭಾಷೆ | 75.27 | 86.90 | 81.14 |
| ತೃತೀಯ ಭಾಷೆ | 76.66 | 87.89 | 82.33 |
| ಗಣಿತ | 74.29 | 86.02 | 80.21 |
| ವಿಜ್ಞಾನ | 71.98 | 85.11 | 78.61 |
| ಸಮಾಜ ವಿಜ್ಞಾನ | 76.17 | 87.34 | 81.80 |





ನಕ್ಷೆಗಳ ಸಹಾಯದಿಂದ ದತ್ತಾಂಶಗಳ ವಿಶ್ಲೇಷಣೆ ಸುಲಭವಾಗುತ್ತದೆ ಎಂಬ ಅಂಶವನ್ನು ಗಮನಿಸಿ. ಈ ನಕ್ಷೆಯಿಂದ ನಿಮಗೆ ತಿಳಿದುಬರುವ ಅಂಶಗಳನ್ನು ವಿಶ್ಲೇಷಿಸಿ.


**ಉದಾಹರಣೆ 15:**


2024 ರ ಎಸ್ ಎಸ್ ಎಲ್ ಸಿ ಪರೀಕ್ಷೆ–1 ರಲ್ಲಿ ಪರೀಕ್ಷೆಗೆ ಹಾಜರಾದ ಒಂದು ಜಿಲ್ಲೆಯ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಗಳಿಸಿರುವ ಗ್ರೇಡ್ ವಿವರ ಕೆಳಗಿನಂತಿದೆ. ಈ ದತ್ತಾಂಶವನ್ನು ಪೈ ನಕ್ಷೆಯಲ್ಲಿ ಪ್ರತಿನಿಧಿಸಿರುವುದನ್ನು ಗಮನಿಸಿ.

| ಗ್ರೇಡ್ | A+ | A | B+ | B | C+ | C | NC |
|---|---|---|---|---|---|---|---|
| ವಿದ್ಯಾರ್ಥಿಗಳ ಶೇಕಡಾ ಪ್ರಮಾಣ | 1.64 | 8.11 | 14.79 | 19.9 | 24.22 | 15 | 16.33 |



**ಚಿಂತನಾಶೀಲ ಪ್ರಶ್ನೆ:** ಮೇಲಿನ ದತ್ತಾಂಶಗಳನ್ನು ನೀವು ಹೇಗೆ ವಿಶ್ಲೇಷಿಸುವಿರಿ? ಇದರಿಂದ ಮುಂದಿನ ಶೈಕ್ಷಣಿಕ ವರ್ಷಕ್ಕೆ ಯಾವ ರೀತಿಯ ಯೋಜನೆಗಳನ್ನು ರೂಪಿಸಬಹುದು?




**ಉದಾಹರಣೆ 16:** ಕೋವಿಡ್ ಸಮಯದಲ್ಲಿ ರೇಡಿಯೋ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಕುರಿತ ಅಧ್ಯಯನದಲ್ಲಿ ಸಮೀಕ್ಷೆಯ ಸಹಾಯದಿಂದ ದತ್ತಾಂಶ ಸಂಗ್ರಹಣೆ ಮತ್ತು ನಕ್ಷೆಯಲ್ಲಿ ಪ್ರತಿನಿಧಿಸಿರುವುದು.

**ದತ್ತಾಂಶಗಳನ್ನು ಕೋಷ್ಟಕಗಳ ರೂಪದಲ್ಲಿ ಪ್ರತಿನಿಧಿಸುವುದು:** ದತ್ತಾಂಶಗಳನ್ನು ಕೋಷ್ಟಕಗಳ ಮೂಲಕ ವ್ಯಕ್ತಪಡಿಸಿದಾಗ ಕೋಷ್ಟಕವನ್ನು ಅರ್ಥೈಸುವುದು ಸುಲಭವಾಗುತ್ತದೆ. ಶಾಲೆವಾರು, ವಿಷಯವಾರು ಅಂಕಗಳ ಗಳಿಕೆ, ವರ್ಗವಾರು ವಿಶ್ಲೇಷಣೆ ಇವುಗಳನ್ನು ಮಾಡುವಾಗ ದತ್ತಾಂಶಗಳನ್ನು ಕೋಷ್ಟಕಗಳ ರೂಪದಲ್ಲಿ ಪ್ರತಿನಿಧಿಸುವುದರಿಂದ ಬಹಳಷ್ಟು ವಿವರಣೆಗಳನ್ನು ಒಂದೇ ಕೋಷ್ಟಕದಲ್ಲಿ ಹಿಡಿದಿಡಲು ಸಾಧ್ಯವಾಗುತ್ತದೆ. ಆದರೆ, ಹಲವು ಚರಾಂಶಗಳಿರುವ ವಿಶಾಲ ವ್ಯಾಪ್ತಿಯ ದತ್ತಾಂಶಗಳಿದ್ದಾಗ ಕೋಷ್ಟಕವು ಸಂಕೀರ್ಣವಾಗಿ ಅರ್ಥೈಸಲು ದುಸ್ತರವಾಗುತ್ತದೆ.

**ಗಮನಿಸಿ:** ಮೈಸೂರು ಜಿಲ್ಲೆಯ ಎಸ್. ಎಸ್. ಎಲ್. ಸಿ. ಪರೀಕ್ಷೆ–1 ರ ಮೈಸೂರು ಜಿಲ್ಲೆಯ ಫಲಿತಾಂಶದ ಕೋಷ್ಟಕ

| Block | App | | | | | | | | Pass | | | | | | | | % | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | 2A | 2B | 3A | 3B | CAT-1 | OTHERS | SC | ST | 2A | 2B | 3A | 3B | CAT-1 | OTHERS | SC | ST | 2A | 2B | 3A | 3B | CAT-1 | OTHERS | SC | ST |
| H D Kote | 513 | 103 | 403 | 399 | 82 | 28 | 1066 | 859 | 418 | 72 | 337 | 339 | 63 | 22 | 806 | 674 | 81.48 | 69.90 | 83.62 | 84.96 | 76.83 | 78.57 | 75.61 | 78.46 |
| HUNSURU | 1102 | 350 | 633 | 317 | 84 | 16 | 805 | 629 | 955 | 281 | 565 | 284 | 70 | 15 | 672 | 513 | 86.66 | 80.29 | 89.26 | 89.59 | 83.33 | 93.75 | 83.48 | 81.56 |
| K R Nagara | 1051 | 162 | 619 | 242 | 101 | 9 | 462 | 177 | 917 | 139 | 576 | 229 | 89 | 9 | 408 | 159 | 87.25 | 85.80 | 93.05 | 94.63 | 88.12 | 100.00 | 88.31 | 89.83 |
| MYSURU NORTH | 816 | 2725 | 524 | 356 | 267 | 148 | 843 | 347 | 734 | 2156 | 486 | 332 | 229 | 132 | 733 | 301 | 89.95 | 79.12 | 92.75 | 93.26 | 85.77 | 89.19 | 86.95 | 86.74 |
| MYSURU RURAL | 1481 | 108 | 684 | 727 | 182 | 92 | 981 | 721 | 1374 | 98 | 641 | 694 | 160 | 86 | 905 | 672 | 92.78 | 90.74 | 93.71 | 95.46 | 87.91 | 93.48 | 92.25 | 93.20 |
| MYSURU SOUTH | 1165 | 238 | 569 | 528 | 260 | 343 | 745 | 392 | 1076 | 205 | 527 | 498 | 226 | 331 | 643 | 328 | 92.36 | 86.13 | 92.62 | 94.32 | 86.92 | 96.50 | 86.31 | 83.67 |
| NANJANGUDU | 1054 | 152 | 158 | 1078 | 525 | 53 | 1071 | 615 | 930 | 111 | 149 | 993 | 395 | 53 | 922 | 529 | 88.24 | 73.03 | 94.30 | 92.12 | 75.24 | 100.00 | 86.09 | 86.02 |
| PIRIYAPATNA | 891 | 277 | 544 | 188 | 293 | 23 | 555 | 239 | 688 | 231 | 453 | 164 | 241 | 21 | 449 | 192 | 77.22 | 83.39 | 83.27 | 87.23 | 82.25 | 91.30 | 80.90 | 80.33 |
| T NARSIPURA | 597 | 206 | 833 | 429 | 204 | 6 | 860 | 491 | 552 | 178 | 792 | 416 | 186 | 6 | 793 | 460 | 92.46 | 86.41 | 95.08 | 96.97 | 91.18 | 100.00 | 92.21 | 93.69 |
| Grand Total | 8670 | 4321 | 4967 | 4264 | 1998 | 718 | 7388 | 4470 | 7644 | 3471 | 4526 | 3949 | 1659 | 675 | 6331 | 3828 | 88.17 | 80.33 | 91.12 | 92.61 | 83.03 | 94.01 | 85.69 | 85.64 |

**ದತ್ತಾಂಶಗಳ ಅರ್ಥವಿವರಣೆ:** ಪರಿಮಾಣಾತ್ಮಕ ದತ್ತಾಂಶಗಳ ವಿವರಣೆಯನ್ನು ನೀಡುವಾಗ ಸಮೀಕ್ಷೆಯ ಉದ್ದೇಶಗಳು ಮತ್ತು ಪ್ರಾಕಲ್ಪನೆಗಳನ್ನು ಆಧಾರವಾಗಿಟ್ಟುಕೊಂಡು, ಸಂಖ್ಯಾಶಾಸ್ತ್ರದನ್ವಯ ದತ್ತಾಂಶಗಳನ್ನು ವಿಶ್ಲೇಷಿಸಬೇಕು ಮತ್ತು ಅವುಗಳ ಅರ್ಥವಿವರಣೆಯನ್ನು ನೀಡಬೇಕು. ಈ ದತ್ತಾಂಶಗಳಿಂದ ದೊರೆತ ಫಲಿತಗಳನ್ನು ಪ್ರಾಯೋಗಿಕವಾಗಿ ಹೇಗೆ ಅನ್ವಯಗಳನ್ನು ಚರ್ಚಿಸಬೇಕು. ಗುಣಾತ್ಮಕ ದತ್ತಾಂಶಗಳ ವಿವರಣೆಯನ್ನು ನೀಡುವಾಗ ದೊರೆತಿರುವ ವಿನ್ಯಾಸ ಮತ್ತು ಪ್ರವೃತ್ತಿಗಳನ್ನು ಆಧರಿಸಿ, ದತ್ತಾಂಶಗಳ ಅರ್ಥವಿವರಣೆಯನ್ನು ಮಾಡಬೇಕು. ಅದಕ್ಕೆ ಸಂಬಂಧಿಸಿದಂತೆ ವಿವಿಧ ಉಲ್ಲೇಖಗಳನ್ನು ನೀಡುವ ಮೂಲಕ ಅರ್ಥವಿವರಣೆಯನ್ನು ಪುಷ್ಟೀಕರಿಸಬೇಕು ಮತ್ತು ಪರ್ಯಾಯ ವಿವರಣೆಗಳನ್ನು ಪರಿಗಣಿಸಬೇಕು ಹಾಗೂ ದತ್ತಾಂಶಗಳಲ್ಲಿರುವ ಸೂಕ್ಷ್ಮತೆಗಳನ್ನು (nuances) ಅನ್ವೇಷಿಸಬೇಕು. ದತ್ತಾಂಶಗಳಲ್ಲಿ ಸಾಮ್ಯತೆ ಮತ್ತು ವ್ಯತ್ಯಾಸಗಳಿವೆಯೇ ಅಥವಾ ವಿರೋಧಾಭಾಸಗಳಿವೆಯೇ ಎಂಬುದನ್ನು ಪರಿಶೀಲಿಸಬೇಕು. ಅರ್ಥವಿವರಣೆಯನ್ನು ನೀಡುವಾಗ ಭಾಷೆಯು ಸರಳವಾಗಿದ್ದು, ಎಲ್ಲರ ಗ್ರಹಿಕೆಗೆ ನಿಲುಕುವಂತಿರಬೇಕು. ಅರ್ಥವಿವರಣೆಯಲ್ಲಿ ತಾಂತ್ರಿಕ ಪದಗಳಿದ್ದರೂ ಅವುಗಳ ಬಳಕೆ ವಿಶ್ಲೇಷಣೆಯ ಅರ್ಥೈಸುವಿಕೆಗೆ ಭಂಗ ತರುವಂತಿರಬಾರದು.

**ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳನ್ನು ಜೊತೆಗೂಡಿಸುವುದು:** ಪರಿಮಾಣಾತ್ಮಕ ದತ್ತಾಂಶಗಳು ಮತ್ತು ಗುಣಾತ್ಮಕ ದತ್ತಾಂಶಗಳಲ್ಲಿ ದೊರೆತ ಫಲಿತಗಳನ್ನು ಪರಸ್ಪರ ಹೋಲಿಸಬೇಕು. ಎರಡೂ ಫಲಿತಗಳು ಕೇಂದ್ರೀಕರಿಸುತ್ತಿವೆಯೇ, ವಿಕೇಂದ್ರೀಕರಿಸುತ್ತಿವೆಯೇ ಅಥವಾ ಒಂದಕ್ಕೊಂದು ಪೂರಕವಾಗಿವೆಯೇ? ಎಂಬುದನ್ನು ಕಂಡುಕೊಳ್ಳಬೇಕು.

**ಚಟುವಟಿಕೆ:** ಒಂದು ಗ್ರಾಮದಲ್ಲಿ ಕೃಷಿಯು ಪ್ರಧಾನ ಕಸುಬಾಗಿದ್ದು, ಅಲ್ಲಿರುವ ಶಾಲೆಯ ಮಕ್ಕಳು ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಕಂಡುಬಂದಿದೆ. ಶಿಕ್ಷಕರೊಬ್ಬರು ತಮ್ಮ ಶಾಲೆಯ ಎಷ್ಟು ಮಕ್ಕಳು ಯಾವ ಯಾವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ಮಾಹಿತಿಯನ್ನು ಯಾವ ವಿಧದ ನಕ್ಷೆಯಲ್ಲಿ ಪ್ರತಿನಿಧಿಸಲು ಇಚ್ಛಿಸುತ್ತೀರಿ? ಏಕೆ? ಈ ರೀತಿಯ ಮಾಹಿತಿ ಸಂಗ್ರಹಣೆಯಿಂದ ಶಿಕ್ಷಕರಿಗೆ/ಮುಖ್ಯಶಿಕ್ಷಕರಿಗಾಗುವ ಉಪಯೋಗವೇನು?

| ಚಟುವಟಿಕೆ | ವಿದ್ಯಾರ್ಥಿಗಳ ಸಂಖ್ಯೆ |
|---|---|
| ಹತ್ತಿ ಬಿತ್ತುವುದು | 25 |
| ಹೊಗೆಸೊಪ್ಪು ಕಟ್ಟುವುದು | 30 |
| ಕಳೆ ಕೀಳುವುದು | 32 |
| ಶುಂಠಿ ತೆಗೆಯುವುದು | 13 |
| ಚೆಂಡು ಹೂವು ಬಿಡಿಸುವುದು | 20 |

**ದತ್ತಾಂಶಗಳ ವಿಶ್ಲೇಷಣೆಯಲ್ಲಿ ಕೆಲವು ಸಾಮಾನ್ಯ ಪರಿಗಣನೆಗಳು:**

- ಸಂಗ್ರಹಿಸಿದ ದತ್ತಾಂಶಗಳು ಸಮಂಜಸವಾಗಿವೆಯೇ ಮತ್ತು ವಿಶ್ವಾಸಾರ್ಹವಾಗಿವೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು.
- ದೊರೆತಿರುವ ಫಲಿತಗಳು ಸಂಗ್ರಹಿಸಿದ ದತ್ತಾಂಶಗಳನ್ನು ನಿಖರವಾಗಿ ಪ್ರತಿನಿಧಿಸುತ್ತಿವೆಯೇ ಎಂದು ಪರಿಶೀಲಿಸಬೇಕು.
- ಪ್ರತಿಸ್ಪಂದಕರ ಗೌಪ್ಯತೆಯನ್ನು ಕಾಪಾಡಬೇಕು. ಅವರ ವಿವರಗಳನ್ನು ಯಾವುದೇ ಕಾರಣಕ್ಕೂ ಬಹಿರಂಗಪಡಿಸಬಾರದು.
- ದತ್ತಾಂಶಗಳ ವಿಶ್ಲೇಷಣೆಯನ್ನು ನೈತಿಕ ಮಾರ್ಗಸೂಚಿಗಳನ್ವಯ ಮಾಡಬೇಕು.
- ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥವಿವರಣೆಗಳ ಸಮಂಜಸತೆಯನ್ನು ಪರೀಕ್ಷಿಸಲು ಸಹೋದ್ಯೋಗಿಗಳ ಮತ್ತು ವಿಷಯತಜ್ಞರ ಸಹಕಾರವನ್ನು ಪಡೆದುಕೊಳ್ಳಬೇಕು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮವಾಗಿ ಅನುಸರಿಸಿದಾಗ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥವಿವರಣೆ ಪರಿಣಾಮಕಾರಿಯಾಗಿ ಕೈಗೂಡುತ್ತದೆ ಮತ್ತು ಫಲಿತಗಳು ಹಾಗೂ ಒಳನೋಟಗಳು ಮತ್ತು ನಿಹಿತಾರ್ಥಗಳು ದತ್ತಾಂಶಗಳಿಗನುಗುಣವಾಗಿ ದೊರೆಯುತ್ತವೆ.

## 4.5 ದತ್ತಾಂಶಗಳ ಸಂಗ್ರಹಣೆಯಲ್ಲಿ ತಂತ್ರಜ್ಞಾನದ ಬಳಕೆ:

ಇತ್ತೀಚಿನ ದಿನಗಳಲ್ಲಿ ದತ್ತಾಂಶಗಳನ್ನು ಸಂಗ್ರಹಿಸುವಾಗ ಮತ್ತು ವಿಶ್ಲೇಷಿಸುವಾಗ ತಂತ್ರಜ್ಞಾನವು ಹಲವು ರೀತಿಗಳಲ್ಲಿ ನೆರವಾಗುತ್ತಿವೆ. ಅಲ್ಲದೇ ದತ್ತಾಂಶಗಳನ್ನು ತ್ವರಿತವಾಗಿ ಮತ್ತು ನಿಖರವಾಗಿ ಸಂಗ್ರಹಿಸಲು ತಂತ್ರಜ್ಞಾನವು ಸಹಾಯ ಮಾಡುತ್ತವೆ.

ದತ್ತಾಂಶಗಳನ್ನು ಪ್ರಶ್ನಾವಳಿಗಳ ಮೂಲಕ ಆನ್‌ಲೈನ್‌ನಲ್ಲಿ ಸಂಗ್ರಹಿಸುವಾಗ ನಮಗೆ ಸಹಾಯ ಮಾಡುವ ಸಾಧನಗಳೆಂದರೆ, ಫಾರ್ಮ್‌ಪ್ಲಸ್, ಟೈಪ್‌ಫಾರ್ಮ್, ಗೂಗಲ್ ಫಾರ್ಮ್, ಸರ್ವೆಮಂಕಿ, ಕ್ವಾಲ್‌ಟ್ರಿಕ್ಸ್ ಮುಂತಾದುವು. ಇವುಗಳಲ್ಲಿ ಪ್ರತಿಯೊಂದಕ್ಕೂ ತಮ್ಮದೇ ಆದ ವಿಶೇಷತೆಯಿದ್ದು ಇವುಗಳಲ್ಲಿ ಪ್ರಶ್ನೆಗಳನ್ನು ರಚಿಸುವುದು ಮತ್ತು ಅದನ್ನು ಪ್ರತಿಸ್ಪಂದನಕಾರರಿಗೆ ನೀಡುವುದು ಬಹು ಸುಲಭವಾಗಿದೆ. ಅಲ್ಲದೇ ಪ್ರತಿಸ್ಪಂದನಕಾರರು ತಮ್ಮ ಪ್ರತಿಕ್ರಿಯೆಗಳನ್ನು ನೀಡಿ, ಫಾರ್ಮ್‌ನ್ನು ಸಲ್ಲಿಸಿದ ಕೂಡಲೇ ದತ್ತಾಂಶಗಳು ಒಂದೆಡೆ ಸಂಗ್ರಹವಾಗುತ್ತವೆ. ಯಾವುದೇ ಮಾಹಿತಿ ಬಿಟ್ಟುಹೋಗುವ ಸಾಧ್ಯತೆ ಇರುವುದಿಲ್ಲ. (ಅಂತರ್ಜಾಲ ಸಂಪರ್ಕ ಸಮರ್ಪಕವಾಗಿರಬೇಕಾಗುತ್ತದೆ.) ಈ ಸಾಧನಗಳ ಜೊತೆಗೆ ಮೊಬೈಲ್ ಆಪ್‌ಗಳ ಮೂಲಕ ಇ–ಮೇಲ್‌ಗಳ ಮೂಲಕವೂ ದತ್ತಾಂಶಗಳನ್ನು ಸಂಗ್ರಹಿಸಬಹುದು. ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಅಧಿಕೃತ ಜಾಲತಾಣಗಳನ್ನು ವೀಕ್ಷಿಸಬಹುದು.

ಗೂಗಲ್ ಶೀಟ್ ಮತ್ತು ಎಕ್ಸೆಲ್ ಶೀಟ್‌ಗಳು ಸಂಖ್ಯಾಶಾಸ್ತ್ರೀಯ ತಂತ್ರಾಂಶಗಳಲ್ಲದಿದ್ದರೂ ಸಹ ಹಲವಾರು ಅಧ್ಯಯನಕಾರರಿಂದ ಬಳಸಲ್ಪಡುತ್ತಿರುವ ಜನಪ್ರಿಯ ತಂತ್ರಾಂಶಗಳಾಗಿವೆ. ಇವು ಬಳಕೆದಾರ–ಸ್ನೇಹಿ ತಂತ್ರಾಂಶಗಳಾಗಿದ್ದು, ಅಪಾರ ಪ್ರಮಾಣದ ದತ್ತಾಂಶವನ್ನು ಸಂಕ್ಷಿಪ್ತ ರೂಪದಲ್ಲಿ ಆರಿಸಿ (extract) ತೆಗೆಯುತ್ತವೆ. ಪಿವೊಟ್ ಕೋಷ್ಟಕಗಳನ್ನು (Pivot table) ಸೃಜಿಸುವುದರ ಮೂಲಕ ದತ್ತಾಂಶಗಳನ್ನು ನಮಗೆ ಬೇಕಾದಂತೆ ವ್ಯವಸ್ಥಿತವಾಗಿ ಜೋಡಿಸಿಕೊಂಡು ವಿಶ್ಲೇಷಿಸಬಹುದು. ಫಾರ್ಮ್‌ಪ್ಲಸ್ ತಂತ್ರಾಂಶದಲ್ಲಿರುವ ಫಾರ್ಮ್ ಅನಲಿಟಿಕ್ಸ್ ಡ್ಯಾಷ್‌ಬೋರ್ಡ್ ಸಹಾಯದಿಂದಲೂ ಸಹ ದತ್ತಾಂಶಗಳನ್ನು ವಿಶ್ಲೇಷಿಸಬಹುದು.

**ಚಟುವಟಿಕೆ:**

**ಪ್ರಾತ್ಯಕ್ಷಿಕೆ:** ತರಬೇತಿಯಲ್ಲಿ ಒಂದು ಪ್ರಶ್ನಾವಳಿಯನ್ನು ರಚಿಸಿ, ಗೂಗಲ್ ಫಾರಂ ಮೂಲಕ ಪ್ರಶ್ನಾವಳಿಯನ್ನು ಎಲ್ಲ ಶಿಬಿರಾರ್ಥಿಗಳಿಗೆ ಕಳುಹಿಸಿ, ಮಾಹಿತಿ ಸಂಗ್ರಹಣೆ ಮಾಡಿ, ಅದನ್ನು ಗೂಗಲ್ ಶೀಟ್ ಮೂಲಕ ವಿಶ್ಲೇಷಿಸಿ ತೋರಿಸುವುದು.

- ಸರ್ವೆಮಂಕಿ ತಂತ್ರಾಂಶವೂ ಸಹ ಹಲವು ದತ್ತಾಂಶ ವಿಶ್ಲೇಷಣಾ ತಂತ್ರಗಳನ್ನು ಹೊಂದಿದ್ದು, ಕಚ್ಚಾ ದತ್ತಾಂಶಗಳನ್ನು ಸುಲಭವಾಗಿ ಗ್ರಹಿಸಬಲ್ಲ ನಮೂನೆಯಾಗಿ ಪರಿವರ್ತಿಸುತ್ತದೆ. ಸ್ವಯಂಚಾಲಿತ ಚಾರ್ಟ್‌ಗಳು ಮತ್ತು ನಕ್ಷೆಗಳು ದತ್ತಾಂಶಗಳನ್ನು ಆಕರ್ಷಕವನ್ನಾಗಿಸುತ್ತವೆ. ಗುಣಾತ್ಮಕ ದತ್ತಾಂಶಗಳನ್ನು ಪರಿಮಾಣಾತ್ಮಕ ದತ್ತಾಂಶಗಳನ್ನಾಗಿ

ಪರಿವರ್ತಿಸುವ ಸೌಕರ್ಯವನ್ನೂ ಇದು ಒದಗಿಸುತ್ತದೆ. ವರ್ಡ್ ಕ್ಲೌಡ್‌ಗಳ ಮೂಲಕ ಮುಕ್ತ ಪ್ರತಿಕ್ರಿಯೆಗಳ ದತ್ತಾಂಶಗಳನ್ನು ವಿಶ್ಲೇಷಿಸಲು ಸಹಾಯ ಮಾಡುತ್ತವೆ. ಅಲ್ಲದೇ ಅತಿ ಶೀಘ್ರವಾಗಿ ವರದಿಯನ್ನೂ ಒದಗಿಸುತ್ತದೆ. ಕ್ರಾಸ್ ಟ್ಯಾಬ್ಯುಲೇಷನ್, ಕಂಬೈನಿಂಗ್ ಫಿಲ್ಟರ್ಸ್, ಸ್ಯಾಂಪಲ್ ಸೈಜ್ ಕ್ಯಾಲ್ಕುಲೇಟರ್, ಬೆಂಚ್‌ಮಾರ್ಕಿಂಗ್ ಮುಂತಾದ ಆಯ್ಕೆಗಳಿದ್ದು ನಮಗೆ ಬೇಕಾದಂತೆ ದತ್ತಾಂಶಗಳನ್ನು ವಿಶ್ಲೇಷಿಸಬಹುದಾಗಿದೆ.

➔ ಸಂಖ್ಯಾಶಾಸ್ತ್ರೀಯ ತಂತ್ರಾಂಶಗಳು: SPSS, SAS, R, STATA ಮುಂತಾದ ತಂತ್ರಾಂಶಗಳು ದತ್ತಾಂಶಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಲು ಸಹಾಯ ಮಾಡುತ್ತವೆ. ಎಂದರೆ, ಟಿ–ಪರೀಕ್ಷೆ, ಕೈ–ವರ್ಗ ಪರೀಕ್ಷೆ ಇವುಗಳನ್ನು ಕೈಗೊಳ್ಳಲು ನೆರವಾಗುತ್ತವೆ. ಇವುಗಳನ್ನು ಸಾಮಾನ್ಯವಾಗಿ ಬಹುದೊಡ್ಡ ದತ್ತಾಂಶಗಳ ಅಧ್ಯಯನ ಅಥವಾ ಸಂಶೋಧನೆ ಮಾಡುವಾಗ ಉಪಯೋಗಿಸಲಾಗುತ್ತದೆ.

➔ ಪೈಥಾನ್ ತಂತ್ರಾಂಶವೂ ಸಹ ದತ್ತಾಂಶಗಳನ್ನು ವಿಶ್ಲೇಷಿಸಲು ಇರುವ ಜನಪ್ರಿಯ ತಂತ್ರಾಂಶವಾಗಿದೆ. ಇದರಲ್ಲಿ Numpy, Panda, Scipy ಎಂಬ ಲೈಬ್ರರಿಗಳಿದ್ದು, ಸಂಕೀರ್ಣ ಮತ್ತು ವಿಶಾಲ ವ್ಯಾಪ್ತಿಯ ದತ್ತಾಂಶಗಳನ್ನು ವಿಶ್ಲೇಷಣೆ ಮಾಡುವಾಗ ನಮ್ಯತೆಯನ್ನೂ, ಸೂಕ್ತ ಪ್ರಮಾಣೀಕರಣವನ್ನೂ (scalability) ಒದಗಿಸಿ ದತ್ತಾಂಶಗಳ ವಿಶ್ಲೇಷಣೆಯನ್ನು ಸುಲಭಗೊಳಿಸುತ್ತದೆ.

➔ ಇಷ್ಟೇ ಅಲ್ಲದೇ ದತ್ತಾಂಶ ದೃಶ್ಯೀಕರಣ ಸಾಧನಗಳಾದ (Data Visualization Tools) ಟ್ಯಾಬ್ಲೂ, ಪವರ್ ಬಿಐ ಇವುಗಳು ಅತ್ಯುತ್ತಮ ಚಾರ್ಟ್‌ಗಳು, ನಕ್ಷೆಗಳನ್ನು ಸೃಜಿಸಲು ಸಹಾಯ ಮಾಡಿದರೆ, ಪಠ್ಯ ವಿಶ್ಲೇಷಣಾ ಸಾಧನಗಳಾದ (Text Analysis Tools) NVivo ಮತ್ತು NLTK ಗಳು ಪಠ್ಯ ರೂಪದಲ್ಲಿರುವ ವಿವರಣಾತ್ಮಕ ಅಂಶಗಳನ್ನು ವಿಶ್ಲೇಷಣೆ ಮಾಡಲು ಸಹಾಯಕವಾಗಿವೆ. ಇಷ್ಟೇ ಅಲ್ಲದೇ ಡೇಟಾಬೇಸ್ ನಿರ್ವಹಣಾ ವ್ಯವಸ್ಥೆಗಳು ದತ್ತಾಂಶಗಳನ್ನು ಸುವ್ಯವಸ್ಥಿತವಾಗಿ ಜೋಡಿಸಬಲ್ಲವು ಮತ್ತು ಅಷ್ಟೇ ಪರಿಣಾಮಕಾರಿಯಾಗಿ ವಿಶ್ಲೇಷಿಸಬಲ್ಲವು.

ಒಟ್ಟಾರೆಯಾಗಿ ಹೇಳುವುದಾದರೆ, ಇತ್ತೀಚಿನ ದಿನಗಳಲ್ಲಿ ದತ್ತಾಂಶಗಳ ವಿಶ್ಲೇಷಣೆಯನ್ನು ನಿರ್ವಹಿಸಲು ಕೃತಕ ಬುದ್ಧಿಮತ್ತೆಯೂ ಸೇರಿದಂತೆ ಮೇಲೆ ಚರ್ಚಿಸಿದ ಹಲವು ತಂತ್ರಾಂಶಗಳು ಸಿದ್ಧವಾಗಿವೆ. ಸಮೀಕ್ಷೆಯ ವಿಧ ಮತ್ತು ಮಾದರಿ ನಮೂನೆಯ ವ್ಯಾಪ್ತಿ ಹಾಗೂ ದತ್ತಾಂಶಗಳ ಸಂಕೀರ್ಣತೆಯನ್ನು ಗಮನದಲ್ಲಿಟ್ಟುಕೊಂಡು ನಮಗೆ ಬೇಕಾದ ತಂತ್ರಾಂಶವನ್ನು ಬಳಸಿಕೊಂಡು ದತ್ತಾಂಶಗಳ ವಿಶ್ಲೇಷಣೆಯನ್ನು ಯಶಸ್ವಿಯಾಗಿ ಹಾಗೂ ಪರಿಣಾಮಕಾರಿಯಾಗಿ ಕೈಗೊಳ್ಳಬಹುದಾಗಿದೆ. ಇದರಿಂದ ಸಮೀಕ್ಷೆಯ ಫಲಿತಗಳಲ್ಲಿ ನಿಖರತೆಯನ್ನು ಕಾಣಬಹುದಾಗಿರುತ್ತದೆ. ಅಲ್ಲದೇ ಪೂರ್ವ ಮಾಹಿತಿಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ.

**ಚಟುವಟಿಕೆ:** (https://www.surveymonkey.com/mp/analyze/) ಈ ವೆಬ್‌ಸೈಟ್‌ಗೆ ಭೇಟಿ ನೀಡಿ, ವಿವಿಧ ಆಯ್ಕೆಗಳನ್ನು ಅನ್ವೇಷಿಸಿ.


ಈ ಜಾಲತಾಣಕ್ಕೆ ಭೇಟಿ ನೀಡಿ ಮತ್ತು ವಿವಿಧ ಸಂಖ್ಯಾಶಾಸ್ತ್ರೀಯ ದತ್ತಾಂಶಗಳ ವಿಶ್ಲೇಷಣೆಯನ್ನು ಹೇಗೆ ಮಾಡುತ್ತಾರೆ ಎಂಬ ವಿವರಗಳನ್ನು ಕಲೆಹಾಕಿ. (https://en.wikipedia.org/wiki/SAS_(software)) https://en.wikipedia.org/wiki/SPSS

**ನೀವೇ ಮಾಡಿ**: ಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆಯನ್ನು ತಿಳಿಯಲು ನಿವ್ವಳ ದಾಖಲಾತಿ ಅನುಪಾತವನ್ನು (Net Enrolment ratio/NER) ಬಳಸುವುದು ನಿಮಗೆ ತಿಳಿದಿದೆ.

NER = (ಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿರುವ ಒಟ್ಟು ಮಕ್ಕಳ ಸಂಖ್ಯೆ)/(ಪ್ರಾಥಮಿಕ ಶಾಲೆಗಳಿಗೆ ದಾಖಲಾಗಬೇಕಾದ ಆ ವಯಸ್ಸಿನ ಮಕ್ಕಳ ಸಂಖ್ಯೆ ) x 100

ಒಂದು ತಾಲ್ಲೂಕಿನಲ್ಲಿ 1ನೇ ತರಗತಿಗೆ 5850 ಮಕ್ಕಳು ದಾಖಲಾಗಿದ್ದಾರೆ. ಅದೇ ತಾಲ್ಲೂಕಿನಲ್ಲಿ 6–7 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ 6850 ಇದೆ. ಹಾಗಾದರೆ, ನಿವ್ವಳ ದಾಖಲಾತಿ ಅನುಪಾತವನ್ನು ಲೆಕ್ಕಾಚಾರ ಮಾಡಿ. ಈ ದತ್ತಾಂಶವನ್ನು ನೀವು ಹೇಗೆ ವಿಶ್ಲೇಷಿಸುವಿರಿ? ಶಿಕ್ಷಣದ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ NER ತೃಪ್ತಿಕರವಾಗಿದೆಯೇ? ನಿಮ್ಮ ಅಭಿಪ್ರಾಯಗಳನ್ನು ಚರ್ಚಿಸಿ

# ಅಧ್ಯಾಯ 5 ಶೈಕ್ಷಣಿಕ ಸಮೀಕ್ಷೆಯ ಅನ್ವಯಗಳು



## 5.1 ಸಮೀಕ್ಷೆಗಳನ್ನು ಕೈಗೊಳ್ಳಬಹುದಾದ ಕ್ಷೇತ್ರಗಳು:

ಶೈಕ್ಷಣಿಕ ಸಮೀಕ್ಷೆಗಳನ್ನು ಮಕ್ಕಳ ಕಲಿಕೆಯನ್ನು ಸುಧಾರಿಸುವುದಕ್ಕೆ ಹಾಗೂ ಕಲಿಕೆಯ ಫಲಗಳ ಸಾಧನೆಗೆ ಮಾತ್ರವಲ್ಲದೇ ಒಂದು ಶಾಲೆಯ ಭೌತಿಕ ಸ್ಥಿತಿಗತಿಗಳು, ಶಿಕ್ಷಕರ ಲಭ್ಯತೆ, ಸ್ಥಳೀಯವಾಗಿ ದೊರೆಯುವ ಸಂಪನ್ಮೂಲಗಳು, ಶಾಲೆ ಇರುವ ಸ್ಥಳದ ಮಾಹಿತಿ ಮುಂತಾದುವುಗಳನ್ನು ಸಂಗ್ರಹಿಸಲೂ ಕೈಗೊಳ್ಳಬಹುದು. ಜೊತೆಗೆ, ಶಾಲೆಯಲ್ಲಿ ಎಷ್ಟು ಮಕ್ಕಳು ಮೊದಲ ತಲೆಮಾರಿನ ಮಕ್ಕಳಾಗಿದ್ದಾರೆ? ಅವರ ಆರ್ಥಿಕ ಪರಿಸ್ಥಿತಿ ಹೇಗಿದೆ? ಎಷ್ಟು ಮನೆಗಳಲ್ಲಿ 2 ಕ್ಕಿಂತ ಹೆಚ್ಚು ಮಕ್ಕಳಿದ್ದಾರೆ? ಇದರಿಂದ ಮಕ್ಕಳ ಕಲಿಕೆಯಲ್ಲಿ ಆಗುತ್ತಿರುವ ಪರಿಣಾಮಗಳೇನು? ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು ಶಾಲಾಹಂತದಿಂದ ರಾಜ್ಯಹಂತದವರೆಗೆ ಹೇಗೆ ಅನುಷ್ಠಾನಗೊಳ್ಳುತ್ತಿದೆ? ಯೋಜನೆಗಳ ಪರಿಣಾಮಗಳೇನು? ಹೀಗೆ ಹಲವು ಕ್ಷೇತ್ರಗಳಲ್ಲಿ ಸಮೀಕ್ಷೆಗಳನ್ನು ಕೈಗೊಳ್ಳಬಹುದು.

ಕೆಳಗಿನ ಸನ್ನಿವೇಶಗಳನ್ನು ಗಮನಿಸಿ.

- ಜುಲೈ ಮತ್ತು ಮಾರ್ಚ್ ತಿಂಗಳಿನಲ್ಲಿ ಮಕ್ಕಳು ತರಗತಿಗೆ ಹೆಚ್ಚು ಗೈರುಹಾಜರಾಗುತ್ತಿದ್ದಾರೆ.
- ಕೆಲವು ಮಕ್ಕಳು ಶಾಲೆಗೆ ವಾರದಲ್ಲಿ 3 ದಿನ ತಡವಾಗಿ ಬರುತ್ತಿದ್ದಾರೆ.
- ಕೆಲವು ಮಕ್ಕಳ ಆರೋಗ್ಯ ಮತ್ತು ನೈರ್ಮಲ್ಯ ಶೋಚನೀಯ ಸ್ಥಿತಿಯಲ್ಲಿದೆ.
- ಕೆಲವು ಹೆಣ್ಣುಮಕ್ಕಳು 9 ಮತ್ತು 10ನೇ ತರಗತಿಗೆ ಬಂದಾಗ ಖಿನ್ನತೆಗೆ ಒಳಗಾಗುತ್ತಿದ್ದಾರೆ.
- ಎಸ್. ಎಸ್. ಎಲ್. ಸಿ. ಫಲಿತಾಂಶದಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ತಾಲ್ಲೂಕು ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ.
- ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಪೋಷಕರ ಪಾಲ್ಗೊಳ್ಳುವಿಕೆಯನ್ನು ದೃಢಪಡಿಸಿಕೊಳ್ಳಬೇಕಿದೆ.
- ಸಮಾಲೋಚನಾ ಸಭೆಗಳಲ್ಲಿ ಚರ್ಚಿತ ಅಂಶಗಳನ್ನು ಶಿಕ್ಷಕರು ತರಗತಿಯಲ್ಲಿ ಅನುಷ್ಠಾನಗೊಳಿಸುತ್ತಿದ್ದಾರೆಯೇ ಎಂದು ತಿಳಿದುಕೊಳ್ಳಬೇಕಾಗಿದೆ.
- ಜಿಲ್ಲಾಮಟ್ಟದಲ್ಲಿ, 10ನೇ ತರಗತಿಗೆ ದಾಖಲಾಗುವ ಮಕ್ಕಳ ಸಂಖ್ಯೆಗೂ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ನೋಂದಾಯಿಸುವ ಮಕ್ಕಳ ಸಂಖ್ಯೆಗೂ ಬಹಳಷ್ಟು ವ್ಯತ್ಯಾಸವಿದೆ.
- ಒಂದು ಕ್ಲಸ್ಟರ್‌ನಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಹೊಂದಿರುವ ಮಕ್ಕಳ ಸಂಖ್ಯೆಯು ಕಡಿಮೆ ಇದೆ.
- ಅಟಲ್ ಟಿಂಕರಿಂಗ್ ಲ್ಯಾಬ್ ಸ್ಥಾಪನೆಗಾಗಿ ಶಾಲೆಗಳನ್ನು ಗುರುತಿಸಬೇಕಾಗಿದೆ.
- ಕ್ಷೀರಭಾಗ್ಯ ಮತ್ತು ರಾಗಿ ಮಾಲ್ಟ್ ನೀಡುವ ಯೋಜನೆಗಳ ಪರಿಣಾಮಕಾರಿತ್ವವನ್ನು ಗುರುತಿಸಬೇಕಾಗಿದೆ.
- ಇನ್ಸ್‌ಪೈರ್ ಅವಾರ್ಡ್ ಕಾರ್ಯಕ್ರಮಗಳು ಮಕ್ಕಳ ಹೊಸ ಸಂಶೋಧನೆಗಳಿಗೆ ಪ್ರೇರಣೆ ನೀಡಿದೆಯೇ ಎಂದು ತಿಳಿಯಬೇಕಾಗಿದೆ.

ಮೇಲಿನ ವಿವಿಧ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಶಾಲಾ ಹಂತದಲ್ಲಿ, ಜಿಲ್ಲಾ ಹಂತದಲ್ಲಿ, ರಾಜ್ಯ ಹಂತದಲ್ಲಿ ಸಮೀಕ್ಷೆಗಳನ್ನು ಕೈಗೊಳ್ಳಬಹುದಾದ ಸನ್ನಿವೇಶಗಳು ಯಾವುವು? ಚರ್ಚಿಸಿ.

**ಪರ್ಯಾಲೋಚಿಸಿ:** ಈ ಸನ್ನಿವೇಶಗಳಲ್ಲಿ ಸಮೀಕ್ಷೆಗಳನ್ನು ಕೈಗೊಳ್ಳುವುದರಿಂದ ಶಾಲಾ ಹಂತದಲ್ಲಿ, ತಾಲ್ಲೂಕು ಹಂತದಲ್ಲಿ, ಜಿಲ್ಲಾ ಹಂತದಲ್ಲಿ ಮತ್ತು ರಾಜ್ಯ ಹಂತದಲ್ಲಿ ಶೈಕ್ಷಣಿಕ ಆರೋಗ್ಯವನ್ನು ಹೇಗೆ ಕಾಯ್ದುಕೊಳ್ಳಬಹುದು? ಚರ್ಚಿಸಿ.

## 5.2 ಸಾಧನಾ ಸಮೀಕ್ಷೆಗಳ ಅನ್ವಯಗಳು

ಸಾಧನಾ ಪರೀಕ್ಷೆಗಳ ಫಲಿತಗಳು ವಿದ್ಯಾರ್ಥಿಗಳ ಕಲಿಕಾ ಕೊರತೆಗಳನ್ನು ಗುರುತಿಸಲು ಹಾಗೂ ಶೈಕ್ಷಣಿಕ ನೀತಿ–ನಿಯಮಗಳನ್ನು ರೂಪಿಸಲು ಅಗತ್ಯವಾದ ಒಳನೋಟವನ್ನು ಒದಗಿಸುತ್ತವೆ. ಇವು ನೈದಾನಿಕವಾದ ಪ್ರಗತಿಪತ್ರವಾಗಿದ್ದರೂ ಶಿಕ್ಷಕರ ವೃತ್ತಿಪರ ಸಾಮರ್ಥ್ಯಗಳನ್ನು ಬೆಳೆಸಲು ಹಾಗೂ ಶೈಕ್ಷಣಿಕವಾಗಿ ತೊಡಗಿಸಿಕೊಂಡಿರುವ ಅಧಿಕಾರಿಗಳಿಗೂ ಉಪಯುಕ್ತವಾಗುತ್ತವೆ. ಮೌಲ್ಯಾಂಕನವು ಬೋಧನಾ ಕಲಿಕಾ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವಾಗಿದೆ. ವಿದ್ಯಾರ್ಥಿಗಳ ಕಾರ್ಯನಿರ್ವಹಣೆಯು ಪರೋಕ್ಷವಾಗಿ ಶಿಕ್ಷಕರ ತರಗತಿ ಪ್ರಕ್ರಿಯೆಗಳ ಪರಿಣಾಮಕಾರತ್ವವನ್ನು ಪ್ರತಿನಿಧಿಸುತ್ತದೆ. ಇವುಗಳ ಫಲಿತವನ್ನು ಆಧರಿಸಿ ಶಿಕ್ಷಕರು ತಮ್ಮ ತರಗತಿ ಪ್ರಕ್ರಿಯೆಗಳನ್ನು ಸೂಕ್ತವಾಗಿ ವಿನ್ಯಾಸ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮೌಲ್ಯಾಂಕನ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ವಿವಿಧ ಹಂತಗಳಲ್ಲಿ ನಿರೂಪಿಸಲಾಗುತ್ತದೆ.

- ➔ **ಆರಂಭಿಕ ಹಂತಕ್ಕಿಂತಲೂ ಕೆಳಗೆ ಇರುವವರು:** ಕಲಿಕೆಯ ಆರಂಭಿಕ ಹಂತದಲ್ಲಿದ್ದು ಕನಿಷ್ಠವಾಗಿ ನಿರೀಕ್ಷಿತ ಜ್ಞಾನ ಮತ್ತು ಕೌಶಲಗಳನ್ನು ಪಡೆಯದಿರುವ ಮಕ್ಕಳು. ಪ್ರತಿ ಹಂತದಲ್ಲಿಯೂ ಮಾರ್ಗದರ್ಶನ, ಪ್ರೋತ್ಸಾಹ ಅಗತ್ಯವಿರುವ ಮಕ್ಕಳು (Below Basic Level) ಮತ್ತು
- ➔ **ಆರಂಭಿಕ ಹಂತ: (Basic Level):** ಕನಿಷ್ಠ ಜ್ಞಾನ ಮತ್ತು ಕೌಶಲಗಳನ್ನು ಮಾತ್ರ ಪ್ರದರ್ಶಿಸುವ ಮಕ್ಕಳು:
- ➔ **ಜಾಣ ಮಕ್ಕಳು: (Proficient Level):** ಆರಂಭಿಕ ಹಂತ ಪಠ್ಯಕ್ರಮದ ನಿರೀಕ್ಷೆಯಂತೆ ಬಹುತೇಕ ಕಲಿಕಾ ಫಲಗಳು ಮತ್ತು ಕೌಶಲಗಳನ್ನು ಪಡೆದಿರುವ ಮಕ್ಕಳು.
- ➔ **ಅಸಾಧಾರಣ ಮಕ್ಕಳು: (Advanced Level):** ಕಲಿಕಾ ವಿಷಯಗಳನ್ನು ಪಠ್ಯಕ್ರಮ ಮೀರಿ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸುವ ಮಕ್ಕಳು

ಯಾವುದೇ ರಾಜ್ಯ ರಾಷ್ಟ್ರಮಟ್ಟದ ಸಮೀಕ್ಷೆಗಳು ಮೌಲ್ಯಾಂಕನಗಳ ವರದಿಯನ್ನು ವಿಶ್ಲೇಷಿಸಬೇಕು. ಇವುಗಳನ್ನು ಯಾವ ಆಧಾರದಲ್ಲಿ ರಚಿಸಲಾಗಿದೆ ಹಾಗೂ ಇದರಿಂದ ನಿರೀಕ್ಷೆಗಳೇನು ಎಂಬುದನ್ನು ಮನನ ಮಾಡಿಕೊಳ್ಳಬೇಕು. ಜ್ಞಾನ ಮತ್ತು ಕೌಶಲದಲ್ಲಿ ಆರಂಭಿಕ ಹಂತ, ಪ್ರೊಫಿಶಿಯಂಟ್ ಹಂತ ಮತ್ತು ಅಡ್ವಾನ್ಸ್ ಹಂತದಲ್ಲಿರುವ ಮಕ್ಕಳ ಶೇಕಡಾವಾರನ್ನು ತಮ್ಮ ಜಿಲ್ಲೆ, ಬ್ಲಾಕ್, ರಾಜ್ಯವಾರು ಗುರುತಿಸಬೇಕು. ಅಲ್ಲದೇ ಸಮೀಕ್ಷಾ ವರದಿಯಲ್ಲಿ ಪ್ರಶ್ನಾವಾರು ವಿದ್ಯಾರ್ಥಿಗಳ ಸಾಧನೆಯನ್ನು ನೀಡಲಾಗಿರುತ್ತದೆ. ಪ್ರತಿ ಪ್ರಶ್ನೆಯಲ್ಲಿ ವಿದ್ಯಾರ್ಥಿಗಳ ಸರಾಸರಿ ಸಾಧನೆಯನ್ನು ಗುರುತಿಸಬೇಕು. ಇವುಗಳನ್ನು ಆಧಾರವಾಗಿಟ್ಟುಕೊಂಡು ಶಿಕ್ಷಕರು ತಮ್ಮ ತರಗತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವ ವಿಷಯ ಯಾವ ಸಾಮರ್ಥ್ಯದಲ್ಲಿ ಕಡಿಮೆ ಸಾಧನೆ ಆಗಿದೆ ಎಂಬುದನ್ನು ಗುರುತಿಸಿ ಕಲಿಕೆಯನ್ನು ಉತ್ತಮಪಡಿಸಲು ಕ್ರಮವನ್ನು ಕೈಗೊಳ್ಳಬೇಕು. ಫಲಿತಾಂಶಗಳ ವಿಶ್ಲೇಷಣೆ ಮಾಡಿ, ಉತ್ತಮೀಕರಣಕ್ಕಾಗಿ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಮುಂದಿನ ಸಾಧನಾ ಸಮೀಕ್ಷೆಗಳಲ್ಲಿಯೂ ಅದೇ ಫಲಿತಾಂಶ ಪುನರಾವರ್ತನೆ ಆಗುವ ಸಾಧ್ಯತೆ ಇರುತ್ತದೆ. ಇದರಿಂದ ನಮ್ಮ ತರಗತಿ ಪ್ರಕ್ರಿಯೆಗಳು ಉತ್ತಮಗೊಂಡಿರುವ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ.

### ಗಮನಿಸಬೇಕಾದ ಅಂಶಗಳು

- ➔ ಶಾಲಾ ಪರೀಕ್ಷೆಗಳು ಮತ್ತು ಮೌಲ್ಯಮಾಪನದಲ್ಲಿ ಹೆಚ್ಚಿನ ಪ್ರಶ್ನೆಗಳನ್ನು ವಿಷಯಾಧಾರಿತವಾಗಿ ನೀಡಲಾಗುತ್ತದೆ. ಇದರ ಫಲಿತಾಂಶಗಳು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ವಿಷಯವನ್ನು ಗ್ರಹಿಸಿದ್ದಾರೆ ಎಂಬುದನ್ನು ಸೂಚಿಸುತ್ತದೆ.
- ➔ ಸಾಧನಾ ಸಮೀಕ್ಷೆಗಳಲ್ಲಿ ಪ್ರಶ್ನೆಗಳು ಕಲಿಕಾ ಫಲ/ಸಾಮರ್ಥ್ಯ ಆಧಾರಿತವಾಗಿರುತ್ತದೆ. ಇವು ವಿದ್ಯಾರ್ಥಿಗಳು ನಿರ್ದಿಷ್ಟ ಹಂತದಲ್ಲಿ ಪಡೆದಿರುವ ಜ್ಞಾನ/ಕೌಶಲಗಳನ್ನು ಸೂಚಿಸುತ್ತವೆ.
- ➔ ಶಾಲಾ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಅಂಕಗಳ ಮೂಲಕ ಮಾಪನ ಮಾಡಿ ನಂತರದಲ್ಲಿ ಅವುಗಳನ್ನು ಗ್ರೇಡ್‌ಗಳಾಗಿ ಪರಿವರ್ತಿಸಿ ಸೂಚಿಸಲಾಗುತ್ತದೆ. ಮೌಲ್ಯಾಂಕನ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಸಾಮರ್ಥ್ಯವನ್ನು ಗಳಿಸಿದ್ದಾರೆ ಅಥವಾ ಗಳಿಸಿಲ್ಲ ಎಂಬುದನ್ನು ಸೂಚಿಸಲಾಗುತ್ತದೆ.
- ➔ ಶಾಲಾ ಪರೀಕ್ಷೆಗಳು ನಿರ್ದಿಷ್ಟ ಸಮಯದಲ್ಲಿ ನಡೆಯುವ ಪರೀಕ್ಷೆಗಳಾಗಿರುತ್ತವೆ. ಆದರೆ ಮೌಲ್ಯಾಂಕನವನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ನಡೆಸಲಾಗುತ್ತದೆ.
- ➔ ಶಾಲಾ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳ ಸ್ಮರಣ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಆದರೆ, ಮೌಲ್ಯಾಂಕನ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ.

## ಅನುಷ್ಠಾನ:

- ➔ ಈ ರೀತಿಯ ವಿವಿಧ ಪ್ರಶ್ನೆಗಳನ್ನು ಶಿಕ್ಷಕರು ಅವಲೋಕನ ಮಾಡುವುದರಿಂದ ವಿವಿಧ ವಿಷಯಗಳನ್ನು ಕಲಿಸುವಾಗ ಒಂದು ಕಲಿಕಾಂಶಕ್ಕೆ ಪೂರಕವಾಗಿ ಯಾವೆಲ್ಲ ಅಂಶಗಳನ್ನು ಚರ್ಚಿಸಬಹುದು? ತರಗತಿ ಕಲಿಕೆಯನ್ನು ತರಗತಿಯ ಕೋಣೆಯ ಹೊರಗೂ ವಿಸ್ತರಿಸಲು ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು? ಕಲಿಕಾ ಫಲಗಳಿಂದ ಕಲಿಕಾ ಸಾಮರ್ಥ್ಯಗಳನ್ನು ಹೇಗೆ ಮೂಡಿಸಬಹುದು? ಎಂಬ ವಿಷಯಗಳನ್ನು ಗ್ರಹಿಸಬಹುದು ಹಾಗೂ ಇದಕ್ಕೆ ಸಂಬಂಧಿಸಿದ ಮಾರ್ಗದರ್ಶನವನ್ನು ನೀಡಬಹುದು.
- ➔ ಅನುಪಾಲನಾ ಅಧಿಕಾರಿಗಳು ತರಗತಿ ಪ್ರಕ್ರಿಯೆಗಳನ್ನು ಮತ್ತು ಶಿಕ್ಷಕರ ಘಟಕ ಯೋಜನೆ ಇತ್ಯಾದಿ ಶೈಕ್ಷಣಿಕ ದಾಖಲೆಗಳನ್ನು ಅವಲೋಕನ ಮಾಡಿದ ನಂತರ ಮೇಲೆ ತಿಳಿಸಿರುವಂತೆ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಬೋಧನೆ–ಕಲಿಕೆ ಮತ್ತು ಮೌಲ್ಯಮಾಪನದ ಅಂಶಗಳನ್ನು ವಿಷಯ ಗ್ರಹಿಕೆಯಿಂದ ಸಾಮರ್ಥ್ಯದ ಬೆಳವಣಿಗೆಯ ಕಡೆಗೆ ಬದಲಾಯಿಸಬೇಕಾಗಿದೆ. ನಾನು ಹೇಗೆ ಕಲಿಯುವುದು ಎಂಬುದನ್ನು ಕಲಿಕಾರ್ಥಿಗಳು ಅರ್ಥ ಮಾಡಿಕೊಳ್ಳಬೇಕು. ನಾನೇಕೆ ಕಲಿಯಬೇಕು? ನಾನು ಏನು ಕಲಿಯುತ್ತೇನೆ? ಎನ್ನುವುದಕ್ಕಿಂತ ಈ ಪರಿಕಲ್ಪನೆ ಅಥವಾ ಕಲ್ಪನೆಯನ್ನು ನಾನು ಹೇಗೆ ಬಳಸಲಿ? ಎಂಬುದು ಹೆಚ್ಚು ಮುಖ್ಯವಾಗಿದೆ. ಕಲಿಸುವವರು ಶೈಕ್ಷಣಿಕ ಸನ್ನಿವೇಶಗಳಲ್ಲಿ ಮಕ್ಕಳಲ್ಲಿ ಪೂರಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಇದರಿಂದ ಮಕ್ಕಳು ಶಾಲೆಯನ್ನು ತೊರೆದ ನಂತರವೂ ನಿಜಜೀವನದ ಸಂದರ್ಭಗಳಲ್ಲಿ ಕಲಿಕಾ ಸಾಮರ್ಥ್ಯಗಳನ್ನು ಬಳಸಬಹುದಾಗಿರುತ್ತದೆ.

**ಶಾಲಾ ಸಿದ್ಧಿ ಕಾರ್ಯಕ್ರಮ:** ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳು ಸೇರಿದಂತೆ ಎಲ್ಲಾ ಸರ್ಕಾರಿ ಶಾಲೆಗಳಿಗೆ 2021–22 ರಲ್ಲಿ ಶಿಕ್ಷಣ ಸಚಿವಾಲಯ (Ministry of Education) ಪರಿಚಯಿಸಿದ ಮೌಲ್ಯಮಾಪನ ಕಾರ್ಯಕ್ರಮವಾಗಿದೆ. ಆಯ್ದ 10% ಸರ್ಕಾರಿ ಶಾಲೆಗಳಲ್ಲಿ, ಬಾಹ್ಯ ಮೌಲ್ಯಮಾಪಕರ ತಂಡದಿಂದ ಸಮೀಕ್ಷಾ ವಿಧಾನದಲ್ಲಿ ಬಾಹ್ಯ ಮೌಲ್ಯಮಾಪನವನ್ನು ನಡೆಸಲಾಯಿತು. ಇದನ್ನು ರಾಜ್ಯ ಯೋಜನಾ ನಿರ್ದೇಶಕರು ಮತ್ತು ಏಖಕಿಂಂಅ ನ ಕಾರ್ಯನಿರ್ವಾಹಕ ನಿರ್ದೇಶಕರ ನಿರ್ದೇಶನಗಳೊಂದಿಗೆ ನಡೆಸಲಾಯಿತು.

## ಶಾಲಾ ಸಿದ್ಧಿ ಕಾರ್ಯಕ್ರಮದ ಉದ್ದೇಶಗಳು:

1. ಶಾಲೆಯ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಕ್ಷೇತ್ರಗಳನ್ನು ಗುರುತಿಸುವುದು.
2. ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಶಾಲೆಯನ್ನು ಬಲಪಡಿಸುವುದು.
3. ಶಾಲೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು ಮತ್ತು ಸೂಕ್ತ ವಾತಾವರಣ ಕಲ್ಪಿಸುವುದು. ಎಲ್ಲಾ ಮಧ್ಯಸ್ಥಗಾರರ ಭಾಗವಹಿಸುವಿಕೆಯನ್ನು ಉತ್ತಮಪಡಿಸುವುದು.
4. ಶಾಲೆಯ ಅಭಿವೃದ್ಧಿಯ ಮಟ್ಟವನ್ನು ತಿಳಿದುಕೊಳ್ಳುವುದು ಮತ್ತು ಹಂತ ಹಂತವಾಗಿ ಮಾರ್ಗದರ್ಶನ ನೀಡುವುದು.

## ಈ ಕಾರ್ಯಕ್ರಮದ ಏಳು ಕ್ಷೇತ್ರಗಳು ಈ ಕೆಳಗಿನಂತಿವೆ

1. ಶಾಲಾ ಭೌತಿಕ ವಾತಾವರಣ
2. ಬೋಧನೆ–ಕಲಿಕೆ ಮೌಲ್ಯಮಾಪನ
3. ಮಕ್ಕಳ ಸಾಧನೆ ಮತ್ತು ಅಭಿವೃದ್ಧಿ.
4. ಶಿಕ್ಷಕರ ಕೆಲಸದ ನಿರ್ವಹಣೆ ಮತ್ತು ವೃತ್ತಿಪರ ಕೆಲಸದ ನಿರ್ವಹಣೆ.
5. ಶಾಲಾ ನಾಯಕತ್ವ ಮತ್ತು ನಿರ್ವಹಣೆ.
6. ಶಿಕ್ಷಕರು ಮತ್ತು ಆರೋಗ್ಯ ಮತ್ತು ರಕ್ಷಣೆಯ ಒಳಗೊಳ್ಳುವಿಕೆ.
7. ಭಾಗೀದಾರರ ಸಹಕಾರ


ಒಟ್ಟಾರೆಯಾಗಿ ಶಾಲಾ ಸಿದ್ಧಿ ಕಾರ್ಯಕ್ರಮದಲ್ಲಿ ಸಮೀಕ್ಷೆಯ ಸಹಾಯದಿಂದ ಒಂದು ಶಾಲೆಯ ಸಮಗ್ರ ಮಾಹಿತಿ ದೊರೆಯಿತು. ಅಲ್ಲದೇ ಆ ಶಾಲೆಯ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅರಿವು ಮೂಡಿತು. ತಾಲ್ಲೂಕು/ಜಿಲ್ಲಾ/ರಾಜ್ಯ ಹಂತದಲ್ಲಿ ಮೂಲ ಸೌಲಭ್ಯಗಳ ಕೊರತೆ ಇರುವ ಶಾಲೆಗಳನ್ನು ಗುರುತಿಸುವುದು ಸುಲಭವಾಯಿತು. ಉತ್ತಮ ಶಾಲೆಗಳನ್ನು ಪ್ರೋತ್ಸಾಹಿಸಲು ಸಹಾಯವಾಯಿತು ಮತ್ತು ಶಾಲೆಗಳನ್ನು ಶ್ರೇಣೀಕರಣಗೊಳಿಸಲು ಸಾಧ್ಯವಾಯಿತು.


ಈ ರೀತಿ ಸಮೀಕ್ಷೆಗಳ ಅನ್ವಯವು ಶಾಲೆಗಳ ಸ್ಥಿತಿಗತಿಗಳನ್ನು ತಿಳಿಯಲು ಉತ್ತಮ ಸಾಧನವಾಗಿವೆ.

**ಚಟುವಟಿಕೆ:**

- ಶಾಲಾ ಸಿದ್ಧಿ ಕ್ಷೇತ್ರಗಳಲ್ಲಿ ಸೂಚಕಗಳನ್ನು ಗಮನಿಸಲು ಕೆಳಗಿನ ಜಾಲತಾಣಕ್ಕೆ ಭೇಟಿನೀಡಿ. https://shaalasiddhi.niepa.ac.in/pdf-framework-english.html
- ಯಾವುದಾದರೂ ಒಂದು ಕ್ಷೇತ್ರದಲ್ಲಿ ನಿಮ್ಮ/ನಿಮ್ಮ ತಾಲ್ಲೂಕಿನ/ನಿಮ್ಮ ಜಿಲ್ಲೆಯ ಒಂದು ಶಾಲೆಯನ್ನು ಕೊಟ್ಟಿರುವ ಸೂಚಕಗಳನ್ವಯ ಮೌಲ್ಯಮಾಪನ ಮಾಡಿ ವಿಶ್ಲೇಷಿಸಿ.
- ನೀವು ಶಾಲಾ ಸಿದ್ಧಿ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿದ್ದಲ್ಲಿ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ.
- ಸೂಚಕಗಳ ಆಧಾರದ ಮೇಲೆ ಶಾಲೆಗಳಲ್ಲಿ ಸುಧಾರಿಸಬಹುದಾದ ಅಂಶಗಳನ್ನು ಹೇಗೆ ಗುರುತಿಸಿಕೊಳ್ಳುವಿರಿ? ಈ ಪ್ರಕ್ರಿಯೆಯಿಂದ ಒಂದು ಉತ್ತಮ ಕ್ರಿಯಾಯೋಜನೆಯನ್ನು ರೂಪಿಸಬಹುದೇ? ಚರ್ಚಿಸಿ.

**ಉದಾಹರಣೆ 1:** ಕೋವಿಡ್ ಸಮಯದಲ್ಲಿ ರೇಡಿಯೋ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಕುರಿತು ಅಧ್ಯಯನದಲ್ಲಿ ಸಮೀಕ್ಷೆಯ ಸಹಾಯದಿಂದ ದತ್ತಾಂಶ ಸಂಗ್ರಹಣೆ ಮತ್ತು ದತ್ತಾಂಶಗಳನ್ನು ನಕ್ಷೆಯಲ್ಲಿ ಪ್ರತಿನಿಧಿಸಿರುವುದು.




**ಚಿಂತನಾಶೀಲ ಪ್ರಶ್ನೆ:** ಮೇಲೆ ಕೊಟ್ಟಿರುವ ಎರಡೂ ನಕ್ಷೆಗಳನ್ನು ಗಮನಿಸಿ. ಕನ್ನಡ ಮತ್ತು ಗಣಿತ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಗ್ರಹಿಕೆಯ ಸಾಮರ್ಥ್ಯವನ್ನು ನೀವು ಹೇಗೆ ಅರ್ಥೈಸುವಿರಿ? ಇದರ ಅನ್ವಯ ಮುಂದಿನ ರೇಡಿಯೋ ಕಾರ್ಯಕ್ರಮಗಳನ್ನು ರೂಪಿಸುವಾಗ ಯಾವ ಕ್ರಮಗಳನ್ನು ತೆಗೆದುಕೊಳ್ಳುವಿರಿ? ಚರ್ಚಿಸಿ.

**ಉದಾಹರಣೆ 2:** ಬುನಾದಿ ಸಾಕ್ಷರತೆ ಎಂದರೆ, ಒಂದು ಭಾಷೆಯನ್ನು ಓದುವ, ಬರೆಯುವ ಮತ್ತು ಸಂವಹನ ಮಾಡುವ ಸಾಮರ್ಥ್ಯವಿರುವುದು. ಬುನಾದಿ ಕಲಿಕೆಯ ಅಧ್ಯಯನದಲ್ಲಿ ಬುನಾದಿ ಸಾಕ್ಷರತೆಯನ್ನು ಈ ಕೆಳಕಂಡ ಉಪ–ಸಾಮರ್ಥ್ಯಗಳ ಆಧಾರದ ಮೇಲೆ ಪರೀಕ್ಷಿಸಲಾಯಿತು.

ಮೌಖಿಕ ಭಾಷಾ ಸಾಮರ್ಥ್ಯ, ಧ್ವನಿಲಿಪಿಯ (phonographical) ಅರಿವು, ಪದಗಳನ್ನು ಜೋರಾಗಿ ಓದುವುದು, ಅಕ್ಷರಗಳನ್ನು ವಿಸಂಕೇತಿಸುವುದು (ವಿವಿಧ ಅಕ್ಷರಗಳಿರುವ ಗ್ರಿಡ್‌ನಲ್ಲಿ ಅಕ್ಷರಗಳನ್ನು ಓದುವುದು), ಪದಗಳನ್ನು ವಿಸಂಕೇತಿಸುವುದು (ವಿವಿಧ ಅಕ್ಷರಗಳಿರುವ ಗ್ರಿಡ್‌ನಿಂದ ಪದಗಳನ್ನು ಓದುವುದು), ಅಸಂಬದ್ಧ ಪದಗಳನ್ನು ವಿಸಂಕೇತಿಸುವುದು, ಪಠ್ಯವನ್ನು ಓದುವುದು ಮತ್ತು ಸಂಬಂಧಿತ ಚಿತ್ರಗಳೊಂದಿಗೆ ಹೊಂದಿಸುವುದು, ಮೌಖಿಕ ನಿರರ್ಗಳತೆ ಮತ್ತು ಗ್ರಹಿಕೆಯ ಸಾಮರ್ಥ್ಯವನ್ನು ಪರೀಕ್ಷಿಸುವುದು.

ಮೇಲಿನ ಸಾಮರ್ಥ್ಯಗಳನ್ನು ಪರೀಕ್ಷಿಸಲು ಸೂಕ್ತವಾದ ಪ್ರಶ್ನೆಪತ್ರಿಕೆಯನ್ನು ತಯಾರಿಸಲಾಯಿತು. ಅದನ್ನು ಆಯ್ದ 113 ಶಾಲೆಗಳ 3 ನೇ ತರಗತಿಯ 1066 ಮಕ್ಕಳಿಗೆ ನೀಡಿ ಮೌಲ್ಯಾಂಕನ ಮಾಡಲಾಯಿತು

**ಚಟುವಟಿಕೆ:** ಇಂಗ್ಲಿಷ್ ವಿಷಯದ ವರದಿಯನ್ನು ಗಮನಿಸಿ. ವಿವಿಧ ವಿವರಕಗಳಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಾಧನೆಯನ್ನು ಹೋಲಿಸಿ. ಕೋಷ್ಟಕ ರೂಪದಲ್ಲಿ ಮತ್ತು ನಕ್ಷೆಯಲ್ಲಿ ಪ್ರತಿನಿಧಿಸಿರುವ ದತ್ತಾಂಶಗಳನ್ನು ವಿಶ್ಲೇಷಿಸಿ. ಹೆಚ್ಚಿನ ಮಾಹಿತಿಗಾಗಿ ಈ ಜಾಲತಾಣವನ್ನು ವೀಕ್ಷಿಸಿ: https://nipunbharat.education.gov.in/fls/fls.aspx

| Descriptors | State Average Achievement (%) | National Average Achievement (%) |
|---|---|---|
| Listens and comprehends four to five texts of varying lengths correctly | 86 | 85 |
| Correctly identifies at least one initial sound in grade level words | 97 | 95 |
| Correctly identifies at least one final sound in grade level words | 95 | 93 |
| Not able to identify the initial sound and final sound in any of the given grade level words | 03 | 04 |

ಶೈಕ್ಷಣಿಕ ಸಮೀಕ್ಷೆಗಳನ್ನು ಮಾಡುವುದರಿಂದ ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಪರಿಣಾಮಕಾರಿಯಾಗಿ ಸುಧಾರಿಸಬಹುದು. ತರಗತಿ ಶಿಕ್ಷಕರಿಗೆ ಮಕ್ಕಳು ಕಲಿಕೆಯ ಫಲಗಳನ್ನು ಸಾಧಿಸಿರುವರೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಇಂತಹ ಸಮೀಕ್ಷೆಗಳು ಅವಶ್ಯಕವಾಗಿವೆ.

## 5.3 ಸಮೀಕ್ಷೆಯ ವರದಿಯನ್ನು ತಯಾರಿಸುವುದು:

ಫಲಿತಾಂಶಗಳ ವಿಶ್ಲೇಷಣೆ ಮತ್ತು ವ್ಯಾಖ್ಯಾನದ ಆಧಾರದ ಮೇಲೆ, ಅಧ್ಯಯನಕಾರರು ವರದಿಯನ್ನು ಸಿದ್ಧಪಡಿಸುವರು. ಸಮೀಕ್ಷಾ ವಿಧಾನದ ಮೂಲಕ ಕೈಗೊಂಡ ಎಲ್ಲಾ ಹಂತಗಳಲ್ಲಿನ ಫಲಿತಗಳನ್ನು ಒಳಗೊಂಡಿರುತ್ತದೆ ಹಾಗೂ ಸಮೀಕ್ಷಾ ವಿಧಾನವನ್ನು ಕೈಗೊಳ್ಳುವಲ್ಲಿ ಅನುಸರಿಸಿರುವ ಹಂತಗಳೆಲ್ಲವನ್ನೂ ಒಳಗೊಂಡಂತೆ ವರದಿಯನ್ನು ತಯಾರಿಸಬೇಕು. ವರದಿಯಲ್ಲಿರಬೇಕಾದ ಅಂಶಗಳು:

1. ಸಮೀಕ್ಷೆಯ ಶೀರ್ಷಿಕೆ
2. ಮುನ್ನುಡಿ
3. ಸಂಕ್ಷೇಪಣಾ ಪದಗಳ ವಿಸ್ತೃತ ರೂಪಗಳು
4. ಪರಿವಿಡಿ
5. ಅರ್ಥ ಮತ್ತು ಉದ್ದೇಶ
6. ಉದ್ದೇಶಾಧರಿತ ಪ್ರಶ್ನೆಗಳ ವಿಶ್ಲೇಷಣೆ
7. ಸಂಬಂಧಿತ ಸಾಹಿತ್ಯಾವಲೋಕನ
8. ದತ್ತಾಂಶ ಸಂಗ್ರಹಣೆ
9. ದತ್ತಾಂಶ ವಿಶ್ಲೇಷಣೆ
10. ಸಮೀಕ್ಷಾ ಅಧ್ಯಯನದ ಫಲಿತಗಳು
11. ಅಧ್ಯಯನದ ಒಳನೋಟಗಳು
12. ಶೈಕ್ಷಣಿಕ ನಿಹಿತಾರ್ಥಗಳು
13. ಅಧ್ಯಯನದ ತೀರ್ಮಾನಗಳು
14. ಶಿಫಾರಸ್ಸುಗಳು– 1. ಯೋಜನಾ ತಯಾರಕರಿಗೆ, 2. ಫಲಾನುಭವಿಗಳಿಗೆ 3. ಇಲಾಖೆಗೆ 4 ಮುಂದಿನ ಅಧ್ಯಯನಕಾರರಿಗೆ
15. ಉಲ್ಲೇಖಗಳು ಮತ್ತು ಅನುಬಂಧಗಳು

## 5.4 ಸಮೀಕ್ಷೆಯ ಫಲಿತಾಂಶಗಳು:

ಸಂಶೋಧನೆಯನ್ನು ನಡೆಸುವಲ್ಲಿ ಸಮೀಕ್ಷೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ದತ್ತಾಂಶಗಳ ಫಲಿತಾಂಶಗಳನ್ನು ಕ್ರೋಢೀಕರಿಸಿ ಸಮೀಕ್ಷಾ ಅಧ್ಯಯನದ ಫಲಿತಗಳನ್ನು ನಿರ್ಧರಿಸಲಾಗುತ್ತದೆ. ಈ ಫಲಿತಗಳನ್ನು ಅನುಷ್ಠಾನ ಮಾಡಲು ಸಲಹೆಗಳನ್ನು ಯೋಜನಾ ತಯಾರಕರಿಗೆ, ಫಲಾನುಭವಿಗಳಿಗೆ ಮತ್ತು ಇಲಾಖೆಗೆ ನೀಡುವುದು ಮುಖ್ಯವಾಗುತ್ತದೆ. ಸಮೀಕ್ಷೆಯ ಗುರಿ-ಉದ್ದೇಶಗಳಿಗೆ ಅನುಗುಣವಾಗಿ ಪ್ರಶ್ನೆಗಳನ್ನು ರಚಿಸಿದ್ದರೆ ಅದಕ್ಕೆ ಪೂರಕವಾಗಿ ಫಲಿತಾಂಶಗಳನ್ನು ಪಡೆಯಬಹುದು. ಸಮೀಕ್ಷೆಯ ಫಲಿತಾಂಶಗಳು ಭವಿಷ್ಯದಲ್ಲಿ ಒಂದು ಪ್ರಮುಖ ದಾಖಲೆಯಾಗುತ್ತವೆ. ಸಮೀಕ್ಷೆಯ ಫಲಿತಾಂಶಗಳ ಪರಿಣಾಮಗಳು ಮುಂದೆ ಇದೇ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವಲ್ಲಿ ನಿರ್ಣಾಯಕವಾಗುತ್ತವೆ. ಸಮೀಕ್ಷೆಯ ಫಲಿತಗಳ ಆಧಾರದ ಮೇಲೆ ಸಂಶೋಧಕರು ಭಾಗೀದಾರರಿಗೆ ಶಿಫಾರಸ್ಸುಗಳನ್ನು ಮಾಡುವರು. ಸಮೀಕ್ಷೆಯ ಫಲಿತಾಂಶಗಳು ಸಮೀಕ್ಷೆ ಯಶಸ್ವಿಯಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತವೆ.

ಸಮೀಕ್ಷಾ ಅಧ್ಯಯನದಿಂದ ದೊರೆತ ಒಳನೋಟಗಳು ಆ ಸಮೀಕ್ಷೆಯ ಫಲಿತದ ಮೇಲೆ ಪ್ರಭಾವ ಬೀರುತ್ತವೆ. ಸಮೀಕ್ಷಾ ಅಧ್ಯಯನದಿಂದ ಪಡೆಯುವ ಶೈಕ್ಷಣಿಕ ನಿಹಿತಾರ್ಥಗಳಿಗೆ ಹೊಂದಿಕೊಂಡಂತೆ ಸಮೀಕ್ಷೆಯ ಫಲಿತಾಂಶ ರೂಪುಗೊಳ್ಳುತ್ತದೆ.

**ಚಟುವಟಿಕೆ:**

2021 ರಲ್ಲಿ ಯುನೆಸ್ಕೊ ಭಾರತದಲ್ಲಿ ನಡೆಸಿದ ಸಮೀಕ್ಷೆಯ ಫಲಿತಗಳನ್ನು ಕೆಳಗಿನ ವರದಿಯಲ್ಲಿ ಕೊಡಲಾಗಿದೆ. ಈ ವರದಿಯ ಫಲಿತಗಳು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ನಮ್ಮ ದೇಶದಲ್ಲಿ ಅನುಷ್ಠಾನಗೊಳಿಸಲು ಹೇಗೆ ಸಹಾಯಕವಾಗಿದೆ? ಎಂಬುದನ್ನು ಚರ್ಚಿಸಿ.

### ಭಾರತದಲ್ಲಿ ಯುನೆಸ್ಕೊ ನಡೆಸಿದ ಸಮೀಕ್ಷೆ:

ವಿಶ್ವ ಶಿಕ್ಷಕರ ದಿನಾಚರಣೆಯ (ಅಕ್ಟೋಬರ್ 5) ಪ್ರಯುಕ್ತ 2021 ರಲ್ಲಿ ಯುನೆಸ್ಕೊ (UNESCO) ಭಾರತದಲ್ಲಿ ಶಿಕ್ಷಣದ ಸ್ಥಿತಿಗತಿಗಳು ಎಂಬ ವಿಷಯದ ಬಗ್ಗೆ ವರದಿಯನ್ನು ನೀಡಿತು. ಈ ವರದಿಯ ಒಳನೋಟಗಳು ಮುಖ್ಯವಾಗಿ ನಿಯತಕಾಲಿಕ ಕಾರ್ಮಿಕ ಬಲ ಸಮೀಕ್ಷೆಯ (Periodic Labour Force Survey) ವಿಶ್ಲೇಷಣೆ ಮತ್ತು ಯುಡೈಸ್ (UDISE) ದತ್ತಾಂಶಗಳನ್ನು (2018–19) ಆಧರಿಸಿದ್ದವು. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನವನ್ನು ಬಲವರ್ಧಿಸುವ ನಿಟ್ಟಿನಲ್ಲಿ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ (SDG) ಶಿಕ್ಷಕರ ಕುರಿತಾದ ಗುರಿ 4C ಯನ್ನು ಸಾಕ್ಷೀಕರಿಸುವಲ್ಲಿ ಒಂದು ಉಲ್ಲೇಖವಾಗುವ ಗುರಿಯನ್ನು ಹೊಂದಿತ್ತು. ವರದಿಯಲ್ಲಿ ಕಂಡುಬಂದ ಅಂಶಗಳು:

#### ಶಿಕ್ಷಕರ ಕೊರತೆ:

- ದೇಶದಲ್ಲಿ ಸುಮಾರು 1.2 ಲಕ್ಷ ಏಕೋಪಾಧ್ಯಾಯ ಶಾಲೆಗಳಿದ್ದು, ಅವುಗಳಲ್ಲಿ ಅಗಾಧ ಪ್ರಮಾಣದ ಎಂದರೆ, 89% ಶಾಲೆಗಳು ಗ್ರಾಮೀಣ ಭಾಗದಲ್ಲಿವೆ. ಈಗಿರುವ ಕೊರತೆಯನ್ನು ನೀಗಿಸಲು, ಭಾರತ ದೇಶಕ್ಕೆ 11.16 ಲಕ್ಷ ಶಿಕ್ಷಕರ ಅಗತ್ಯವಿದೆ ಎಂದು ಈ ವರದಿ ಮುನ್ನಂದಾಜು ಮಾಡುತ್ತದೆ.

#### ರಾಜ್ಯಗಳ ಸಾಧನೆ (ಮಹಿಳಾ ಶಿಕ್ಷಕರು):

- ತ್ರಿಪುರಾ ರಾಜ್ಯದಲ್ಲಿ ಕನಿಷ್ಠ ಸಂಖ್ಯೆಯಲ್ಲಿ ಶಿಕ್ಷಕಿಯರಿದ್ದರೆ, ನಂತರದ ಸ್ಥಾನಗಳನ್ನು ಕ್ರಮವಾಗಿ ಅಸ್ಸಾಂ, ಜಾರ್ಖಂಡ್ ಮತ್ತು ರಾಜಾಸ್ಥಾನ ಪಡೆದುಕೊಂಡಿವೆ.
- ಚಂಡೀಗಢದಲ್ಲಿ ಹೆಚ್ಚು ಸಂಖ್ಯೆಯ ಶಿಕ್ಷಕಿಯರಿದ್ದು, ನಂತರದ ಸ್ಥಾನಗಳನ್ನು ಗೋವಾ, ದೆಹಲಿ ಮತ್ತು ಕೇರಳ ರಾಜ್ಯಗಳು ಪಡೆದುಕೊಂಡಿವೆ.

#### ಖಾಸಗಿ ವಲಯಗಳಲ್ಲಿ ಶಿಕ್ಷಕರು:

- ಖಾಸಗಿ ವಲಯಗಳಲ್ಲಿ ಶಿಕ್ಷಕರ ನೇಮಕಾತಿಯ ಅನುಪಾತವು 2013–14 ರಲ್ಲಿ ಇದ್ದ 21% ರಿಂದ 2018–19

ರಲ್ಲಿ 35% ಗೆ ಏರಿಕೆಯಾಗಿದೆ. ಶಿಕ್ಷಣದ ಹಕ್ಕು ಕಾಯ್ದೆಯು ವಿದ್ಯಾರ್ಥಿ-ಶಿಕ್ಷಕ ಅನುಪಾತವು 1 ರಿಂದ 5ನೇ ತರಗತಿಯವರೆಗೆ 30:1 ಮತ್ತು ಉನ್ನತ ತರಗತಿಗಳಲ್ಲಿ 35:1 ಇರಬೇಕೆಂದು ಸೂಚಿಸುತ್ತದೆ.

**ಡಿಜಿಟಲ್ ಸೌಲಭ್ಯಗಳ ಕೊರತೆ:**

- ದೇಶಾದ್ಯಂತ ಕಂಪ್ಯೂಟರ್ ಸಾಧನಗಳ (ಡೆಸ್ಕ್‌ಟಾಪ್ ಅಥವಾ ಲ್ಯಾಪ್‌ಟಾಪ್) ಲಭ್ಯತೆ 22% ಇದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ಎಂದರೆ, 18% ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚು ಎಂದರೆ, 43% ಇದೆ.
- ಒಟ್ಟು ಶಾಲೆಗಳಲ್ಲಿ ಅಂತರ್ಜಾಲದ ಸಂಪರ್ಕ 19% ಇದ್ದು, ಗ್ರಾಮೀಣ ಪ್ರದೇಶದಲ್ಲಿ 14% ಮತ್ತು ನಗರ ಪ್ರದೇಶಗಳಲ್ಲಿ 42% ಇರುತ್ತದೆ.

**ನಿವ್ವಳ ದಾಖಲಾತಿ ಅನುಪಾತದಲ್ಲಿ (GER) ಏರಿಕೆ:**

- ಪ್ರಾಥಮಿಕ ಶಾಲೆಗಳಲ್ಲಿ 2001ರಲ್ಲಿ 81.6 ಇದ್ದ ಊಇಖ 2018-19 ರಲ್ಲಿ 93.03 ಗೆ ಮತ್ತು 2019-20 ರಲ್ಲಿ 102.1 ಗೆ ಏರಿಕೆಯಾಗಿದೆ. 2019-20 ರಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ಉಳಿಕೆ 74.6% ಆದರೆ ಪ್ರೌಢ ಹಂತದಲ್ಲಿ 59.6% ಇದೆ.

**ಶಿಫಾರಸ್ಸುಗಳು:**

- ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಬೇಕು.
- ಈಶಾನ್ಯ ರಾಜ್ಯಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಮಹತ್ವಾಕಾಂಕ್ಷೆ ಜಿಲ್ಲೆಗಳಲ್ಲಿ ಕಾರ್ಯಸ್ಥಳದ ಪರಿಸ್ಥಿತಿಯನ್ನು ಸುಧಾರಿಸಬೇಕು.
- ದೈಹಿಕ ಶಿಕ್ಷಣ, ಸಂಗೀತ, ಕಲೆ, ವೃತ್ತಿ ಶಿಕ್ಷಣ, ಅಂಗನವಾಡಿ ಮತ್ತು ವಿಶೇಷ ಶಿಕ್ಷಣ ವಿಷಯಗಳಲ್ಲಿ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಬೇಕು.
- ಶಿಕ್ಷಕರ ವೃತ್ತಿ ಸ್ವಾಯತ್ತತೆಗೆ ಮಹತ್ವ ನೀಡಬೇಕು.
- ಶಿಕ್ಷಕರಿಗಾಗಿ ವೃತ್ತಿ ಮಾರ್ಗಗಳನ್ನು ರೂಪಿಸಬೇಕು.
- ಶಿಕ್ಷಕರಿಗೆ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ತರಬೇತಿಗಳನ್ನು ಕೊಡಬೇಕು.
- ಪರಸ್ಪರ ಬಾಧ್ಯತೆಯ ಆಧಾರದಲ್ಲಿ ಸಮಾಲೋಚನಾ ಸಭೆಗಳ ಮೂಲಕ ಬೋಧನಾ ಆಡಳಿತವನ್ನು ಅಭಿವೃದ್ಧಿಪಡಿಸಬೇಕು.

ಈ ರೀತಿ ಸಮೀಕ್ಷೆಗಳನ್ನು ನಡೆಸಿ, ವರದಿಯನ್ನು ತಯಾರಿಸಲಾಗುತ್ತದೆ. ಸಮೀಕ್ಷೆಯಲ್ಲಿ ದೊರೆತ ದತ್ತಾಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಫಲಿತಾಂಶವನ್ನು ನೀಡಲಾಗುತ್ತದೆ. ಹಾಗೆಯೇ ಶಿಫಾರಸ್ಸುಗಳನ್ನು ಮಾಡಲಾಗುತ್ತದೆ. ಶಿಫಾರಸ್ಸುಗಳ ಅನ್ವಯ ಮುಂದಿನ ಯೋಜನೆಗಳನ್ನು ರೂಪಿಸಲಾಗುತ್ತದೆ ಮತ್ತು ಅನುಷ್ಠಾನಗೊಳಿಸಲಾಗುತ್ತದೆ.

## 5.5 ಪರಿಸಮಾಪ್ತಿ

ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶ ವಿಶ್ಲೇಷಣೆಯು ಶೈಕ್ಷಣಿಕ ಚಟುವಟಿಕೆಗಳ ಬಲವರ್ಧನೆಯಲ್ಲಿ ಒಂದು ಪ್ರಮುಖ ಸಾಧನ ತಂತ್ರವಾಗಿದೆ. ಈ ಹಿನ್ನೆಲೆಯಲ್ಲಿ ಸಣ್ಣ ವ್ಯಾಪ್ತಿಯ ಅಥವಾ ವಿಶಾಲ ವ್ಯಾಪ್ತಿಯ ಯೋಜನೆಗಳ ಅನುಷ್ಠಾನದಲ್ಲಿ ಸಮೀಕ್ಷೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ. ಕಾಲಾನಂತರದಲ್ಲಿ, ಶೈಕ್ಷಣಿಕ ಸಮೀಕ್ಷೆಗಳು ಶೈಕ್ಷಣಿಕ ಅಂಕಿ ಅಂಶಗಳನ್ನು ಸಂಗ್ರಹಿಸುವಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುವ ಒಂದು ಮೂಲ ಅಧ್ಯಯನದ ವಿಧಾನವಾಗಿ ಬೆಳೆದು ಬಂದಿದೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗುವ ಸಮೀಕ್ಷೆಗಳಲ್ಲಿ ಶಾಲಾಶಿಕ್ಷಣದ ಶೈಕ್ಷಣಿಕ ಅಂಕಿ ಅಂಶಗಳನ್ನು ಸಂಗ್ರಹಿಸಿ ದತ್ತಾಂಶವನ್ನು ವಿಶ್ಲೇಷಣೆ ಮಾಡುವುದರೊಂದಿಗೆ ಅದು ಗುರುತಿಸಿರುವ ಶೈಕ್ಷಣಿಕ ಕಾಳಜಿಯನ್ನು ಹೊಸ ಕ್ಷೇತ್ರಗಳ ಹೊಸ ಸನ್ನಿವೇಶಗಳಲ್ಲಿ ಬಳಸಿಕೊಳ್ಳಲು ಅವಕಾಶವಾಗುತ್ತದೆ. ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶಿಕ್ಷಣದ ಗುಣಮಟ್ಟವನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವುದು ಮತ್ತು ಅವುಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮೀಕ್ಷೆಗಳನ್ನು ಕೈಗೊಳ್ಳಲಾಗುತ್ತದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಕ್ಷೇತ್ರದ ಒಳನೋಟಗಳನ್ನು ಸಂಗ್ರಹಿಸಿ ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು ಹಲವಾರು ಸಮೀಕ್ಷೆಗಳು ನಡೆಯುತ್ತವೆ. ಶೈಕ್ಷಣಿಕ ಅನುಭವದ ವಿವಿಧ ಅಂಶಗಳನ್ನು ಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಂದ

ಮೌಲ್ಯಯುತವಾದ ಪ್ರತಿಕ್ರಿಯೆಯನ್ನು ಸಂಗ್ರಹಿಸಲು ಶೈಕ್ಷಣಿಕ ಸಮೀಕ್ಷೆಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶ ವಿಶ್ಲೇಷಣೆಯು ಶಿಕ್ಷಣ ವ್ಯವಸ್ಥೆಯ ಬೇರುಗಳ ಸ್ಥಾನದಲ್ಲಿರುವ ತರಗತಿ ಶಿಕ್ಷಕರಿಂದ ಹಿಡಿದು ವಿಶಾಲವಾಗಿ ವ್ಯಾಪಿಸಿರುವ ಹಲವಾರು ಶಾಖೆಗಳ ಅಧಿಕಾರಿ ವೃಂದ ಮತ್ತು ಅನುಪಾಲನಾ ಆಧಿಕಾರಿಗಳವರೆಗೆ ಎಲ್ಲರಿಗೂ ಒಂದಲ್ಲಾ ಒಂದು ರೀತಿಯಲ್ಲಿ ಸಹಾಯವಾಗುತ್ತದೆ. ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸಲು, ಹೊಸ ಹೊಸ ಬೋಧನಾ–ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳಲು, ಉತ್ತಮ ಕ್ರಿಯಾಯೋಜನೆಗಳನ್ನು ರೂಪಿಸಲು ತರಗತಿ ಶಿಕ್ಷಕರಿಗೆ ನೆರವಾದರೆ, ಉತ್ತಮ ನಾಯಕತ್ವವನ್ನು ಬೆಳೆಸಿಕೊಳ್ಳುವಲ್ಲಿ ಆಡಳಿತವನ್ನು ಉತ್ತಮಪಡಿಸಲು, ಶಾಲಾ ಪರಿಸರದಲ್ಲಿ ಬದಲಾವಣೆಗಳನ್ನು ತರಲು, ಶಾಲೆಯ ಸಮಸ್ಯೆಗಳನ್ನು ಅರಿಯಲು ಸಮೀಕ್ಷೆಗಳು ಮತ್ತು ಅದರ ದತ್ತಾಂಶ ವಿಶ್ಲೇಷಣೆ ವರದಿಯು ಸಹಾಯ ಮಾಡುತ್ತದೆ. ಬ್ಲಾಕ್ ಹಂತದ ಅಧಿಕಾರಿಗಳಿಗೆ, ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕವಾಗಿ ತಾಲ್ಲೂಕು ಯಾವ ಹಂತದಲ್ಲಿದೆ? ಬ್ಲಾಕ್‌ನಲ್ಲಿ ಶಾಲೆಗಳ ಶ್ರೇಣೀಕರಣವನ್ನು ಮಾಡುವುದು ಹೇಗೆ? ತಾಲ್ಲೂಕಿನಲ್ಲಿ ಮಕ್ಕಳ ದಾಖಲಾತಿ–ಹಾಜರಾತಿಯನ್ನು ಹೆಚ್ಚಿಸುವುದು ಹೇಗೆ? ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲು ಸಮೀಕ್ಷೆ ಮತ್ತು ದತ್ತಾಂಶ ವಿಶ್ಲೇಷಣೆ ನೆರವಾಗುತ್ತವೆ. ಇದೇ ರೀತಿ ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಯಲು, ಶಿಕ್ಷಣ ಕ್ಷೇತ್ರದ ವಾಸ್ತವಾಂಶಗಳನ್ನು ಅರಿತುಕೊಳ್ಳಲು ಸಮೀಕ್ಷೆಗಳು ಅಗತ್ಯವಾಗಿವೆ. ಶಿಕ್ಷಣದ ಗುಣಮಟ್ಟದ ಮೇಲೆ ಪ್ರಭಾವ ಬೀರುವ ಅಂಶಗಳಾದ ಶಿಕ್ಷಕರ ಗುಣಮಟ್ಟ, ಕಲಿಕಾ ಸಂಪನ್ಮೂಲಗಳು, ತರಗತಿಯ ಗಾತ್ರ ಮತ್ತು ಕಲಿಕೆಯ ಪರಿಸರದಂತಹ ಅಂಶಗಳನ್ನು ಸಮೀಕ್ಷೆಗಳು ಪರಿಶೀಲಿಸುತ್ತವೆ. ಸಮೀಕ್ಷೆಗಳನ್ನು ನಡೆಸಿದಾಗ ಪ್ರತಿಸ್ಪಂದಕರು ತಮ್ಮ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಲಹೆಗಳನ್ನು ಸಹ ನೀಡಬಹುದಾಗುತ್ತದೆ. ಸಮೀಕ್ಷೆಗಳು ಸುಧಾರಣೆಯ ಅಗತ್ಯವಿರುವ ನಿರ್ದಿಷ್ಟ ವಿಷಯಗಳನ್ನು ಪರಿಶೋಧಿಸುತ್ತವೆ. ಕಲಿಕೆಯ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಏಕೀಕರಣ, ಬೋಧನಾ ವಿಧಾನಗಳು, ವಿಶೇಷ ಅವಶ್ಯಕತೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಬೆಂಬಲ ಮತ್ತು ವಿದ್ಯಾರ್ಥಿ ತೊಡಗಿಸಿಕೊಳ್ಳುವಿಕೆ, ಅಷ್ಟೇ ಅಲ್ಲದೇ ಶಿಕ್ಷಣದ ಸುಧಾರಣೆ, ಪಠ್ಯೇತರ ಚಟುವಟಿಕೆಗಳು ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಪೋಷಕರ ಪಾತ್ರವನ್ನು ಕೇಂದ್ರೀಕರಿಸುವ ಉಪಕ್ರಮಗಳು ಅಥವಾ ಕಾರ್ಯಕ್ರಮಗಳ ಬಗ್ಗೆ ಪ್ರತಿಸ್ಪಂದಕರನ್ನು ಕೇಳಲಾಗುತ್ತದೆ. ಸಮೀಕ್ಷೆಗಳು ಶಾಲಾ ಆಡಳಿತ ಮತ್ತು ಮಧ್ಯಸ್ಥಗಾರರ ನಡುವಿನ ಸಂವಹನ, ಕಲಿಕೆಯ ಸಂಪನ್ಮೂಲಗಳ ಲಭ್ಯತೆ ಮತ್ತು ಶಿಕ್ಷಣದ ಗುಣಮಟ್ಟದ ಕುರಿತು ಒಳನೋಟಗಳಿಗಾಗಿ ಕೈಗೊಳ್ಳಲಾಗುತ್ತದೆ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಸೇರಿದಂತೆ ವಿವಿಧ ಶ್ರೇಣಿಯ ಪ್ರತಿಸ್ಪಂದಕರಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸುವ ಮೂಲಕ, ಪ್ರಸ್ತುತ ಶಿಕ್ಷಣದ ಸ್ಥಿತಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ಮತ್ತು ಸುಧಾರಣೆಗೆ ಅವಕಾಶಗಳನ್ನು ಗುರುತಿಸುವ ಉದ್ದೇಶವನ್ನು ಸಮೀಕ್ಷೆಗಳು ಹೊಂದಿವೆ. ಶಿಕ್ಷಣದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶ ವಿಶ್ಲೇಷಣೆ ಶಿಕ್ಷಣ ಸಂಸ್ಥೆಗಳಿಗೆ ತಮ್ಮ ಕಾರ್ಯತಂತ್ರಗಳನ್ನು ರೂಪಿಸಲು ಮತ್ತು ಅವರ ಕೊಡುಗೆಗಳನ್ನು ಹೆಚ್ಚಿಸಲು ಅಮೂಲ್ಯವಾದ ಸಾಧನವಾಗಿ ಕಾರ್ಯನಿರ್ವಹಿಸುತ್ತವೆ. ಕೊನೆಯಲ್ಲಿ, ಶಿಕ್ಷಣದ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವಲ್ಲಿ ಮತ್ತು ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಮೀಕ್ಷೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಮೀಕ್ಷೆಯಲ್ಲಿ ಭಾಗವಹಿಸುವ ಮೂಲಕ, ಪ್ರತಿಸ್ಪಂದಕರು ತಮ್ಮ ಒಳನೋಟಗಳು ಮತ್ತು ಅಭಿಪ್ರಾಯಗಳನ್ನು ನೀಡಲು ಅವಕಾಶವನ್ನು ಹೊಂದಿದ್ದಾರೆ, ಅಂತಿಮವಾಗಿ ಶಿಕ್ಷಣದಲ್ಲಿ ಉಜ್ವಲ ಭವಿಷ್ಯಕ್ಕೆ ಕಾರಣರಾಗುತ್ತಾರೆ.

## 5.6 ಮೌಲ್ಯಮಾಪನ ಪ್ರಶ್ನೆಗಳು


1. ರಾಷ್ಟ್ರೀಯ ಸಾಧನಾ ಸಮೀಕ್ಷೆ ಎಷ್ಟು ವರ್ಷಗಳಿಗೊಮ್ಮೆ ಕೈಗೊಳ್ಳಲಾಗುತ್ತದೆ?
2. ASER ನ ವಿಸ್ತೃತ ರೂಪವೇನು?
3. ಸಮೀಕ್ಷಾ ವಿಧಾನಗಳನ್ನು ಹೆಸರಿಸಿ.
4. ದತ್ತಾಂಶಗಳನ್ನು ವಿಶ್ಲೇಷಿಸುವ ಸಾಧನಗಳನ್ನು ಹೆಸರಿಸಿ.
5. ಎಫ್.ಎಲ್.ಎಸ್. ಸಮೀಕ್ಷೆಯಲ್ಲಿ ಯಾವ ವಿಷಯಗಳನ್ನು ಪರಿಗಣಿಸಲಾಗುತ್ತದೆ?
6. ಆನ್ ಲೈನ್ ಸಮೀಕ್ಷಾ ವಿಧಾನದ ಮಿತಿಗಳೇನು ?
7. ಫೋಕಸ್ ಗುಂಪು ಚರ್ಚೆಗಳಿಂದಾಗುವ ಪ್ರಯೋಜನಗಳೇನು?
8. SEAS ಮೌಲ್ಯಾಂಕನ ಪರೀಕ್ಷೆ ಯಾವ ತರಗತಿಗಳಿಗೆ ಮಾಡಲಾಗುತ್ತದೆ?
9. ದತ್ತಾಂಶ ಸಂಗ್ರಹಣೆಯಲ್ಲಿ ಗೂಗಲ್ ಶೀಟ್ ಅನ್ನು ಹೇಗೆ ಬಳಸಿಕೊಳ್ಳುವಿರಿ?
10. ಸಮೀಕ್ಷಾ ವಿಧಾನದಲ್ಲಿ ಸಮೀಕ್ಷೆ ಮಾಡುವಾಗ ನೀವು ಆಯ್ಕೆ ಮಾಡಿಕೊಳ್ಳುವ ಎರಡು ಕ್ಷೇತ್ರಗಳನ್ನು ತಿಳಿಸಿ.
11. ಮಾಹಿತಿ ಸಂಗ್ರಹಣೆಯಲ್ಲಿ ಸಂದರ್ಶನದ ಮಿತಿಗಳೇನು?

12. ಒಂದು ಶಾಲೆಯಲ್ಲಿರುವ ಭೌತಿಕ ಸಂಪನ್ಮೂಲಗಳ ಲಭ್ಯತೆಯನ್ನು ಅರಿಯಲು ಒಂದು ತಪಶೀಲು ಪಟ್ಟಿಯನ್ನು ತಯಾರಿಸಿ.
13. ದತ್ತಾಂಶಗಳನ್ನು ಪ್ರತಿನಿಧಿಸುವಾಗ ನಕ್ಷೆಗಳ ಪ್ರಾಮುಖ್ಯತೆಯನ್ನು ವಿವರಿಸಿ.
14. ಶಾಲಾ ಸಿದ್ಧಿಯಲ್ಲಿ ಮೌಲ್ಯಮಾಪನ ಮಾಡುವ ಕ್ಷೇತ್ರಗಳನ್ನು ಹೆಸರಿಸಿ.
15. GER ಮತ್ತು NER ಇವುಗಳಲ್ಲಿ ಯಾವುದು 100 ಕ್ಕಿಂತ ಹೆಚ್ಚಾಗಿರಬಹುದು? ಏಕೆ?
16. ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಪರೀಕ್ಷಿಸಲು ನಡೆಸಿದ ಅಧ್ಯಯನ ಯಾವುದು?
17. NAS ಸಮೀಕ್ಷೆಯನ್ನು ಯಾವ ತರಗತಿಗಳಿಗೆ ನಡೆಸಲಾಗುತ್ತದೆ?
18. ದತ್ತಾಂಶಗಳನ್ನು ಸಂಗ್ರಹಿಸುವ ಯಾವುದಾದರೂ ಎರಡು ತಂತ್ರಗಳನ್ನು ಹೆಸರಿಸಿ.
19. ಸಮೀಕ್ಷಾ ವಿಧಾನದಿಂದ ಮಾಹಿತಿ ಸಂಗ್ರಹಣೆ ಮಾಡಬಹುದಾದ ಎರಡು ಕ್ಷೇತ್ರಗಳನ್ನು ಹೆಸರಿಸಿ.
20. ಸಮೀಕ್ಷಾ ವರದಿಯನ್ನು ತಯಾರಿಸುವಾಗ ನೀವು ಅನುಸರಿಸುವ ಹಂತಗಳನ್ನು ಹೆಸರಿಸಿ.

## ಮಾಡ್ಯೂಲ್ ರಚನೆಗೆ ಬಳಸಿಕೊಂಡ ಆಕರಗಳು:




- Wikipedia
- Introduction to Educational Research-K.V. Rao
- NAS 2021 State report
- CSAS Report
- FLS-NAS State report
- https://ncert.nic.in//fls_statereport
- https://asercentre.org
- https://en.wikipedia.org/wiki/SPSS
- https://www.surveymonkey.com/mp/analyze/
- https://wcd.nic.in/sites/default/files/Guideline.pdf
- https://dsel.education.gov.in/fls
- Data Collection Methods and Tools for Research; A Step-by-Step Guide to Choose Data
- Collection Technique for Academic and Business Research Projects-Authors Hamed
- Taherdoost University Canada West

**ಪ್ರಕ್ರಿಯೆ:**

| ಕ್ರ.ಸಂ | ತರಬೇತಿಯ ಪ್ರಮುಖ ಅಂಶಗಳು | ಚಟುವಟಿಕೆಗಳು | ಸಂಪನ್ಮೂಲಗಳು, ವೀಡಿಯೋ, ಫೋಟೋಗಳು, ಪಿ.ಪಿ.ಟಿ., ಚಿಂತನಶೀಲ ಪ್ರಶ್ನೆಗಳು, ವೀಡಿಯೋ ಲಿಂಕ್‌ಗಳು ಇತ್ಯಾದಿ |
|---|---|---|---|
| 1 | ಪೂರ್ವ ಪರೀಕ್ಷೆ | | ಪ್ರಶ್ನೆಪತ್ರಿಕೆ/ಗೂಗಲ್ ಫಾರಂ |
| 2 | ಪರಿಕಲ್ಪನಾ ಟಿಪ್ಪಣಿ | i. ವಿವಿಧ ಶೈಕ್ಷಣಿಕ ಸಮೀಕ್ಷೆಗಳನ್ನು ಪಟ್ಟಿ ಮಾಡುವುದು<br>ii. 2. ಗುಂಪುಗಳಲ್ಲಿ ಪ್ರಸ್ತುತಗೊಳಿಸುವುದು. | https://nas.gov.in<br>https://ncert.nic.in//fls_statereport<br>https://asercentre.org |
| 3 | ವ್ಯಾಪ್ತಿ | ಗುಂಪು ಚರ್ಚೆ | ಪಿ.ಪಿ.ಟಿ |
| 4 | ಉದ್ದೇಶಗಳು | ಶಿಬಿರಾರ್ಥಿಗಳೊಂದಿಗೆ ಅಂತರ್ ಕ್ರಿಯಾತ್ಮಕ ಸಂವಾದ | ಪಿ.ಪಿ.ಟಿ |
| 5 | ನಿರೀಕ್ಷಿತ ಕಲಿಕಾ ಫಲಗಳು | ನಿರೀಕ್ಷಿತ ಕಲಿಕಾ ಫಲಗಳ ಬಗ್ಗೆ ಮನಮಂಥನ (Brain Storming) | ಕಲಿಕಾ ಫಲಗಳ ಕಾರ್ಡ್ |
| 6 | ವಿವರಣಾತ್ಮಕ ಅಂಶಗಳು | i. ಶೈಕ್ಷಣಿಕ ಸಮೀಕ್ಷೆಗಳ ಅರ್ಥ<br>ii. ಗುರಿಗಳು ಮತ್ತು ಉದ್ದೇಶಗಳು<br>iii. ವ್ಯಾಪ್ತಿ<br>iv. ಶೈಕ್ಷಣಿಕ ಸಮೀಕ್ಷೆಗಳ ಹಿನ್ನೆಲೆ<br>v. ಶೈಕ್ಷಣಿಕ ಸಮೀಕ್ಷೆ ಅಧ್ಯಯನದ ವಿಧಗಳು<br>vi. ವಿಧಾನಗಳು<br>vii. ಅವಲೋಕನ<br>viii. ದತ್ತಾಂಶ ಸಂಗ್ರಹಣೆ<br>ix. ದತ್ತಾಂಶಗಳ ವಿಶ್ಲೇಷಣೆ ಮತ್ತು ತಂತ್ರಜ್ಞಾನ ಬಳಕೆ<br>x. ವರದಿ ತಯಾರಿಕೆ | ಗುಂಪು ಚರ್ಚೆ<br><br>ಪ್ರಾತ್ಯಕ್ಷಿಕೆ ಶಿಬಿರಾರ್ಥಿಗಳಿಂದ ಶಿಬಿರಾರ್ಥಿಗಳಿಂದ ಪ್ರಶ್ನಾವಳಿ ಮತ್ತು ದರ್ಜಾಮಾಪನಿ ತಯಾರಿ ವಿವಿಧ ದತ್ತಾಂಶಗಳನ್ನು ವಿಶ್ಲೇಷಿಸುವುದು |
| 7 | ಮೌಲ್ಯಮಾಪನ | i. ಪ್ರಶ್ನಾವಳಿ<br>ii. ಸಾಫಲ್ಯ ಪರೀಕ್ಷೆ<br>iii. ರಸಪ್ರಶ್ನೆ | ಪ್ರಶ್ನೆಗಳ ಕೋಶ, ಗೂಗಲ್ ಫಾರಂ, ಪಿ.ಪಿ.ಟಿ |

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836–2441129
ಇ–ಮೇಲ್ : sislepdirector.dwd@gmail.com